ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳು

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಐಶ್ವರ್ಯಮ್ಮ ಎಂ.

ಮಾರ್ಗದರ್ಶಕರು

ಡಾ.ಕಲವೀರ ಮನ್ವಾಚಾರ

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫

ದಾವಣಗೆರೆ ಜಿಲ್ಲೆಯ
ಶಾಸನೋಕ್ತ ಮತ್ತು ಜನಪದ ಐತಿಹ್ಯಗಳು

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಐಶ್ವರ್ಯಮ್ಮ ಎಂ.

ಮಾರ್ಗದರ್ಶಕರು
ಡಾ.ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ಮಾರ್ಗದರ್ಶಕರ ದೃಢೀಕರಣ

ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳು ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ಐಶ್ವರ್ಯಮ್ಮ ಎಂ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಕಲವೀರ ಮನ್ವಾಚಾರ
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೦. ೨. ೨೦೧೪

ಘೋಷಣಾ ಪತ್ರ

ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳು ಎಂಬ ಸಂಪ್ರಬಂಧವನ್ನು **ಡಾ.ಕಲವೀರ ಮನ್ವಚಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಐಶ್ವರ್ಯಮ್ಮ ಎಂ.
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 30/07/2015

ಪರಿವಿಡಿ

ಅಧ್ಯಾಯ ಒಂದು ೧–೬

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವಿಧಾನ

ಅಧ್ಯಾಯ ಎರಡು ೭–೧೬

ಐತಿಹ್ಯಗಳ ಅರ್ಥ, ವ್ಯಾಖ್ಯಾನ ಮತ್ತು ಬೆಳವಣಿಗೆ

೨.೧. ಐತಿಹ್ಯದ ಅರ್ಥ

೨.೨. ಐತಿಹ್ಯದ ವ್ಯಾಖ್ಯಾನ

೨.೩. ಐತಿಹ್ಯದ ಬೆಳವಣಿಗೆ

ಅಧ್ಯಾಯ ಮೂರು ೮–೩೪

ಶಾಸನೋಕ್ತ ಐತಿಹ್ಯಗಳು

೩.೧. ಶಾಸನದಲ್ಲಿ ಉಚ್ಚಂಗಿದುರ್ಗದ ಉಚ್ಚಂಗಮ್ಮ

೩.೧.೧. ಪುರಾಣದಲ್ಲಿ, ಜನಪದೀಯ ಅಂಶಗಳಲ್ಲಿ ಉಚ್ಚಂಗಮ್ಮ

೩.೧.೨. ಉಚ್ಚಂಗಿ ದುರ್ಗವನ್ನು ಆಳಿದ ರಾಜಸಂತತಿಗಳು

೩.೨. ಶಾಸನದಲ್ಲಿ ಹರಿಹರದ ಹರಿಹರೇಶ್ವರ

ಅಧ್ಯಾಯ ನಾಲ್ಕು ೩೫–೪೮

ಇತರೆ ದಾಖಲೆಗಳಲ್ಲಿ ಐತಿಹ್ಯಗಳು

೪.೧. ಕೈಫಿಯತ್ತುಗಳಲ್ಲಿ ಐತಿಹ್ಯಗಳು

೪.೧.೧. ಸೂಳೆಕೆರೆ ಕೈಫಿಯತ್ತು

೪.೧.೨. ಸಂತೇಬೆನ್ನೂರು ಕೈಫಿಯತ್ತು

೪.೧.೩. ಹರಿಹರದ ಕೈಫಿಯತ್ತು

ಅಧ್ಯಾಯ ಐದು ೪೯–೭೯

ಜನಪದ ಐತಿಹ್ಯಗಳು

೫.೧. ಚನ್ನಗಿರಿ ತಾಲೂಕಿನ ಜನಪದ ಐತಿಹ್ಯಗಳು

೫.೨. ದಾವಣಗೆರೆ ತಾಲೂಕಿನ ಜನಪದ ಐತಿಹ್ಯಗಳು

೫.೩. ಹರಪನಹಳ್ಳಿ ತಾಲೂಕಿನ ಜನಪದ ಐತಿಹ್ಯಗಳು

೫.೪. ಹರಿಹರ ತಾಲೂಕಿನ ಜನಪದ ಐತಿಹ್ಯಗಳು

೫.೫. ಹೊನ್ನಾಳಿ ತಾಲೂಕಿನ ಜನಪದ ಐತಿಹ್ಯಗಳು

೫.೬. ಜಗಳೂರು ತಾಲೂಕಿನ ಜನಪದ ಐತಿಹ್ಯಗಳು

ಅಧ್ಯಾಯ ಆರು ೮೦–೮೬

ಸಮಾರೋಪ

ಅನುಬಂಧಗಳು ೨೭–೯೨


೧. ನಕ್ಷೆಗಳು

೨. ಆಕರಗ್ರಂಥಗಳು

೩. ವಕ್ತೃಗಳ ವಿವರ

೪. ಛಾಯಾಚಿತ್ರಗಳು

ದಾವಣಗೆರೆ ಜಿಲ್ಲೆ



DEVANGERE
DISTRICT MAP
N
Srigarthota
HARPANAHALLI
BELLARY
To Haveri
Neelagunda
Mattihalli
NH-4
Tavargundi
Ardikere
Sokke
HAVERI
Anaburu
Duggavatti
Uchchangipura
HARIHAR
Anaji
Jagalur
Devikere
Vasana
DEVANGERE
Hadadi
Kurki
Hebbalu
Malebennur
NH-4
Mayakonda
To Chitradurga
HONNALI
Matti
CHITTRADURGA
Nyamati
Sasvihulli
Sante Bennur
Savalanga
LEGEND
National Highway
Major Road
Railway
District Boundary
State Boundary
River
District HQ
Other Town
Major Town
CHANNAGIRI
SHIMOGA
Jaladalu
Ubrani
Map not to Scale
Copyright © 2013 www.mapsofindia.com
(Updated on 20th February 2013)
CHIKMAGALUR

ದಾವಣಗೆರೆ ತಾಲೂಕು


ROAD NETWORK - MAP OF DAVANGERE TALUK



PREPARED BY:
Dist. DIST. NRDMS Centre,
Z.P. Davangere

ಚನ್ನಗಿರಿ ತಾಲೂಕು

ROAD NETWORK MAP OF CHANNAGIRI TALUK




ಹರಪನಹಳ್ಳಿ ತಾಲೂಕು



PRIMARY HELTH CENTRE MAP OF HARAPANAHALLI TALUK
N
Harkanahalu
Chigateri
Mattihalli
Sasavihalli
Kunchuru
Nilagunda
Halavagalu
Machihalli
Gundugatti
Arasikere
Telagi
Punabagatta
madihalli
Kanchikere
Uchangidurga
Hire megalageri
PREPARED BY
NRDMS Centre Z.P Davanagere
Source: SOI Toposheet
0 5 10
kilometers
LEGEND
Primary Helth Centre - (PHC)
Boundry line

ಹರಿಹರ ತಾಲೂಕು

GRAMA PANCHAYATH MAP OF HARIHARA TALUK



PREPARED BY :
DIST.NRDMS Centre, ZP
Davangere

ಜಗಳೂರು ತಾಲೂಕು



ROAD NETWORK MAP OF JAGALUR TALUK
KUDLIGI TALUK
HARAPANAHALLI TALUK
DAVANGERE TALUK
CHALLAKERE TALUK
CHITRADURGA TALUK
N
W
E
S
0
5
10
kilometres
LEGEND
Taluk Boundary
GP - Boundary
National Highway
State Highway
MDR - Road
REPARED AT:
IST. NRDMS Centre,
.P.Davangere

ಹೊನ್ನಳ್ಳಿ ತಾಲೂಕು


PRIMARY HELTH CENTRE MAP OF HONNALI TALUK
N
Kulambi
Kathige
Honnali
Govinakovi
Sasavehalli
Nyamati
Vaderahathur
Sovalanga
LEGEND
Primary Helth Centre - (PHC)
Boundry line
0 5 10
kilometers
PREPARED BY
NPDMS Centre Z.P. davanagere
Source SOI Toposheet

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ಒಂದು ಪ್ರದೇಶಕ್ಕೆ ತನ್ನದೇ ಆದ ಪ್ರಾಕೃತಿಕ ಸ್ವರೂಪವಿರುವಂತೆ ಇತಿಹಾಸವೂ ಇರುತ್ತದೆ. ಇತಿಹಾಸವೆಂದರೆ ಮಾನವ ಜಗತ್ತಿನಲ್ಲಿ ಸಂಭವಿಸಿದ ಘಟನಾವಳಿಗಳ ಸುಸಂಗತವಾದ ವೃತ್ತಾಂತ. ನಮ್ಮ ಸಮಾಜ ಆಕಾರ ಪಡೆದಿರುವುದು ಮಾನವನ ಸುದೀರ್ಘವಾದ ಆಲೋಚನೆಗಳಿಂದ ಇದರ ವ್ಯವಸ್ಥಿತ ಅಧ್ಯಯನವೇ ಇತಿಹಾಸ. ಅದು ಹೀಗೆ ಇತ್ತು ಎಂದು ಹೇಳುವುದನ್ನು ಇತಿಹಾಸ ಕಥನವೆನ್ನುವರು. ಈ ಇತಿಹಾಸವನ್ನು ಶಾಸನ ಮತ್ತು ಜನಪದ ಐತಿಹ್ಯಗಳ ಹಿನ್ನೆಲೆ ಯಲ್ಲಿ ದಾವಣಗೆರೆ ಜಿಲ್ಲೆಯ ಇತಿಹಾಸ ತಿಳಿಸುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶ.

ಎಲ್ಲೆಲ್ಲಿ ಮಾನವ ಸಂಸ್ಕೃತಿಯ ನೆಲೆಗಳಿವೆಯೋ ಅಲ್ಲೆಲ್ಲಾ ಐತಿಹ್ಯಗಳು ಕಂಡುಬರುತ್ತದೆ. ಐತಿಹ್ಯಗಳು ಇತಿಹಾಸ ಅಥವಾ ವಾಸ್ತವ ಸಂಗತಿಗಳನ್ನಾಧರಿಸಿದ ಜನಪ್ರಿಯ ಆಯಾಮದ ಅಭಿವ್ಯಕ್ತಿಗಳು ಎನ್ನಬಹುದು. ಇವು ಶೈಕ್ಷಣಿಕ ನೆಲೆಯಲ್ಲಿ ಚಾರಿತ್ರಿಕ ಶಿಸ್ತಿಗೊಳಪಟ್ಟ ಗ್ರಂಥಸ್ಥಗೊಳ್ಳದೆ ಕೇವಲ ಜನಸಮುದಾಯಗಳ ಮಧ್ಯೆಯೇ ಮೌಖಿಕ ರೂಪದಲ್ಲಿ ಹರಿದಾಡುವಂಥಾ ವೃತ್ತಾಂತಗಳು. ಇವು 'ಜನರ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆ ಗೊಳ್ಳುತ್ತವೆ.' ಐತಿಹ್ಯಗಳಲ್ಲಿ ಒಂದು ರೀತಿಯ ಪುರಾಣಗಳೂ, ದಂತಕಥೆಗಳು, ಗಾದೆ, ಒಗಟು, ಒಡಪು, ವದಂತಿಗಳು ಕಂಡುಬರುತ್ತವೆ. ಇವುಗಳು ವಸ್ತು, ಸ್ಥಳ, ವ್ಯಕ್ತಿ, ಪ್ರಾಣಿ, ದೈವ, ಕೋಟೆ, ಕಲ್ಲು, ಬಂಡೆ, ಹಳ್ಳ, ನದಿ ಯಾವುದು ಬೇಕಾದರೂ ಐತಿಹ್ಯಕ್ಕೆ ಆಧಾರವಾಗಬಹುದು. ಅವುಗಳು ಜನಪದರಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಐತಿಹ್ಯಗಳು ಮುಖ್ಯವಾಗಿ ಬುದ್ಧಿಗೆ ಜ್ಞಾನಕ್ಕೆ ಸಂಬಂಧಿಸಿವೆ. ಆದ್ದರಿಂದ ಅವುಗಳನ್ನು ಆಳವಾಗಿ ತಿಳಿದುಕೊಳ್ಳಬೇಕಾಗುತ್ತದೆ.

೧.೧. ಅಧ್ಯಯನದ ಉದ್ದೇಶ

ಪ್ರತಿಯೊಂದು ಅಧ್ಯಯನಕ್ಕೆ ತನ್ನದೇ ಆದ ಒಂದು ನಿರ್ದಿಷ್ಟ ಉದ್ದೇಶವಿರುತ್ತದೆ. ಉದ್ದೇಶವಿಲ್ಲದೇ ಯಾವ ಅಧ್ಯಯನವನ್ನು ಕೈಗೊಳ್ಳಲಾಗುವುದಿಲ್ಲ. ಹಾಗಾಗಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟವಾದ ಉದ್ದೇಶವಿದೆ. ದಾವಣಗೆರೆ ಜಿಲ್ಲೆಯು ಅನೇಕ ಪ್ರಾಚೀನ ಕುರುಹುಗಳನ್ನು ಹೊಂದಿರುವ ಪ್ರದೇಶವಾಗಿದೆ. ಇಲ್ಲಿ ಸಿಗುವ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳನ್ನು ಕುರಿತು ಇದುವರೆಗೆ ಸಮಗ್ರ ಅಧ್ಯಯನವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳನ್ನು ಕುರಿತು ಅಧ್ಯಯನಕ್ಕೆ ಒಳಪಡಿಸುವುದೇ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಲಿಖಿತವಾಗಿ ಏನನ್ನು ಬರೆಯಲಾಗುತ್ತಿದೆಯೋ ಅದನ್ನು ಐತಿಹ್ಯಗಳ ಮೂಲಕ ತಿಳಿಸುತ್ತಾರೆ. ಈ ಐತಿಹ್ಯಗಳು ಪುರಾಣಕಾಲದಿಂದಲೂ ಕತೆಯ ರೂಪ ಪಡೆಯುತ್ತಾ ಬೆಳಕಿಗೆ ಬಂದಿವೆ. ಇಂತಹ ಐತಿಹ್ಯಗಳು ಪುರಾಣ, ದಂತಕಥೆ, ಐತಿಹ್ಯ ಇವುಗಳು ಸ್ಥಳನಾಮದ ಬಗ್ಗೆ, ವ್ಯಕ್ತಿ ಇಲ್ಲವೇ ಪ್ರಾಣಿ, ಕೋಟೆ, ಒಂದು ದೈವ. ಇಂತಹವುಗಳನ್ನು ಇಟ್ಟುಕೊಂಡು ಕತೆಯ ರೂಪದಲ್ಲಿ ಎಣೆಯುತ್ತಾ ಅವುಗಳು ಒಂದು ಪ್ರದೇಶ ಅಥವಾ ಸ್ಥಳದಲ್ಲಿ ಐಕ್ಯಗೊಳ್ಳುತ್ತವೆ. ಅವು ಸುಳ್ಳಾಗಿರ ಬಹುದು, ನಿಜವಿರಬಹುದು ಅವುಗಳನ್ನು ಶಾಸ್ತ್ರೀಯವಾಗಿ ಅಧ್ಯಯನದಲ್ಲಿ ತೊಡಗಿಸಿ ಶಾಸನಗಳಲ್ಲಿ ಮತ್ತು ಜನಪದರಲ್ಲಿ ಹೇಗೆ ಬೆಳೆದು ಬಂದವು ಎಂಬುದನ್ನು ಲಭ್ಯವಿರುವ ಮಾಹಿತಿಗನುಸಾರವಾಗಿ ಈ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಅದೇ ರೀತಿ ಕೈಫಿಯತ್ತುಗಳು ಕೂಡ ಶಾಸನಗಳಲ್ಲಿ ಒಂದಾಗಿದ್ದು, ಅವುಗಳನ್ನು ಈ ಅಧ್ಯಾಯದಲ್ಲಿ ತೊಡಗಿಸಿಕೊಳ್ಳಲಾಗಿದ್ದು, ಇವುಗಳ ಮೂಲಕ ಸ್ಥಳನಾಮಗಳ ಬಗ್ಗೆ ತಿಳಿದುಕೊಳ್ಳಬಹುದು.

೧.೨. ಅಧ್ಯಯನದ ವ್ಯಾಪ್ತಿ

ಯಾವುದೇ ವಿಷಯ ತೆಗೆದುಕೊಳ್ಳಬೇಕಾದರೆ ಅದರ ವ್ಯಾಪ್ತಿ ಪ್ರಮುಖವಾಗಿ ತಿಳಿದಿರಬೇಕು. ಆ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಬೇಕು ಎಂದರೆ ವ್ಯಾಪ್ತಿ ಅಥವಾ ಅದರ ಎಲ್ಲೆ ಈ ಸಂಶೋಧನೆಗೆ ಮುಖ್ಯ.

ನನ್ನ ಅಧ್ಯಯನದ ಶಿಸ್ತು ಮೀರಿ ಹೋಗಬಾರದು ಎಂಬ ಉದ್ದೇಶಕ್ಕಾಗಿ ದಾವಣಗೆರೆಯನ್ನು ಒಳಪಡಿಸಿಕೊಂಡಿದ್ದೇನೆ. ಆದರೆ ಈ ರೀತಿಯ ಸೀಮಿತತೆ ಹಾಕಿಕೊಳ್ಳದೇ ಹೋದರೆ ಅಧ್ಯಯನ ಒಂದು ಶಿಸ್ತಿಗೆ ಒಳಪಡುವುದಿಲ್ಲ. ಆ ಕಾರಣಕ್ಕಾಗಿ ದಾವಣಗೆರೆ ಜಿಲ್ಲೆಯ ತಾಲೂಕುಗಳಾದ ಚನ್ನಗಿರಿ, ಹರಪನಹಳ್ಳಿ, ಹರಿಹರ, ಜಗಳೂರು, ಹೊನ್ನಾಳಿ ಮತ್ತು ದಾವಣಗೆರೆ ಸೇರಿ ಆರು

[illegible]

ತಾಲೂಕುಗಳಿಗೆ ಸಂಬಂಧಿಸಿದೆ. ಅಲ್ಲಿರುವ ಶಾಸನಗಳಲ್ಲಿ ಮತ್ತು ಜನಪದ ಐತಿಹ್ಯಗಳಲ್ಲಿ ಕಂಡುಬರುವ ಪುರಾಣಗಳು, ದಂತಕಥೆಗಳು, ಐತಿಹ್ಯಗಳು ಇವುಗಳು ಸ್ಥಳನಾಮ, ವ್ಯಕ್ತಿನಾಮ, ಪ್ರಾಣಿ, ಕೋಟೆ, ಗುಡಿ–ಗುಂಡಾರ, ಕಲ್ಲು, ಶಿಲೆ, ಬೆಟ್ಟ–ಗುಡ್ಡ ಇವುಗಳಲ್ಲಿರುವ ಐತಿಹ್ಯಗಳನ್ನು ಗುರುತಿಸುವುದು. ಇತಿಹಾಸ, ದಂತಕಥೆ, ಸಂಪ್ರದಾಯ, ಪುರಾಣ, ನಂಬಿಕೆ, ಆಚರಣೆ ಮುಂತಾದವುಗಳನ್ನು ಐತಿಹ್ಯದ ಪರಿಸರದಲ್ಲಿಟ್ಟು ನೋಡುವುದು ಇಲ್ಲಿನ ಜಿಲ್ಲೆಗೆ ಈ ಪ್ರಸ್ತುತ ಅಧ್ಯಯನ ಸೀಮಿತಗೊಳ್ಳಿಸಿಕೊಳ್ಳಲಾಗಿದೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನಕ್ಕೆ ಮಾಹಿತಿ ಮತ್ತು ವಿವರಗಳನ್ನೊಳಗೊಂಡಂತೆ ವಿಶ್ಲೇಷಣಾತ್ಮಕವಾಗಿರುತ್ತದೆ. ಪ್ರಮುಖವಾಗಿ ಐತಿಹ್ಯಗಳು ಶಾಸನಗಳಲ್ಲಿ ಮತ್ತು ಜನಪದರಲ್ಲಿ, ಕೈಫಿಯತ್ತುಗಳಲ್ಲಿ ಸ್ಥಳನಾಮಗಳ ಬಗ್ಗೆ ಯಾವ ಯಾವ ರೀತಿ ಇವೆ ಎಂಬುದನ್ನು ನನ್ನ ಸಂಶೋಧನಾ ಸಂಪ್ರಬಂಧದಲ್ಲಿ ತಿಳಿಸಲಾಗಿದ್ದು, ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಆರು ಅಧ್ಯಯನಗಳಾಗಿ ವಿಂಗಡಿಸಿಕೊಳ್ಳಲಾಗಿದ್ದು ಪ್ರತಿಯೊಂದು ಅಧ್ಯಯನವು ಉಪಶೀರ್ಷಿಕೆಗಳನ್ನೊಳಗೊಂಡಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನಕ್ಕೆ ಸಂಬಂಧಿಸಿದಾಗಿದ್ದು, ಈ ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಸೇರಿದಂತೆ ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳ ಬಗ್ಗೆ ಈ ಹಿಂದೆ ನಡೆದಿರುವ ಅಧ್ಯಯನಗಳು ವಿಧಾನಗಳನ್ನು ಕುರಿತು ಚರ್ಚಿಸಲಾಗಿದೆ. ಈ ವಿವರಗಳ ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಅಗೆತ್ಯವಾದ ಹಿನ್ನೆಲೆಯನ್ನು ರೂಪಿಸಿಕೊಡುತ್ತವೆ.

ಎರಡನೆಯ ಅಧ್ಯಾಯದಲ್ಲಿ ಐತಿಹ್ಯಗಳೆಂದರೇನು? ಅವುಗಳ ಅರ್ಥ. ಐತಿಹ್ಯದ ಬಗ್ಗೆ ಯಾವ ಯಾವ ವಿದ್ವಾಂಸರು ವ್ಯಾಖ್ಯಾನ ನೀಡಿದ್ದಾರೆ. ಐತಿಹ್ಯಗಳು ಎಲ್ಲಿಂದ ಎಲ್ಲಿ ಯಾವಾಗ ಬೆಳೆದು ಬಂದವು. ಪ್ರಸ್ತುತ ಅವುಗಳು ಎಲ್ಲಿ ಕಂಡುಬರುತ್ತವೆ ಎಂಬುದನ್ನು ಈ ಸಂಪ್ರಂಬಂಧದಲ್ಲಿ ತಿಳಿಸಲಾಗಿದೆ.

ಮೂರನೆಯ ಅಧ್ಯಾಯ ಶಾಸನಗಳಲ್ಲಿ ಐತಿಹ್ಯಗಳು ಯಾವ ಬಗೆಯಲ್ಲಿ ಇವೆ. ಅವುಗಳು ಎಲ್ಲಿ ಯಾವ ಶಾಸನಗಳಲ್ಲಿ ಉಲ್ಲೇಖಗೊಂಡಿವೆ ಎಂಬುದನ್ನು ಗುರುತಿಸುವುದು. ಇವುಗಳು ದಂತಕಥೆಯನ್ನ, ಪುರಾಣಗಳನ್ನ, ಹೇಳುತ್ತವೆಯೋ ಈ ದಂತಕಥೆ ಪುರಾಣಗಳು ವ್ಯಕ್ತಿಬಗ್ಗೆ, ಸ್ಥಳದಬಗ್ಗೆ, ಇಲ್ಲ ಪ್ರಾಣಿಗಳ ಬಗ್ಗೆ ಇವೆಯೋ ಎಂಬುದನ್ನು ತಿಳಿಸಲಾಗಿದೆ. ನಾಲ್ಕನೆಯ

ಅಧ್ಯಾಯ ಇತರೆ ದಾಖಲೆಗಳಲ್ಲಿ ಐತಿಹ್ಯಗಳು. ಶಾಸನಗಳಲ್ಲಿ ಒಂದಾದ ಕೈಫಿಯತ್ತುಗಳು ಕೂಡಾ ದಾವಣಗೆರೆ ಜಿಲ್ಲೆಯಲ್ಲಿ ಕಂಡುಬಂದಿದ್ದು, ಅವುಗಳಲ್ಲಿ ಸೊಳೆಕೆರೆ ಕೈಫಿಯತ್ತು, ಸಂತೆಬೆನ್ನೂರು ಕೈಫಿಯತ್ತು, ಹರಿಹರದ ಕೈಫಿಯತ್ತುಗಳು ಇತಿಹಾಸ, ಸ್ಥಳಪುರಾಣ, ಜನಪದ ಅಂಶಗಳನ್ನು ಒಳಗೊಂಡಂತಹ ದಾಖಲೆಗಳಾಗಿವೆ. ಈ ಕೈಫಿಯತ್ತುಗಳು ಹೇಳುವ ಹಾಗೆ ಯಾವ ವ್ಯಕ್ತಿ, ಇಲ್ಲ ಸ್ಥಳದ ಬಗ್ಗೆ ಹೇಳುತ್ತವೆ ಎಂದು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಜನಪದ ಐತಿಹ್ಯಗಳ ಕುರಿತಂತೆ ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ. ಅದು ವ್ಯಕ್ತಿ, ಸ್ಥಳ, ಕೋಟೆ, ಪ್ರಾಣಿ ಸಂಬಂಧಿಸಿದ ವಿಶಿಷ್ಟತೆಗಳಿಂದ ಕೂಡಿದ್ದು, ಆ ಪರಿಸರದ ವ್ಯಕ್ತಿಗಳ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತವೆ. ಅವುಗಳನ್ನು ಜನರು ಬಾಯಿಂದ ಬಾಯಿಗೆ ಕಿವಿಯಿಂದ ಕಿವಿಗೆ, ಆ ಸ್ಥಳ, ಆ ವ್ಯಕ್ತಿಗಳ ಮತ್ತು ಪ್ರಾಣಿಗಳ ಬಗ್ಗೆ ಐತಿಹ್ಯಗಳನ್ನು ಪುರಾಣದ ರೀತಿ, ದಂತಕಥೆಗಳ ಹಾಗೆ ಕಟ್ಟುತ್ತಾ ಹೋಗುತ್ತಾರೆ. ಎಲ್ಲಿಂದಲ್ಲೋ ಆರಂಭವಾಗಿ ಕೊನೆಗೆ ಒಂದು ಸ್ಥಳದಲ್ಲಿ ಐಕ್ಯಗೊಳ್ಳುತ್ತವೆ. ಆ ಮೂಲಕ ಹೆಸರು ಪಡೆಯುತ್ತವೆ. ಇಂತಹವುಗಳು ದಾವಣಗೆರೆ ಜಿಲ್ಲೆಯ ಆರು ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಪ್ರಸ್ತುತ ಅಧ್ಯಯನದಲ್ಲಿ ಒಟ್ಟು ಫಲಿತಗಳನ್ನು ಹಾಗೂ ಅದರ ಮಿತಿಗಳ ಬಗ್ಗೆ ತಿಳಿಸಲಾಗಿದ್ದು, ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ದಾವಣಗೆರೆ, ಹರಿಹರ, ಹರಪನಹಳ್ಳಿ, ಚನ್ನಗಿರಿ, ಜಗಳೂರು, ಹೊನ್ನಾಳಿ ಆರು ತಾಲೂಕುಗಳ ಬಗ್ಗೆ ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತವನ್ನು ಮತ್ತು ಮುಂದೆ ಕೈಗೊಳ್ಳಬಹುದಾದ ಅಧ್ಯಯನ ವಿಧಾನವನ್ನು ತಿಳಿಸಲಾಗಿದೆ. ಈ ಅಧ್ಯಯನದ ಅನುಬಂಧದಲ್ಲಿ ನಕ್ಷೆಯನ್ನು ತೋರಿಸಲಾಗಿದೆ. ಛಾಯಾಚಿತ್ರಗಳು, ವಕ್ತೃಗಳ ವಿವರ ಮತ್ತು ಪರಾಮರ್ಶನ ಗ್ರಂಥ ನೀಡಲಾಗಿದೆ.

೧.೪. ಅಧ್ಯಯನದ ವಿಧಾನ

ಪ್ರತಿಯೊಂದು ಅಧ್ಯಯನಕ್ಕೂ ತನ್ನದೇ ಆದ ವಿಧಾನವೆಂಬುದು ಇದೆ. ಈ ಅಧ್ಯಯನವನ್ನು ಯಾವ ಬಗೆಯಲ್ಲಿ ಹೇಳಲಾಗಿದೆ. ಅಲ್ಲಿ ಅಧ್ಯಯನಕ್ಕೊಳಪಡಿಸಿದ ವಿಷಯವನ್ನು ವಿಶ್ಲೇಷಿಸಿದ ಬಗೆ ಯಾವುದು ಮತ್ತು ಅಧ್ಯಯನಕ್ಕೆ ಒಳಪಡಿಸಿದ ವಿಷಯವನ್ನು ಗುರುತಿಸುವ ಪರಿಯನ್ನು ಕುರಿತು ಹೇಳುವುದೇ ವಿಧಾನವಾಗಿದೆ. ಅಂತೆಯೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿ ಪಡೆದುಕೊಳ್ಳಲಾಗಿದೆ. ಈಗಾಗಲೇ ಸಂಶೋಧನೆ ಆಗಿರುವ ವಿಷಯಗಳೊಂದಿಗೆ ಮಾರ್ಗದರ್ಶಕರೊಂದಿಗೆ ಸಲಹೆಯನ್ನು ಪಡೆದು ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ವಿಷಯದ ಆಯ್ಕೆಯ ನಂತರ ದಾವಣಗೆರೆ

ಜಿಲ್ಲೆಯ ಶಾಸನಗಳನ್ನು ಸಂಗ್ರಹಿಸಲಾಗಿ, ಆನಂತರ ಜಿಡಿಲೇಖನಗಳನ್ನು, ಪತ್ರಿಕಾ ವರದಿಗಳನ್ನು ಸಿದ್ಧಪಡಿಸಲಾಯಿತು. ನಂತರ ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳ ಬಗ್ಗೆ ಆಕರಗಳಿಂದ ದೊರೆತ ಅಂಶಗಳನ್ನು ಕಲಾನುಕ್ರಮವಾಗಿ ದಾಖಲಿಸಿ ಕೊಳ್ಳಲಾಯಿತು. ಇದಕ್ಕೆ ಸಂಬಂಧಿಸಿದಂತೆ ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಬೇಕು. ಅಲ್ಲಿ ಯಾವ ವ್ಯಕ್ತಿಗಳನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಬೇಕು. ಮತ್ತು ಆ ಸ್ಥಳಗಳ ಬಗ್ಗೆ ಪೋಟೋ ತೆಗೆದುಕೊಳ್ಳಬೇಕು ಹಾಗೂ ದಾವಣಗೆರೆ ಗ್ರಂಥಾಲಯಕ್ಕೆ ಹೋಗಿ ವಿಷಯ ಸಂಗ್ರಹಣೆ, ಬೆಂಗಳೂರು ಐ.ಸಿ.ಹೆಚ್.ಆರ್., ಮಿಥಿಕ್ ಸೊಸೈಟಿ, ಮೈಸೂರು ವಿಶ್ವವಿದ್ಯಾನಿಲಯ ಈ ಗ್ರಂಥಾಲಯಗಳಿಗೆ ಭೇಟಿ ನೀಡಿ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಎಂ.ಫಿಲ್ ಪ್ರಬಂಧಗಳು, ಪಿಎಚ್.ಡಿ ಮಹಾಪ್ರಬಂಧ ಅಧ್ಯಯನಕ್ಕೆ ಒಳಪಡಿಸಲಾಯಿತು ಮತ್ತು ಅನೇಕ ಗ್ರಂಥಗಳನ್ನು ಈ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಾಯ ಎರಡು

ಐತಿಹ್ಯಗಳ ಅರ್ಥ, ವ್ಯಾಖ್ಯಾನ ಮತ್ತು ಬೆಳವಣಿಗೆ

ಅಧ್ಯಾಯ ಎರಡು

ಐತಿಹ್ಯಗಳ ಅರ್ಥ, ವ್ಯಾಖ್ಯಾನ ಮತ್ತು ಬೆಳವಣಿಗೆ

೨.೧. ಐತಿಹ್ಯದ ಅರ್ಥ

ಜನಪದ ಕತೆಗಳಲ್ಲಿ 'ಐತಿಹ್ಯ' ಒಂದು ಮುಖ್ಯವಾದ ಪ್ರಕಾರ. ರೂಪದಲ್ಲಿ ತೀರಾ ಸರಳವಾಗಿದ್ದು ಒಂದು ನಿರ್ದಿಷ್ಟ ಸ್ಥಳ, ವ್ಯಕ್ತಿ ಅಥವಾ ಘಟನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕತೆಗಳನ್ನು ಐತಿಹ್ಯ ಎನ್ನುತ್ತೇವೆ. ಐತಿಹ್ಯವೂ ಇತಿಹಾಸವೂ ಒಂದೇ ಮೂಲದ ಪದಗಳು, ಇತಿಹಾಸಕ್ಕೆ ಈಗಿನ ಚರಿತ್ರೆ ಎಂಬ ಪದ ಸಂವಾದಿಯಾಗಿವೆ. ಇತಿಹಾಸ ವಾಸ್ತವಾಂಶಗಳನ್ನು ನಿರೂಪಿಸುತ್ತದೆ. ಇಲ್ಲಿ ಕಲ್ಪನೆಗೆ ಎಡೆಯಿಲ್ಲ. ಐತಿಹ್ಯಗಳನ್ನು ನಿಜವಾಗಿ ನಡೆದುವೆಂದೇ ನಂಬಿ ಜನಪದರು ನಿರೂಪಿಸುತ್ತಾರಾದರೂ ಇವುಗಳಿಗೆ ಯಾವುದೇ ಲಿಖಿತ ಆಧಾರಗಳು, ದಾಖಲೆಗಳು ಇರುವುದಿಲ್ಲ. ಇವು ಕಂಠಸ್ಥ ಸಂಪ್ರದಾಯದಲ್ಲಿ ಬೆಳೆಯುತ್ತಾ ಬಂದಿವೆ.

ಇತಿಹಾಸ ಒಂದು ಘಟನೆ ಖಚಿತವಾಗಿ ನಡೆದದ್ದು ಎಂಬುದನ್ನು ಆಧಾರಗಳಿಂದ ಸ್ಪಷ್ಟವಾಗಿ ತಿಳಿಸುತ್ತದೆ. ಆದರೆ ಐತಿಹ್ಯದಲ್ಲಿ ನಿರೂಪಿತವಾಗುವ ವಿಷಯಗಳೆಲ್ಲವೂ ನಿಜವೆಂದೇ ಹೇಳುವುದಕ್ಕೆ ಗಟ್ಟಿಯಾದ ಆಧಾರಗಳು ಸಿಗುವುದಿಲ್ಲ. ಎಲ್ಲಾ ಐತಿಹ್ಯಗಳಲ್ಲಿ ಸತ್ಯಾಂಶ ಹಾಗೂ ಕಾಲ್ಪನಿಕ ಅಂಶಗಳು ವಿವಿಧ ಪ್ರಮಾಣದಲ್ಲಿ ಬೆರೆತಿರುತ್ತವೆ. ಇನ್ನೂ ಕೆಲವು ಐತಿಹ್ಯಗಳು ಸಂಪೂರ್ಣ ಕಾಲ್ಪನಿಕ ಎಂಬುದನ್ನು ವಿಶ್ಲೇಷಣೆಯಿಂದ ಕಂಡುಕೊಳ್ಳಬಹುದು. ಇದೇನೇ ಇದ್ದರೂ ಐತಿಹ್ಯಗಳನ್ನು ಆಕರ್ಷಕವಾಗುವಂತೆ ಮಾಡಿರುವುದು ಈ ಕಾಲ್ಪನಿಕ ಅಂಶವೇ. ಈ ಆಕರ್ಷಣೆಯ ಕಾರಣದಿಂದಲೇ ಐತಿಹ್ಯಗಳು ಜನಮನದಲ್ಲಿ ಉಳಿದುಕೊಂಡು ಬಂದಿವೆ. ಐತಿಹ್ಯಗಳಲ್ಲಿ ಕಾಲ್ಪನಿಕಾಂಶವೆಷ್ಟು ಸತ್ಯಾಂಶವೆಷ್ಟು ಎಂಬುದನ್ನು ಗುರುತಿಸಿ ಇತಿಹಾಸಕಾರ ಅವುಗಳನ್ನು ಇತಿಹಾಸ ರಚನೆಗೆ ಬಳಸಿಕೊಳ್ಳಬೇಕಾಗುತ್ತದೆ. ಎಷ್ಟೋ ವೇಳೆ ಇತಿಹಾಸ ರಚನೆಗೆ ಅತ್ಯಮೂಲ್ಯವಾದ ಆಧಾರವನ್ನು ಐತಿಹ್ಯಗಳು ಒದಗಿಸುತ್ತವೆ. ಆದ್ದರಿಂದ ಇವುಗಳನ್ನು

ಇತಿಹಾಸಕಾರರು ಪರಿಗಣಿಸುವುದು ಅಗತ್ಯ. ವ್ಯಕ್ತಿ, ಘಟನೆ, ಸ್ಥಳ, ಚರಿತ್ರೆ, ಸಂಸ್ಕೃತಿ, ಸಮಾಜ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಐತಿಹ್ಯಗಳು ಹುಟ್ಟಿಕೊಳ್ಳುತ್ತವೆ. ಕೆಲವೊಂದು ಐತಿಹ್ಯಗಳು ಆಧಾರವಿಲ್ಲದೇ ಹುಟ್ಟುವುದಿಲ್ಲ. ಎಲ್ಲ ಐತಿಹ್ಯಗಳನ್ನು ಆಗಂತ ಸುಳ್ಳು ಎಂದು ಹೇಳಲಾಗುವುದಿಲ್ಲ. ಐತಿಹ್ಯಗಳು ನಿಜ ಎಂದು ಹೇಳಲಾಗುವುದಿಲ್ಲ. ಇವುಗಳು ವ್ಯಕ್ತಿಯೊಬ್ಬನ ಬುದ್ದಿಗೆ ಜ್ಞಾನಕ್ಕೆ ಸಂಬಂಧಿಸಿರುವಂತವು.

ಸರಳವಾಗಿ ಹೇಳುವುದಾದರೆ ಯಾವುದೋ ಊರು, ಕತೆ ಅಥವಾ ಯಾವುದೋ ಜಾಗ ಅವುಗಳ ಬಗ್ಗೆ ಪ್ರಚಲಿತವಿರುವ ಕತೆಗಳನ್ನು 'ಐತಿಹ್ಯ' ಎನ್ನುತ್ತೇವೆ. ಈ ಕತೆಗಳು ವಾಸ್ತವವಾಗಿ ನಿಜವಿರಬಹುದು, ನಿಜವಿಲ್ಲದಿರಬಹುದು.[೧] ಆದರೆ ಐತಿಹ್ಯ(Legend), ಪುರಾಣಗಳ (Myth) ಬಗ್ಗೆ ಹಾಗಲ್ಲ. ಜನ ಅವುಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ಆ ದೃಷ್ಟಿಯಿಂದ ಅವೆರಡೂ ಒಂದೇ ಗುಂಪಿಗೆ ಸೇರುತ್ತವೆ. ಜನಗಳಿಗೆ ಅವೆರಡೂ 'ನಿಜ'(real) ಅವರ ಪ್ರಕಾರ ಅವು ವಾಸ್ತವವಾಗಿ ನಡೆದ ಘಟನೆಗಳನ್ನು ಹೇಳುತ್ತವೆ.[೨] ನಾವು ಕೂಡಾ ಈ ಪುರಾಣ, ದಂತಕಥೆ, ಐತಿಹ್ಯ, ವದಂತಿ ಇವುಗಳನ್ನು ಕೆಲವು ಸಂದರ್ಭದಲ್ಲಿ ನಂಬಬೇಕಾಗುತ್ತದೆ. ಏಕೆಂದರೆ ಎಲ್ಲವನ್ನೂ ಸುಳ್ಳು ಎಂದು ಹೇಳಲಿಕ್ಕೆ ಆಗದು. ಈ ಐತಿಹ್ಯಗಳು ಮುಖ್ಯವಾಗಿ ಮನುಷ್ಯನ ಬುದ್ಧಿ, ಜ್ಞಾನಕ್ಕೆ ಸಂಬಂಧಿಸಿದವು ಎನ್ನಬಹುದು.

'ಐತಿಹ್ಯ' ಪದವು ಇತಿಹಾಸದಂತೆ 'ಇತಿ', 'ಇತಿಹ' ಎಂಬ ಸಂಸ್ಕೃತ ರೂಪದಿಂದ ನಿಷ್ಪನ್ನವಾಗಿದೆ. ಆದರೆ ಐತಿಹ್ಯವು ಜನಪದ ಮೌಖಿಕ ಇತಿಹಾಸವಾಗಿ ಒಂದು ಬಗೆಯ ಅರ್ಥವನ್ನು ಸಹ ನೀಡುತ್ತದೆ. ಐತಿಹ್ಯಗಳಿಗೆ ಕಾಲದ ನಿರ್ದಿಷ್ಟತೆಯಾಗಲಿ, ಅಥವಾ ದಾಖಲೆಗಳಾಗಲಿ ಇರುವುದಿಲ್ಲ. ಆದರೆ ಐತಿಹ್ಯಗಳಿಗೆ ಪ್ರಮುಖವಾಗಿ ನಡೆದಿರುವ ಘಟನೆಗಳು ಆಧಾರಗಳು. ಯಾವುದನ್ನಬೇಕಾದರೂ ಐತಿಹ್ಯವೆಂದು ಕರೆಯಬಹುದು. ಅವು ಸ್ಥಳನಾಮ, ವಸ್ತು, ಪ್ರಾಣಿ, ಕೆರೆ, ಕೋಟೆ, ಬೆಟ್ಟ-ಗುಡ್ಡ, ಕಲ್ಲು, ದೈವ, ಹಳ್ಳ, ನದಿ ಇವುಗಳು ಆಗಿರಬಹುದು. ಪುರಾಣ, ದಂತಕಥೆ, ವದಂತಿ, ಗಾದೆ, ಒಗಟು, ಒಡಪು, ಜನಪದ ಹೀಗೆಯೇ ಯಾವುದೇ ಕುರುಹುಗಳಲ್ಲಿಯೂ ಐತಿಹ್ಯಗಳು ಹುಟ್ಟಿಕೊಳ್ಳಬಹುದು.

ಡಾ.ಸುಬ್ಬಣ್ಣ ರೈ ಅವರು ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು ಎಂಬ ಮಹಾಪ್ರಬಂಧದಲ್ಲಿ "ಆಶಯದ ಆಧಾರದಿಂದಲೂ ಐತಿಹ್ಯಗಳನ್ನು ವರ್ಗೀಕರಿಸಿಕೊಳ್ಳಬಹುದು" ಎಂದು ಹೇಳಿದ್ದಾರೆ. ಹೀಗೆಯೇ ಐತಿಹ್ಯವು ಸಂಸ್ಕೃತಿಯೊಂದರ ಪ್ರತಿನಿಧಿಯಾಗಿ ತನ್ನೊಳಗೆ ನಂಬಿಕೆ, ಆಚರಣೆ, ಸಂಪ್ರದಾಯ, ಪುರಾಣ-ವ್ಯಕ್ತಿ, ಘಟನೆ ಹೀಗೆ ಹಲವಾರು ವಸ್ತು ವಿಷಯಗಳಿಂದ ಹುಟ್ಟುತ್ತದೆ. ಇದು ಮೌಖಿಕ ಪರಂಪರೆಯ ಭಾಗ ಮಾತ್ರವಲ್ಲ ಅದೊಂದು ಚರಿತ್ರೆಯೂ ಹೌದು.

೨.೨. ವ್ಯಾಖ್ಯಾನಗಳು

೧. ಕನ್ನಡ ಸಾಹಿತ್ಯ ಪರಿಷತ್ ನಿಘಂಟಿನ ಹೇಳಿಕೆಯಂತೆ ಐತಿಹ್ಯವೆಂದರೆ "ಪರಂಪರೆಯಿಂದ ಬಂದಿರುವುದು. ಪುರಾಣ, ಚರಿತ್ರೆ ಪ್ರಮಾಣವಿಲ್ಲದೆ ಪರಂಪರೆಯಿಂದ ಬಂದ ಮಾತು ಹೇಳುವುದು." "ಐತಿಹ್ಯಂ ಇತಿಹಾಸವೆನಿಸುಗುಂ" ಎಂಬ ಹೇಳಿಕೆ ಗಮನಿಸಬಹುದು.[೩]

೨. ದೇ.ಜವರೇಗೌಡ ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟು ಕಥೆಗಳೇ ಐತಿಹ್ಯಗಳು ಎಂದಿದ್ದಾರೆ.[೪]

೩. ನೇಗಿನಹಾಳ ಅವರ ಪ್ರಕಾರ "ವ್ಯಕ್ತಿ, ಸ್ಥಳ, ಘಟನೆಯೊಂದರ ಸುತ್ತ ಸಂಪ್ರದಾಯಿಕವಾಗಿ ಮತ್ತು ಯಾವು ಯಾವುವೋ ಮೂಲ ಸಂಗತಿಗಳ ಮೇಲೆ ಆಧಾರ ಬೆಳೆದು ಬಂದ ಕಥನ"[೫] ಎಂದಿದ್ದಾರೆ.

೪. ಜೀ.ಶಂ.ಪರಮಶಿವಯ್ಯ-ಕುಡಿಯುವ ನೀರಿನ ಬಾವಿ ಇಲ್ಲದ ಊರು ಇಲ್ಲದಿರಲೂ ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಐತಿಹ್ಯವಿಲ್ಲದ ಊರು ಇಲ್ಲದಿರಲು ಸಾಧ್ಯವಿಲ್ಲ"[೬] ಎಂದು ತಿಳಿಸಿದ್ದಾರೆ.

೫. ಪ್ರೊ.ನಾವಡ ಎ.ವಿ., ಪ್ರಕಾರ 'ಐತಿಹ್ಯ'ದ ಬಗ್ಗೆ ಈ ರೀತಿ ಹೇಳಿದ್ದಾರೆ. "ನಡೆಯಿತೆಂದು ಹೇಳಲಾಗದ ವ್ಯಕ್ತಿ, ಸ್ಥಳ, ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟು ಕಥೆ"[೭] ಎಂದಿದ್ದಾರೆ.

೬. ಬಾಗ್ಸ್‌ನ ಪ್ರಕಾರ 'ಲೆಜೆಂಡ್'(Legend) ಎಂದರೆ 'ನಿರ್ದಿಷ್ಟ ವ್ಯಕ್ತಿ, ಸ್ಥಳ, ವಸ್ತುಗಳಿಗೆ ಸಂಬಂಧಪಟ್ಟ ಕಥೆ ಎನ್ನುವ ಮಾತು ದಂತಕಥೆ ಮತ್ತು ಐತಿಹ್ಯದ ಪದದ ಅರ್ಥ ಬರುವುದು ಸಹಜವಾಗಿದೆ.[೮]

೭. ಜಾನಪದ ವಿಶ್ವಕೋಶದಲ್ಲಿ 'ಐತಿಹ್ಯ'ವನ್ನು ಕುರಿತು "ಜೆಕೋಬಸ ಡಿ ವೊರಾಜಿನ್‌ನ 'ಚಿನ್ನದ ಐತಿಹ್ಯ'ದ ನಂತರ ಜೀವನ ಚರಿತ್ರೆಗಳ ಸಂಗ್ರಹವಾಗಿದೆ. ಅಂದಿನಿಂದ ಐತಿಹ್ಯ ಎಂಬ ಪದವನ್ನು ಒಬ್ಬ ವ್ಯಕ್ತಿ, ಸ್ಥಳ ಅಥವಾ ಘಟನೆಯ ಕುರಿತು ಹೇಳಿದ ವಾಸ್ತವಾಂಶಗಳನ್ನು ಕುರಿತಿದೆ ಎಂದು ಹೇಳಲಾಗುವ ಹಾಗೂ ಸಂಪ್ರದಾಯಿಕ ಅಂಶಗಳನ್ನು ಮೇಳವಿಸಿಕೊಂಡು ಕಥೆಗೆ ಅನ್ವಯಿಸಲಾಗಿದೆ. ಪುರಾಣ ಮತ್ತು ಐತಿಹ್ಯವನ್ನು ಬೇರ್ಪಡಿಸುವ ಗೆರೆ ಎಷ್ಟೋ ವೇಳೆ ಅಸ್ಪಷ್ಟವಾಗಿದೆ"[೯] ಎಂದು ವ್ಯಾಖ್ಯಾನಿಸಿದ್ದಾರೆ.

೧೦. ಇಂಗ್ಲೀಷ್-ಕನ್ನಡ ನಿಘಂಟುನಲ್ಲಿ ಸಾಧು ಸಂತರ ಜೀವನ ಕಥಾ ೧೩ನೇ ಶತಮಾನದಲ್ಲಿ ಇಂಗ್ಲೀಷ್‌ನಲ್ಲಿ ಸಂಗ್ರಹಿಸಿದ ಸಾಧು ಸಂತರ ಜೀವನ ಕಥಾ ಸಂಗ್ರಹ" ಎಂದು ದಾಖಲಿಸಲಾಗಿದೆ.[೧೦]

೧೧. ಕಿಟೆಲ್ ನಿಘಂಟಿನಲ್ಲಿ "oral tradition, a Legend"[೧೧] ಎಂಬುದನ್ನು ಸಮಾನಾರ್ಥವಾಗಿ ಬಳಸಿದಲ್ಲದೇ, ಕನ್ನಡದಲ್ಲಿ ಅದಕ್ಕೆ 'ಐತಿಹ್ಯ' ಎಂಬ ಪದವಿರುವುದನ್ನು ಗುರುತಿಸಲಾಗಿದೆ.

೧೨. ಪುರುಷೋತ್ತಮ ಬಿಳಿಮಲೆ-ಐತಿಹ್ಯಗಳು ಸೃಷ್ಟಿಯಾಗುವ ಕಾರಣವನ್ನು ಹೇಳುತ್ತಾರೆ. ಕಾಲಮಾನದ ದೃಷ್ಟಿಯಿಂದ ಸಾಕಷ್ಟು ದೂರವನ್ನು ಕಾಪಾಡಿಕೊಂಡಿರುವ ದೂರವನ್ನು ವರ್ತಮಾನಕ್ಕೆ ಒಗ್ಗಿಸಿಕೊಳ್ಳುವ ಅವಸರದಲ್ಲಿಯೂ ಐತಿಹ್ಯಗಳು ಸೃಷ್ಟಿಯಾಗುತ್ತವೆ[೧೨] ಎಂದಿದ್ದಾರೆ.

೧೩. ವಸಂತಕುಮಾರ ತಾಳ್ತಜೆ-ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳನ್ನು ಕುರಿತು ಸಂಶೋಧನೆ ನಡೆಸಿದ್ದಾರೆ. ಅದರಲ್ಲಿ ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ. ಹಾಗೆಂದು ಅದು ಪೂರ್ತಿ ಕಲ್ಪಿತ ದಂತಕಥೆಯೂ ಅಲ್ಲ, ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ ಅಥವಾ ವ್ಯಕ್ತಿಯೊಬ್ಬನ ಸಾಧನೆ. ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿರುತ್ತದೆ. ಈ ಪ್ರಭಾವವೇ ಪರಿಣಾಮವಾಗಿ ಅವರಲ್ಲೊಬ್ಬ ಪ್ರತಿಭಾಶಾಲಿ ಅನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸುತ್ತಾನೆ. ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ಒಂದು ವ್ಯಕ್ತಿಗೆ ಸಂಬಂಧಿಸಿದಂತೆ ಐತಿಹ್ಯ ಉಂಟಾಗುತ್ತದೆ[೧೩] ಎಂದು ವ್ಯಾಖ್ಯಾನಿಸಿದ್ದಾರೆ.

೧೪. ಪುರುಷೋತ್ತಮ ಬಿಳಿಮಲೆ-ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ. ಹಾಗೆಂದು ಅರ್ಥಪೂರ್ತಿ ದಂತಕಥೆಯೂ ಅಲ್ಲ, ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ ಅಥವಾ ವ್ಯಕ್ತಿಯೊಬ್ಬನ ಸಾಧನೆ ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರುತ್ತದೆ. ಈ ಪ್ರಭಾವವೇ ಪರಿಣಾಮವಾಗಿ ಅವರಲ್ಲೊಬ್ಬ ಪ್ರತಿಭಾಶಾಲಿ ನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿಬಿಡುತ್ತಾನೆ. ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಒಂದು ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದೆ.[೧೪]

೧೫. ಮಾಸ್ತಿ ಇದೊಂದು ಉದಂತ ಕಥೆ, ಉದಂತ ಎಂದರೆ ಸಂಸ್ಕೃತದಲ್ಲಿ ವೃತ್ತಾಂತ, ವಾರ್ತೆ, ಉದಂತದಲ್ಲಿ 'ಉ'ಮಾಯವಾಗಿ ದಂತ ಮಾತ್ರ ಉಳಿದಿದೆ. ಉದಂತ ಎಂದರೂ ಕತೆಯೆಂದೇ ಅರ್ಥ'[೧೫] ಎಂದು ಹೇಳಿದ್ದಾರೆ.

೧೬. ಪಾ.ವೆಂ.ಆಚಾರ್ಯ(ಪದಾರ್ಥ ಚಿಂತಾಮಣಿ)ರ ಪ್ರಕಾರ 'ಐತಿಹ್ಯ' ಎಂದರೆ ಇತಿ–ಹ(ಹೀಗಂತೆ) ಎಂದರ್ಥ. ಇದಕ್ಕೆ ಇತಿಹಾಸದ ಹರವು ಇರಬೇಕಿಲ್ಲ. ಒಂದೂರಿನ ಒಬ್ಬನ ಯಾವುದಾದರೂ ಅರ್ಥಪೂರ್ಣ ಘಟನೆಯ ಪರಂಪರಾಗತ ನಿರೂಪಣೆಯೇ ಇದು. ಕಿಂವದಂತಿ ಐತಿಹ್ಯದಷ್ಟು ಹಳೆಯದಲ್ಲ. ಅದು ಅಂತೆ ಕಂತೆ ಸುದ್ದಿ. ಅದು ಗಾಳಿಯಂತೆ ಅದೃಶ್ಯವಾದರೂ ಗಾಳಿಯಂತೆಯೇ ಹವಾಮಾನವನ್ನು ಪ್ರಭಾವಿಸುವಂಥದ್ದು. ಕನ್ನಡದ 'ಅಂತೆ' ಕೂಡ ವದಂತಿಯೇ. ಐತಿಹ್ಯವು ಹೀಗೆ ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ತೇಲಿ ಬಂದ ಊರ ಮಹಿಮೆ"[೧೬] ಎಂದು ವ್ಯಾಖ್ಯಾನಿಸಿದ್ದಾರೆ.

೧೭. ಡಾ.ಕೆ.ಆರ್.ಸಂಧ್ಯಾರೆಡ್ಡಿ–ಅವರು ಐತಿಹ್ಯಗಳು ಐತಿಹಾಸಿಕ ವಿಶ್ಲೇಷಣೆ ಎಂಬ ಲೇಖನದಲ್ಲಿ ಜನಪದ ಗದ್ಯಕತೆಗಳಲ್ಲಿ 'ಐತಿಹ್ಯ' ಒಂದು ಮುಖ್ಯವಾದ ಪ್ರಕಾರ ರೂಪದಲ್ಲಿ ತೀರಾ ಸರಳವಾಗಿದ್ದು, ಒಂದು ನಿರ್ದಿಷ್ಟ ವ್ಯಕ್ತಿ, ಸ್ಥಳ, ಅಥವಾ ಘಟನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕತೆಗಳನ್ನು 'ಐತಿಹ್ಯ' ಎನ್ನುತ್ತೇವೆ.[೧೭]

೧೮. ನಾಯಕರ ಹುಲುಗಪ್ಪ–'ಐತಿಹ್ಯ' ಎಂದರೆ ಮನುಷ್ಯನು ವಾಸ್ತವವಾಗಿ ನಡೆದಿದೇ ಎಂದು ನಂಬಿಕೊಂಡು ಬಂದಿರುವ ಘಟನೆಯೊಂದರ ಕಥೆ. ಹಿಂದೆ ನಡೆದಿರಬಹುದಾದ ಘಟನೆಯೊಂದಕ್ಕೆ ಕಲಾತ್ಮಕತೆಯ ರೂಪ ಕೊಟ್ಟ ಹೆಣೆದಿರಬಹುದಾದ ಪ್ರಕಾರವಿದು. ಐತಿಹ್ಯಗಳು ಇತಿಹಾಸದ ಸ್ಪರ್ಶದಿಂದ ಕೂಡಿರುತ್ತವೆ. ಯಾವುದೋ ಕಾಲದಲ್ಲಿನ ಒಂದು ಚಾರಿತ್ರಿಕ ಘಟನೆಯನ್ನಾಧರಿಸಿ ಹುಟ್ಟಿಕೊಂಡ ಅದ್ಭುತವಾದ ಸನ್ನಿವೇಶಗಳು ಬೆಳೆದು ಅವು ಮೌಖಿಕ ಪರಂಪರೆಯ ಮೂಲಕ ಹರಿಯುವ ಕಥೆಯಾಗಿ ರೂಪಗೊಂಡರೆ ಅಂಥವನ್ನ ಐತಿಹ್ಯ ಎಂದು ಕರೆಯಬಹುದು[೧೮] ಎಂದಿದ್ದಾರೆ.

೧೯. ಐತಿಹ್ಯ ಕುರಿತು ಜಾನಪದ ತಜ್ಞರು ಮತ್ತು ವಿದ್ವಾಂಸರು ನಿಘಂಟುಕಾರರು ಅರ್ಥೈಸಿರುವುದನ್ನು ಗಮನಿಸಿದಾಗ 'Legend' ಪದಕ್ಕೆ ಸಂವಾದಿ ಪದ ಐತಿಹ್ಯ. ಐತಿಹ್ಯ ಎಂಬ ಪದ ಇತಿಹಾಸದ 'ಇತಿ' 'ಇತಿಹ' ಎನ್ನುವ ಸಂಸ್ಕೃತ ಪದದಿಂದ ಬಂದಿರುತ್ತದೆ. 'ಇತಿ' 'ಇತಿಹ' ಎಂಬ ಪದಗಳಿಗೆ 'ಹೀಗೆ' 'ಹೀಗೆಯೇ' ನಡೆದದ್ದು ಎಂಬ ಅರ್ಥಗಳಿವೆ. ಐತಿಹ್ಯ ಸಹ ಹೀಗೆ ನಡೆದಿರುವ ಸಂಗತಿ ಎಂಬ ಅನ್ವರ್ಥದಲ್ಲಿ ಐತಿಹ್ಯ ಪದರೂಪ ಪಡೆದಿದೆ. ಇತಿಹಾಸವೂ ಕೂಡ 'ಇತಿ' 'ಇತಿಹ' ಶಬ್ದಗಳನ್ನು ಹೊಂದಿದೆಯಾದರೂ ಅದು ಇಂದು ಚರಿತ್ರೆಯ ಮತ್ತೊಂದು ರೂಪ ಪಡೆದುಕೊಂಡಿದೆ. ಇತಿಹಾಸಕ್ಕೆ ಲಿಖಿತ ಆಧಾರಗಳಾದ ದಾಖಲೆಗಳು, ನಾಣ್ಯಗಳು, ಸ್ಮಾರಕಗಳು, ಶಾಸನಗಳು, ಇತ್ಯಾದಿ ಆಕಾರ ಸಾಮಾಗ್ರಿಗಳಾಗುತ್ತವೆ.[೧೯]

೨.೩. ಐತಿಹ್ಯದ ಬೆಳವಣಿಗೆ

ಐತಿಹ್ಯದ ಹುಟ್ಟು ಬೆಳವಣಿಗೆ ಕುರಿತು ಹೇಳುವುದಾದರೆ ಜಗತ್ತಿನ ಯಾವುದೋ ಜನಾಂಗದ ಮನುಷ್ಯ ತಮಗೆ ಸಂಬಂಧಿಸಿದ ವಸ್ತುಗಳು ಮತ್ತು ಪಳೆಯುಳಿಕೆಗಳು ಪವಿತ್ರ ಎಂಬ ಭಾವನೆಯನ್ನು ಉಳಿಸಿಕೊಂಡು ಬಂದಿರುವುದು ಗಮನಿಸಬೇಕಾದ ಸಂಗತಿ. ಜನಪದರಿಗೆ ಪವಿತ್ರ ಪದಗೊತ್ತಿಲ್ಲದೆ ಇದ್ದರೂ ಆ ವಸ್ತುಗಳ ಅಥವಾ ಘಟನೆಗಳ ಬಗ್ಗೆ ಚಿಕ್ಕದೊಂದು ಕಥನ ಕಟ್ಟಿಕೊಂಡರು ಜಾನಪದ ಶಾಸ್ತ್ರವಾಗಿ ಬೆಳೆಯುವುದಕ್ಕಿಂತ ಹಿಂದೆಯೇ 'ಐತಿಹ್ಯ' ಎಂಬ ಪದ ಪ್ರಯೋಗ ನಮ್ಮಲ್ಲಿ ರೂಢಿ ಎಂಬುದರ ಬಗ್ಗೆ ವಿದ್ವಾಂಸರಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ಇತಿಹಾಸವೆಂದು ನಂಬಿಕೊಂಡು ಬಂದ ಘಟನೆ ಅಥವಾ ಕಥನವೆಂಬ ಅರ್ಥದಲ್ಲಿ ಪ್ರಯೋಗ ಗೊಳ್ಳುತ್ತಿದ್ದುದನ್ನು ನಾವು ನೋಡುತ್ತೇವೆ. ಹೀಗೆ ಕಥನದ ಬಗ್ಗೆ ನಂಬಿಕೆಯನ್ನು ಹುಟ್ಟಿಸುತ್ತಾ ಬೆಳೆಯುತ್ತಾ ಹೋಗುತ್ತವೆ.

ಐತಿಹ್ಯದ ಬೆಳವಣಿಗೆಯೂ ಪುರಾಣದಿಂದಲೂ ಕೂಡಾ ಇದೆ. ಅದನ್ನ ಜನರು ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಅದಕ್ಕೆ ಇನ್ನಷ್ಟು ಮೆರಗು ಬರುವಂತೆ ಕತೆಯನ್ನು ಕಟ್ಟುತ್ತಾ ಹೋಗುತ್ತಾರೆ. ಅದು ಪುರಾಣ ದಂತಕಥೆ ಐತಿಹ್ಯ, ವದಂತಿ, ಗಾದೆ, ಒಗಟು, ಒಡಪು ಮುಂತಾದವುಗಳಲ್ಲಿ ಸ್ಥಳನಾಮಗಳ ಬಗ್ಗೆ ವ್ಯಕ್ತಿ, ಪ್ರಾಣಿ, ಬೆಟ್ಟ–ಗುಡ್ಡ, ನದಿ, ಪರ್ವತ, ಕೋಟೆ–ಕೊತ್ತಲ ಯಾವುದಾದರೂ ಕೂಡಾ ಐತಿಹ್ಯವಾಗಬಹುದು. ಅವುಗಳೂ ಎಲ್ಲಿಂದಲ್ಲೋ ಆರಂಭಗೊಂಡು ಕೊನೆಗೆ ಒಂದು ಸ್ಥಳದಲ್ಲಿ ಐಕ್ಯಗೊಳ್ಳುತ್ತವೆ. ಅವು ನಂಬಿಕೆ, ಆಚರಣೆ, ಸಂಪ್ರದಾಯ ಸಂಸ್ಕೃತಿಗಳನ್ನ ಕೂಡಾ ಒಳಗೊಂಡಿರುತ್ತವೆ. ನಂಬಿಕೆಗಳು, ಅತಿಮಾನುಷಶಕ್ತಿಗಳು, ವಾಸ್ತವದಲ್ಲಿ ನಡೆದ ಘಟನೆಗಳು, ಪುರಾಣ ವ್ಯಕ್ತಿಗಳು, ಐತಿಹಾಸಿಕ ವ್ಯಕ್ತಿಗಳು, ತ್ಯಾಗ, ಬಲಿದಾನಕ್ಕೆ ಸಂಬಂಧಿಸಿದವರು. ಅನನ್ಯ ಪ್ರೀತಿಗೆ ಹೆಗ್ಗುರುತಾದವರು ಸಾಂಸ್ಕೃತಿಕ ವೀರರು ಸಂಸ್ಕೃತಿಯ ಮೂಲಪುರುಷರು, ರಾಜರ ಸಾಧನೆಗಳು ಜನ ಸಾಮಾನ್ಯರ ನೋವು–ನಲಿವು, ಸಾಧನೆ–ದುರಂತಗಳು ಇತ್ಯಾದಿ ಐತಿಹ್ಯಗಳೂ ವಸ್ತುಗಳಾಗಿರುತ್ತವೆ. ಕೆಲವೊಂದು ಕಥೆಗಳು ಹಾಡುಗಳು ಜನಪದರ ಮನಸ್ಸಿನಲ್ಲಿ ನೆಲೆಯೂರುತ್ತವೆ. ಕಥಾನಕ ಪಾತ್ರಗಳಿಗೆ ಒದಗುವ ಸಂಕಷ್ಟಗಳು ಪಾತ್ರಗಳ ದಿಟ್ಟತೆ, ಸಾತ್ವಿಕತೆ, ಇತ್ಯಾದಿ ಗುಣಗಳಿಗೆ ಸ್ಪಂದಿಸುವ ಜನರ ಮನಸ್ಸುಗಳು ಅಲ್ಲಿನ ಅನುಭವಗಳನ್ನು ಲೋಕಾನುಭವದಲ್ಲಿ ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತವೆ. ಎಲ್ಲಿಯೋ ನಡೆದಿದೆಯೆಂಬ ಘಟನೆಗಳನ್ನು ತಮ್ಮ ಸುತ್ತಮುತ್ತ ನಡೆದಂತೆ ಆರೋಪಿಸುತ್ತಾರೆ. ಇಂತಹ ಸಂದರ್ಭದಲ್ಲಿ ಐತಿಹ್ಯಗಳು ಹುಟ್ಟಿ ಬೆಳವಣಿಗೆ ಹೊಂದುತ್ತವೆ. ಮನುಷ್ಯನ ಇಂದ್ರಿಯಗಳಿಗೆ ಎಟುಕುವ ಜಗತ್ತು ಮನಸ್ಸು ಕಟ್ಟುವ ವಾಸ್ತವ ಹಾಗೂ ಕಾಲ್ಪನಿಕ ಜಗತ್ತು ಬೌದ್ಧಿಗ್ರಹಿಕೆಗೆ

ಬರುವ ಮೂರ್ತ-ಅಮೂರ್ತ ಸಂಗತಿಗಳು ಹೀಗೆ ಅನುಭವ ಅನುಭಾವದ ವಸ್ತು ಐತಿಹ್ಯಗಳಾಗುತ್ತವೆ.

ಜನಪದರು ತಮಗೆ ಸರಿ ಎನಿಸಿದ್ದನ್ನು ಸರಿಯೆಂದು ಕಂಡುಕೊಂಡ ಸತ್ಯಗಳನ್ನು ಮೌಖಿಕ ಪರಂಪರೆಯಲ್ಲಿ ಅಳಿಯದೆ ಉಳಿಸಿಕೊಂಡ ಪ್ರಕಾರವಾಗಿ ಐತಿಹ್ಯವು ಪ್ರಮಾಣೀಕೃತವಾಯಿತು. ನಿರ್ದಿಷ್ಟ ವಸ್ತು ವಿಷಯಗಳಿಗೆ ಅಂಟಿಕೊಂಡು ಸ್ಥಿರವಾಗುವ ಸ್ಥಳಾಂತರಗೊಂಡು ಚಲನಶೀಲತೆಯನ್ನು ಪಡೆದುಕೊಳ್ಳುವ ಗುಣವುಳ್ಳ ಐತಿಹ್ಯಗಳೂ ಘಟನೆಗೆ ಸಂಬಂಧಿಸಿದ ಸತ್ಯಾಂಶಗಳೊಂದಿಗೆ ಬೆಳೆಯುತ್ತಾ ಹೋಗುತ್ತವೆ. ವಾಸ್ತವಕ್ಕೆ ಹತ್ತಿರವಾಗುವ ಸುಳಿವು ಸೂಕ್ಷ್ಮತೆಗಳನ್ನು ಅರಿಯುವಂತೆ ಮಾಡುತ್ತವೆ.

ಅದೇ ರೀತಿ ಚರಿತ್ರೆ ಎಂಬ ಹೆಸರಿನಲ್ಲಿ ಏನನ್ನು ಬರೆದಿಡಲಾಗುತ್ತದೆಯೋ ಅದನ್ನು ನಿಜವೆಂದು ಕಟ್ಟುಕತೆಗಳಲ್ಲವೆಂದೂ ಹೇಳಲಾಗುತ್ತದೆ. ಇತಿಹಾಸ ಅದನ್ನು ಪ್ರಕಟಿಸುತ್ತದೆ. ಈ ಹಿನ್ನೆಲೆಯಲ್ಲಿ ಐತಿಹ್ಯಗಳನ್ನು ಕಟ್ಟುಕತೆಗಳೆಂದು ಅವು ನಿಜವಾಗಿ ನಡೆದಿರುವ ಸಾಧ್ಯತೆ ಕಡಿಮೆಯೆಂದು ಭಾವಿಸಲಾಗುತ್ತದೆ. ಆದರೆ ಯಾರು ಐತಿಹ್ಯವನ್ನು ನಿರೂಪಿಸುತ್ತಾರೋ ಅವರ ದೃಷ್ಟಿಯಿಂದ ಅದು ನಿಜವೋ ಆಗಿರುತ್ತದೆ. ಆ ನಿರೂಪಕನ ತಿಳುವಳಿಕೆಯ ಪರಿಧಿಯೊಳಗೆ ಅದು ನಿಜವಾಗಲೂ ಹಿಂದೆ ನಡೆದ ಘಟನೆಯೇ ಆಗಿರುತ್ತದೆ. ಇತಿಹಾಸದ ಬರಹಗಾರರು ತಮ್ಮ ಬರಹಕ್ಕೆ ಅಗತ್ಯವಾದ ಆಧಾರಗಳನ್ನು ನೀಡುವ ಹಾಗೆ ಐತಿಹ್ಯದ ನಿರೂಪಕರು ತಮ್ಮ ನಿರೂಪಣೆಗೆ ಅಗತ್ಯವಾದ ಆಧಾರಗಳನ್ನು ನೀಡುತ್ತಾರೆ. ಎಷ್ಟೋ ಬಾರಿ ಒಂದೇ ಆಕಾರದ ಮೇಲೆ ಚರಿತ್ರೆ ಮತ್ತು ಐತಿಹ್ಯಗಳೂ ಭಿನ್ನ ಸ್ವರೂಪದಲ್ಲಿ ಬೆಳೆದು ಬಿಡುತ್ತವೆ. ಈ ಆಧಾರಗಳು ಯಾವುದೂ ಆಗಬಹುದು. ಸ್ಥಳ, ಮನುಷ್ಯ, ವಸ್ತು, ಪುರಾಣ, ದಂತಕಥೆಗಳು ಐತಿಹ್ಯವಾಗಬಹುದು. ಯಾವುದು ಐತಿಹ್ಯವಾಗುತ್ತದೆಯೋ ಅದರ ಮುಖ್ಯ ಗುಣವೊಂದು ಐತಿಹ್ಯ ನಿರೂಪಣೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತದೆ. ಆಧಾರಗಳಿಲ್ಲದೆ ಐತಿಹ್ಯಗಳು ಹುಟ್ಟಿ ಬೆಳೆಯುವುದಿಲ್ಲ.

ಸರಿಯಾದ ಸ್ಥಳ ನಿರ್ದಿಷ್ಟ ಸಮಯ ಮತ್ತು ವ್ಯಕ್ತಿಯ ಬಗೆಗೆ ಯಾವ ಆತಂಕ ತಡವರಿಕೆ ಇಲ್ಲದೆ ವಿಷಯ ಮಂಡನೆ ಮಾಡುವ ಆತ ಕಣ್ಣೆದಿರುಗಿರುವ ಭೌತಿಕ ಆಧಾರಗಳಿಂದಲೇ ಅದನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾನೆ. ಇವೆಲ್ಲ ಸಾಮಾನ್ಯ ಜನರಿಗೂ ತಿಳಿದಿರುತ್ತದೆ. ಕಣ್ಣಿದ್ದವರಿಗೆ ಕಾಣಿಸುತ್ತದೆ. ಕಿವಿ ಇದ್ದವರಿಗೆ ಕೇಳಿಸುತ್ತದೆ. ನಿಮಗಿನ್ನೂ ತಿಳಿದಿಲ್ಲವೇ ಎಂಬ ಮಾತಿನ ದಾಟಿಯಲ್ಲಿ ಆತನ ನಿರೂಪಣೆ ಇರುತ್ತದೆ. ಜೊತೆಗೆ ತನ್ನಲ್ಲಿರುವ ಆಧಾರ ಸಾಮಾಗ್ರಿಗಳನ್ನು ನಿರೂಪಣೆಯಲ್ಲಿ ಮತ್ತೆ-ಮತ್ತೆ ಬಳಸಿಕೊಳ್ಳುತ್ತಾನೆ. ಹೀಗೆ ಮಾಡುವಾಗ ನಿರೂಪಣೆಯಲ್ಲಿರುವ ಅಮೂರ್ತಾಂಶಗಳೆಲ್ಲ ಗೌಣವಾಗುತ್ತದೆ. ಅದು ಅಲ್ಲಿರುವುದರಿಂದಲೇ ನಾನು ಅದನ್ನು ನಂಬಿದೆ ಇಲ್ಲದಿದ್ದರೆ ನಾನೆಲ್ಲಿ ನಂಬುತ್ತಿದ್ದೆ. ನನಗೂ ನಂಬಲಿಕ್ಕಾಗುವುದಿಲ್ಲ ಎಂದು ಹೇಳುವ ಮೂಲಕ

ಆತನು ಕಥೆಯನ್ನು ಅವನ ಪ್ರಕಾರ ಎಲ್ಲರೂ ನಂಬುವ ಹಾಗೆ ಮಾಡುತ್ತಾನೆ. ನಂಬಿದವರು ಅದನ್ನ ಮತ್ತೊಬ್ಬರಿಗೆ ಹೇಳಿ ಜನರ ಬಾಯಿಂದ ಬಾಯಿಗೆ ಅವು ಬೆಳೆಯುತ್ತಾ ಒಂದು ನೆಲೆಯನ್ನು ಕಂಡುಕೊಳ್ಳುತ್ತವೆ.

ಯಾವುದೇ ಒಂದು ಸ್ಥಳ ಅಂದರೆ ಅದಕ್ಕೆ ತನ್ನದೇ ಆದ ಒಂದು ಊರು ಎಂಬ ಹೆಸರು ಇರಲೇಬೇಕಾಗುತ್ತದೆ. ಆ ಊರು ಹುಟ್ಟಲು ಕಾರಣ ಸ್ವಲ್ಪಗೊತ್ತಿದ್ದರೆ ಅದನ್ನ ದೊಡ್ಡದಾಗಿ ಹೇಳುತ್ತಾ ಹೋಗುತ್ತಾರೆ. ಅದೇ ಆ ಊರಿನ ಹೆಸರು ಇರಬೇಕು ಎಂದು ಐತಿಹ್ಯ ಕಟ್ಟಿ ಬೆಳೆಯುತ್ತಾ ಮುಂದೆ ಸಾಗುತ್ತದೆ. ಹೋಗಿ ಎಲ್ಲೋ ಒಮ್ಮೆ ಅಧ್ಯಯನಕ್ಕೆ ತೊಡಗಿದಾಗ ಆ ಸ್ಥಳ ಅಥವಾ ವ್ಯಕ್ತಿ ಅದರ ಬಗ್ಗೆ ಐತಿಹ್ಯ ಹೀಗೆ ಇತ್ತು, ಕಾಲ ನಂತರದಲ್ಲಿ ಅದು ಬೆಳೆಯುತ್ತಾ ಬಂದಿದೆ ಎಂಬುದು ತಿಳಿಯಬೇಕಾಗುತ್ತದೆ. ಪ್ರತಿಯೊಂದು ಸ್ಥಳಕ್ಕೆ ಐತಿಹ್ಯಗಳು ಇರಲು ಸಾಧ್ಯವಿಲ್ಲ. ಅವುಗಳನ್ನ ಗಮನಿಸಬೇಕಾಗುತ್ತದೆ. ಹಾಗೆಯೇ ಹಿಂದಿನಿಂದಲೂ ಕೂಡಾ ಈ ಐತಿಹ್ಯಗಳು ಬೆಳೆಯುತ್ತಾ ಬಂದಿವೆ.

ಅಡಿಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., **ಜನ-ಜನಪದ-ಜಾನಪದ,** ಪು.೬೭

೨. ಅದೇ, ಪು.೬೬

೩. **ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು(ಸಂ.೧),** ಪು.೧೧೭೬

೪. ಸುಬ್ಬಣ್ಣ ರೈ, **ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು,** ಪು.೫-೪

೫. ನೇಗಿನಹಾಳ ಎಂ.ಬಿ., **ನೇಗಿನಹಾಳ ಪ್ರಬಂಧಗಳು,** ಪು.೨೭೩

೬. ಪರಮಶಿವಯ್ಯ ಜಿ.ಶಂ, **ಕರ್ನಾಟಕ ಜಾನಪದ,** ಪು.೩೦೬

೭. ಕರಿಬಸಪ್ಪ ಎ., **ಬಳ್ಳಾರಿ ಜಿಲ್ಲೆಯ ಐತಿಹ್ಯಗಳು,** ಪು.೧೩

೮. ಅದೇ, ಪು.೧೨

೯. ಚಂದ್ರಶೇಖರ ಕಂಬಾರ(ಸಂ), **ಕನ್ನಡ ಜಾನಪದ ವಿಶ್ವಕೋಶ,** ಪು.೨೫೦

೧೦. **ಇಂಗ್ಲೀಷ್-ಕನ್ನಡ ನಿಘಂಟು,** ಕನ್ನಡಸಾಹಿತ್ಯ ಪರಿಷತ್ತು, ಪು.೬೬೦

೧೧. Kittel R.F. **Kannada-English dictionary,** p.296

೧೨. ಪುರುಷೋತ್ತಮ ಬಿಳಿಮಲೆ, **ಕರಾವಳಿ ಜಾನಪದ,** ಪು.೪೯

೧೩. ವಸಂತಕುಮಾರ ತಾಳ್ತಜೆ, **ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು,** ಪು.೧೨೧

೧೪. ಪುರುಷೋತ್ತಮ ಬಿಳಿಮಲೆ, **ಕರಾವಳಿ ಜಾನಪದ,** ಪು.೭೪

೧೫. ಗಣೇಶ್ ಕೆ.ಆರ್.(ಪ್ರ.ಸಂ.), **ಗುಣಮಧುರ**(ದೇವರಕೊಂಡಾರೆಡ್ಡಿ ಅವರ ಅಭಿನಂದನ ಗ್ರಂಥ), ಪು.೪೫೯

೧೬. ಅದೇ, ಪು.೪೫೯

೧೭. ಸಂಧ್ಯಾರೆಡ್ಡಿ ಕೆ.ಆರ್., **ಐತಿಹ್ಯಗಳ ಐತಿಹಾಸಿಕ ವಿಶ್ಲೇಷಣೆ,** ಪು.೭೯

೧೮. ನಾಯಕರ ಹುಲುಗಪ್ಪ, **ಕನ್ನಡ ಶಾಸನಗಳಲ್ಲಿ ಪುರಾಣ ಪರಿಕಲ್ಪನೆ**(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಪು.೮೫

೧೯. ಕರಿಬಸಪ್ಪ ಎ., **ಪೂರ್ವೋಕ್ತ,** ಪು.೧೦

ಅಧ್ಯಾಯ ಮೂರು

ಶಾಸನೋಕ್ತ ಐತಿಹ್ಯಗಳು

ಅಧ್ಯಾಯ ಮೂರು

ಶಾಸನೋಕ್ತ ಐತಿಹ್ಯಗಳು

ಐತಿಹ್ಯಗಳು ನಮ್ಮ ಸಂಸ್ಕೃತಿಯ ಪ್ರತೀಕ ಮತ್ತು ಸಂಸ್ಕೃತಿಯ ಭಾಗವೆಂದರೆ ತಪ್ಪಾಗಲಾರದು. ಐತಿಹ್ಯಗಳು ಒಂದು ಘಟನೆ ಹೀಗೆ ನಡೆದಿತು ನಡೆದಿರಲಾರದು ಎಂಬುದನ್ನು ಕುರಿತು ಪ್ರತಿಪಾದಿಸುತ್ತವೆ. ಇಡೀ ಭಾರತೀಯ ಪರಂಪರೆಯಲ್ಲಿ ಐತಿಹ್ಯಗಳು ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಸ್ಥಳನಾಮ, ವ್ಯಕ್ತಿ, ಪ್ರಾಣಿ, ಬೆಟ್ಟ, ಗುಡ್ಡ, ಕೋಟೆ, ನದಿ, ಪರ್ವತ ಮೊದಲಾದವುಗಳ ಬಗ್ಗೆ ಐತಿಹ್ಯಗಳು ಹುಟ್ಟಿಕೊಳ್ಳುತ್ತವೆ. ಅವು ದಂತಕಥೆ, ಪುರಾಣ, ಐತಿಹ್ಯ ರೂಪದಲ್ಲಿ ಕಂಡುಬರುತ್ತವೆ. ಇಂತಹ ಐತಿಹ್ಯಗಳು ಶಾಸನದಲ್ಲಿ ಹೇಗೆ ಎಂಬುದರ ಬಗ್ಗೆ ತಿಳಿಯಬಹುದು. ಐತಿಹ್ಯಗಳು ಶಾಸನಗಳಲ್ಲಿ ಲಿಖಿತ ದಾಖಲೆಗಳನ್ನು ನೀಡುತ್ತವೆ. ಅವು ಹೀಗೆ ನಡೆದಿದ್ದವು ಎಂದು ಶಾಸನಗಳ ಹಿನ್ನೆಲೆಯಲ್ಲಿ ಉಲ್ಲೇಖ ಮಾಡಿರುವುದು ಕಂಡುಬರುತ್ತವೆ. ಶಾಸನಗಳೂ ಶಿಷ್ಟ ಪರಂಪರೆಯಿಂದ ಬಂದಿದಾದರೂ ಕೂಡಾ ಶಾಸನಗಳಲ್ಲಿ ಹೇಳುವ ವ್ಯಕ್ತಿ ಚರಿತ್ರೆಯನ್ನು ಹೇಳುವಾಗ ಶಾಸನ ಕವಿ ಆ ಸ್ಥಳ ವ್ಯಕ್ತಿಯ ಮಹತ್ವವನ್ನು ಅಸಾಮಾನ್ಯ ರೀತಿಯಲ್ಲಿ ಚಿತ್ರಿಸುವ ಸಲುವಾಗಿ ಅಥವಾ ಅದರ ಮೌಲ್ಯ ಹೆಚ್ಚಿಸುವ ಸಲುವಾಗಿ ಈ ಪುರಾಣದಂತಹ, ದಂತಕಥೆಯಂತಹ ಐತಿಹ್ಯಗಳನ್ನು ಶಾಸನಗಳಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತವೆ. ಶಾಸನಗಳು ಇತಿಹಾಸ ರಚನೆಗೆ ಪ್ರಮುಖ ದಾಖಲೆಗಳಾಗಿವೆ. ಸ್ಥಳ, ವ್ಯಕ್ತಿಯ ಹಿರಿಮೆಯನ್ನು ಎತ್ತಿ ಹಿಡಿಯುತ್ತವೆ.

ಉಚ್ಚಂಗಿದುರ್ಗವು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನಲ್ಲಿದ್ದು ಹರಪನಹಳ್ಳಿಯಿಂದ ದಕ್ಷಿಣಕ್ಕೆ ದಾವಣಗೆರೆಯಿಂದ ಉತ್ತರಕ್ಕೆ ೨೮ ಕಿ.ಮೀ. ಸಮಾನ ಅಂತರದಲಿದೆ. ಈ ಉಚ್ಚಂಗಿದುರ್ಗವನ್ನು ಅನೇಕ ರಾಜಸಂತತಿಗಳು ಆಳ್ವಿಕೆ ನಡೆಸಿವೆ. ಇಲ್ಲಿ ಅನೇಕ-ಶಾಸನಗಳು ಕಂಡುಬಂದಿದ್ದು, ಅದರಲ್ಲಿ ಉಚ್ಚಂಗಿದುರ್ಗ ಎಂದು ಹೆಸರು ಬರಲು ಕಾರಣ ಆ ಸ್ಥಳದಲ್ಲಿ

ಹಿಂದೆ ಯಾರು ಇದ್ದರೂ ಈಗ ಯಾರು ನೆಲೆಸಿದ್ದಾರೆ ಎಂಬುದನ್ನು ಈ ಶಾಸನದಲ್ಲಿ ತಿಳಿಸಲಾಗಿದ್ದು, ಈ ಶಾಸನವು ದಂತಕಥೆಯನ್ನು ತಿಳಿಸುತ್ತದೆ.

ಈ ಉಚ್ಚಂಗಿ ದುರ್ಗ ಪ್ರದೇಶದಲ್ಲಿ ಅತೀ ಪ್ರಾಚೀನಕಾಲದಿಂದಲೂ ಜನರು ನೆಲೆಸಿರುವುದಕ್ಕೆ ಕುರುಹುಗಳಿವೆ. ಬೆಟ್ಟದ ಮೇಲಿರುವ ನೆಲೆಯನ್ನು ಅವಲೋಕಿಸಿದಾಗ ಅಲ್ಲಿ ದೊರೆತ ಅವಶೇಷಗಳು ಯಾವುದೆಂದರೆ ಬೂದುಬಣ್ಣದ ಮಡಿಕೆ ಚೂರುಗಳು ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆ ಚೂರುಗಳೊಂದಿಗೆ ಮತ್ತಿತರ ಅವಶೇಷಗಳು ದೊರೆತಿವೆ. ಬೂದುಬಣ್ಣದ ಮಣ್ಣಿನಿಂದ ಕೂಡಿದ ದಿಬ್ಬದಲ್ಲಿ ಈ ಮೇಲಿನ ಅವಶೇಷಗಳು ಪದರ ಪದರವಾಗಿ ದೊರೆಯುತ್ತವೆ. ಬನಶಂಕರಿ ದೇವಾಲಯದ ಮುಂದಿನ ಪ್ರದೇಶವು ಪ್ರಾಚೀನ ನೆಲೆಯಾದಿತ್ತೆಂಬುದು ಅಲ್ಲಿನ ಬೂದು ಮತ್ತು ಮಡಿಕೆಯ ಅವಶೇಷಗಳಿಂದ ತಿಳಿದುಬರುವುದು. ಈ ನೆಲೆಯಲ್ಲಿ ವೈಜ್ಞಾನಿಕ-ವಿಧಾನಗಳ ಮೂಲಕ ಪರಿಶೀಲಿಸುವ ಅಗತ್ಯವಿದೆ. ಈ ಸ್ಥಳಕ್ಕೆ ನಾಲ್ಕು ಯುಗಗಳಲ್ಲಿ ನಾಲ್ಕು ಹೆಸರುಗಳಿದ್ದು, ಈ ಹೆಸರುಗಳಿಂದ ಇದರ ಪ್ರಾಚೀನತೆಯನ್ನು ತಿಳಿಸುತ್ತದೆ.

೩.೧. ಶಾಸನದಲ್ಲಿ ಉಚ್ಚಂಗಿದುರ್ಗದ ಉಚ್ಚಂಗಮ್ಮ

ಹರಪನಹಳ್ಳಿ ತಾಲೂಕಿನ ಉಚ್ಚಂಗಿ ದುರ್ಗದ ಒಂದು ಶಾಸನ(ಸ-೬) ಚಾಲುಕ್ಯದೊರೆ ಅಹವಮಲ್ಲದೇವ ಮತ್ತು ಆತನ ಮಗ ವೆಂಗಿ ಮಂಡಳೇಶ್ವರ ವಿಷ್ಣುವರ್ಧನ ಮಹಾರಾಜ ವಿಜಯಾದಿತ್ಯದೇವ ನೊಳಂಬವಾಡಿ ೩೨೦೦೦ ಆಳುತ್ತಿದ್ದುದಾಗಿ ಹೇಳುತ್ತದೆ. ಶಾಸನ ಕಾಲ ಕ್ರಿ.ಶ.೧೦೬೪ ಏಪ್ರಿಲ್ ೪ ಭಾನುವಾರ.[೧]

ಈ ಶಾಸನ ತುಂಬಾ ಅಪರೂಪವೆಂಬಂತೆ ಉಚ್ಚಂಗಿದುರ್ಗದ ಬೆಟ್ಟಕ್ಕೆ ಉಚ್ಚಂಗಿ ಎಂಬ ಸ್ಥಳನಾಮ ಬರಲು ಕಾರಣವಾದ ಸಂಗತಿಯನ್ನು ಅತಿಶಯ ಬಣ್ಣನೆಯೊಡನೆ ಕಥೆಯಾಗಿ ಹೇಳಲಾಗಿದೆ. ಸ್ಥಳನಾಮಗಳ ಬಗೆಗಿನ ಶಾಸನಕಾರನ ಆಸಕ್ತಿ ಮತ್ತು ಕುತೂಹಲ ಇಲ್ಲಿ ಪ್ರಶಂಸನೀಯ ಅಂಶ. ಇದು ಶಾಸನದ ಉತ್ತರಾರ್ಧದಲ್ಲಿ ಕಂಡುಬರುವ ವಿಷಯ.

"ಕದಂಬಾವಾಡಿನಾಡ ಮಧ್ಯದೊಳ್ಮೇರುವಿಪ್ಪಂತಿಟ್ಟುದುಚ್ಚಂಗಿಯ ಪರ್ವ್ವತಂ ಅದಕ್ಕೆ ನಾಲ್ಕು ನಾಮೆವದೆಂತೆಂದೊಡೆ ಕೃತಯುಗದೊಳು ಮೇ(ಘನಾ)ದನೆಂಬ ರಾಕ್ಷಸ ನಿವಾಸಮಪ್ಪುದಱಿೞಂ ಮೇಘನಾದವೆಂಬುದು ತ್ರೇತೆಯೊಳ್ ಹಿರಣ್ಯಕ ನಿವಾಸಮಾತನ ನಾರಾಯಣಂ ವಧೆಗೆಯ್ದಂದಿನೊಸಗೆಯೊಳ್ ಸ್ವರ್ಣ್ನವೃಷ್ಟಿ ಕಱೆದುದಱಿಂ ವೀರಕನಕಗಿರಿಯೆಂಬುದು ದ್ವಾಪಾರದೊಳುತ್ತಂಗಮಹರಿಷಿ ಆಶ್ರಮಮಪ್ಪುಱಿದಂ ಉತ್ತುಂಗಪರ್ವ್ವತವೆಂಬುದು ಕಲಿಯುಗದೊಳ್ ಉಚ್ಚಂಗಿಯ

ಬ್ಬೆಯೆಂಬಳು ಮೊದಲಾಗಿ ಮೂವರು ಬ್ರಾಹ್ಮಣಕನ್ನಿಕೆಯರು ತಪಂಗೆಯ್ದೀಶ್ವರ ವರ ಪ್ರಸಾದದಿಂ ದೇವತ್ವಮಂ ಪಡೆದರದಱಿಂದುಚ್ಚಂಗಿಯಾ ಪರ್ವ್ವತಮೆಂಬುದು.[೨]

ಕದಂಬವಾಡಿ ನಾಡಿನ ಮಧ್ಯದಲ್ಲಿ ಮೇರುಪರ್ವತಕ್ಕೆ ನಾಲ್ಕು ಹೆಸರುಗಳಿವೆ. ಕೃತಯುಗದಲ್ಲಿ ಮೇಘನಾದನೆಂಬ ರಾಕ್ಷಸನ ನಿವಾಸವಾಗಿದ್ದುದರಿಂದ ಅದಕ್ಕೆ ಮೇಘನಾದವೆಂದೂ, ತ್ರೇತಾಯುಗದಲ್ಲಿ ಹಿರಣ್ಯಕನೆಂಬುವವರು ನಿವಾಸವಾಗಿದ್ದು ಆತನನ್ನು ನಾರಾಯಣನು ವಧೆ ಮಾಡಿ ಸುವರ್ಣ ವೃಷ್ಠಿಗರೆದಿದ್ದರಿಂದ ವೀರಕನಕ ಗಿರಿಯೆಂದೂ, ದ್ವಾಪರದಲ್ಲಿ ಉತ್ತುಂಗ ಮಹರ್ಷಿಯು ವಾಸವಾಗಿದ್ದುದರಿಂದಾಗಿ ಉತ್ತುಂಗಪರ್ವತ ಎಂದೂ, ಕಲಿಯುಗದಲ್ಲಿ ಉಚ್ಚಂಗಿಯಮ್ಮ ಎಂಬುವವಳು ಮೊದಲಾಗಿ ಮೂವರು ಬ್ರಾಹ್ಮಣ ಕನ್ನಿಕೆಯರು ಈಶ್ವರನನ್ನು ಕುರಿತು ತಪಸ್ಸನ್ನಾಚರಿಸಿ ದೇವತ್ವವನ್ನು ಪಡೆದರು. ಅದರಿಂದಾಗಿ ಉಚ್ಚಂಗಿ ಪರ್ವತ ಎಂದು ಹೆಸರಾಯಿತೆಂದು ಶಾಸನದಲ್ಲಿ ಉಲ್ಲೇಖಗೊಂಡಿದೆ.

ಇಲ್ಲಿ ಒಂದು ಪ್ರಶ್ನೆ ಮತ್ತು ಕುತೂಹಲದ ವಿಷಯವೆಂದರೆ ಶಾಸನಗಳಲ್ಲಿ ಕಂಡಿಸುವ ಮಾಮೂಲೀ ಸಂಗತಿಗಳನ್ನು ಹೇಳ ಹೊರಟ ಶಾಸನಕಾರನು ಒಟ್ಟು ಶಾಸನದ ಮೂವತ್ತೆಂಟು ಸಾಲುಗಳ ಪೂರ್ವಾರ್ಧದಲ್ಲಿ ಸಾಮಾನ್ಯ ಸಂಗತಿಗಳನ್ನು ನಿರೂಪಿಸಿ ಉತ್ತರಾರ್ಧದ ಏಳು ಸಾಲುಗಳಲ್ಲಿ ಅಚ್ಚರಿ ತರುವ ವಿಷಯವನ್ನು ಹೇಳಿದ್ದಾನೆ. ಉಚ್ಚಂಗಿದುರ್ಗದ ಮಹತ್ವತೆ, ಶ್ರೇಷ್ಠತೆ ಮತ್ತು ಪಾರಮ್ಯತೆಗಳನ್ನು ಲೋಕಪಡಿಸುವ ಉದ್ದೇಶ ಅವನಿಗಿರುವಂತೆ ಕಾಣುತ್ತದೆ. ಶಾಸನಕಾರನು ಪ್ರಾಕೃತಿಕವಾದ ಸಂಗತಿಯೊಂದನ್ನು ಐತಿಹಾಸಿಕ ಮತ್ತು ಪೌರಾಣಿಕ ಸಂಗತಿಯನ್ನಾಗಿಸಲು ಹೊರಟಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ವಾಸ್ತವ ಏನೆಂದರೆ ಉಚ್ಚಂಗಿ ಶಬ್ದದ ನಿಷ್ಪತ್ತಿ ಉಚ್ಚಶೃಂಗಿ ಎಂದು, ಅತ್ಯಂತ ಎತ್ತರವಾದ ಶಿಖರವುಳ್ಳದ್ದು ಎಂಬುದು ಅದರರ್ಥ. ಕಾಲಕ್ರಮೇಣ ಉಚ್ಚಾರಣೆಯಲ್ಲಿ ಆ ಪದ ಹೀಗೆ ಬದಲಾವಣೆ ಹೊಂದಿದೆ ಎಂದು ಭಾವಿಸಲು ಏನೂ ಅಡ್ಡಿಯಿಲ್ಲ. ಈಗಲೂ ಜನರು ಇದನ್ನು ಉಚ್ಚಂಗಿ, ಉಚ್ಚಂಗಿದುರ್ಗ ಎಂದು ಕರೆಯುತ್ತಾರೆ. ಇದಲ್ಲದೇ ಅನೇಕ ಶಾಸನಗಳಲ್ಲಿ ಕೂಡಾ ಉಚ್ಚಂಗಿದುರ್ಗ ಎಂದು ಮತ್ತೆ ಉಚ್ಚಂಗಮ್ಮನ ಬಗ್ಗೆ ಶಾಸನೋಕ್ತವಾಗಿ ಈ ಶಾಸನದಲ್ಲಿ ತಿಳಿಸಲಾಗಿದೆ.[೩]

ಹೀಗೆಯೇ ಶಾಸನಗಳ ಮೂಲಕ ಐತಿಹಾಸಿಕ ಮತ್ತು ಪೌರಾಣಿಕ ಸಂಗತಿಗಳನ್ನು ತಿಳಿಯಬಹುದು. ಇವುಗಳಿಂದ ಹಿಂದೆ ನಡೆದಂತಹ ವಿಚಾರಗಳು ಬೆಳಕಿಗೆ ಬರುತ್ತವೆ. ಇತಿಹಾಸವನ್ನು ಕಟ್ಟುವಲ್ಲಿ ಶಾಸನಗಳು ಸಾಕ್ಷಿಯಾಗಿವೆ.

೩.೧.೧ ಪುರಾಣದಲ್ಲಿ ಜನಪದೀಯ ಅಂಶಗಳಲ್ಲಿ ಉಚ್ಚಂಗಮ್ಮ

'ಐತಿಹ್ಯ' 'ಪುರಾಣ'ಗಳಿಗೆ (Myth) ವ್ಯತ್ಯಾಸವನ್ನು ತೋರಿಸುವುದು ಸುಲಭವಲ್ಲ, ಅದನ್ನು ಕುರಿತು ವಿವೇಚಿಸುವ ಮೊದಲು 'ಪುರಾಣ'ದ ಬಗ್ಗೆ ಪ್ರಾಚೀನ ಭಾರತೀಯ ಕಲ್ಪನೆ ಏನಿತ್ತು ಎಂಬುದನ್ನು ನೋಡೋಣ. 'ಪುರಾಣ'ವು 'ಪುರಾ'ದಿಂದ ಬಂದದ್ದು. 'ಪುರಾ' ಎಂದರೆ ಹಳೆ ಯದು(ನೋಡಿ–ಪುರಾಣವಾಪಿ=ಹಳೆಯಬಾವಿ). ನಮ್ಮ ಪ್ರಾಚೀನರಿಗೆ ಇತಿಹಾಸ ಪುರಾಣಗಳೆರಡೂ ವಾಸ್ತವಗಳೇ. ಆದರೆ ಅವುಗಳಿಗೆ ಈ ವ್ಯತ್ಯಾಸವನ್ನು ಮಾಡುವಂತೆ ತೋರುತ್ತದೆ. ಇತಿಹಾಸವು ಕಾಲಮಾನದಲ್ಲಿ ಸ್ವಲ್ಪ ಈಚೆಗೆ ನಡೆದದ್ದನ್ನು ಹೇಳಿದರೆ, ಪುರಾಣ ಅದಕ್ಕಿಂತ ಬಹುಹಿಂದೆ ನಡೆದದ್ದನ್ನು ಹೇಳುತ್ತದೆ(ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ, ಒಂದು History, ಇನ್ನೊಂದು pre-History ಅಥವಾ Proto-History).

ಆದ್ದರಿಂದಲೇ ಪುರಾಣಗಳಲ್ಲಿ ಸರ್ಗ, ಪ್ರತಿಸರ್ಗ, ಮನ್ವಂತರ ಇತ್ಯಾದಿಗಳ ವರ್ಣನೆ ಇರಬೇಕು ಎಂಬ ವಿವರಣೆಯನ್ನು ಹಿಂದಿನವರು ಕೊಟ್ಟಿರುವುದು ಒಟ್ಟು ಸೃಷ್ಟಿಯ ರಚನೆ(ಸರ್ಗ) ಅದರಲ್ಲಿ ಈ ಭೂಮಂಡಲದ ಸೃಷ್ಟಿ (ಪ್ರತಿಸರ್ಗ) ಇಲ್ಲಿ ಅಳಿದ ಆದಿ ದೇವಮಾನವರು, ರಾಜರು ಇವೇ ಮೊದಲಾದ ಸಂಗತಿಗಳು ಪುರಾಣಗಳಲ್ಲಿ ಬರುತ್ತವೆ ಎಂದರೆ ಪುರಾಣಗಳು ಸೃಷ್ಠಿಯ ಆದಿಯಿಂದ ಮನುಕುಲದ ಚರಿತ್ರೆಯನ್ನು ಹೇಳುವ ಉದ್ದೇಶವನ್ನು ಹೊಂದಿರುತ್ತವೆ. ಪುರಾಣವು ಈ ಅಖಂಡ ಸೃಷ್ಟಿಯನ್ನು ಹೊಂದಿರುವುದರಿಂದ ಅದರಲ್ಲಿ ಮನುಷ್ಯನ ಲೌಕಿಕ ಆಧ್ಯಾತ್ಮಿಕ ಸಿದ್ದಿಗಳೆಲ್ಲವನ್ನೂ ತರಲು ಅವಕಾಶವುಂಟು. ಜನಜೀವನದ ಮೇಲೆ ಪುರಾಣಗಳ ಪ್ರಭಾವ ಅಪರಿಮಿತವಾದುದು.

ಒಬ್ಬ ದೇವತೆಯ ಮೂಲ ಮತ್ತು ಹೆಸರು ಬಂದ ಬಗೆಯನ್ನು ತಿಳಿಯಲೆತ್ನಿಸಿದಲ್ಲಿ ಪುರಾಣಗಳನ್ನು ಅವಲೋಕಿಸಲೇ ಬೇಕಾಗುವುದು. ಇತಿಹಾಸಕ್ಕೆ ಕೆಲವು ಸಂದರ್ಭಗಳಲ್ಲಿ ಇವು ಮುಖ್ಯ ಆಕರಗಳಾಗಿವೆ. ಅಂತವುಗಳಲ್ಲಿ ಉಚ್ಚಂಗೆಮ್ಮ ದೇವತೆಯ ಬಗೆಗೆ ಇರುವ ಪುರಾಣಗಳನ್ನು ಇಲ್ಲಿ ತಿಳಿಯಲು ಪ್ರಯತ್ನಿಸಿದೆ.

ರೇಣುಕಾ ಎಲ್ಲಮ್ಮನ ಜೀವನ ವೃತ್ತಾಂತ ಮತ್ತು ಪರಶುರಾಮ ಪಿತೃ ಆಜ್ಞೆ ಪಾಲನೆಗಾಗಿ ಎಲ್ಲಮ್ಮ ತಲೆಯನ್ನು ನೂರಾ ಒಂದು ಬಾರಿ ಕಡಿದನೆಂದು ಅವು ಬೇರೆ–ಬೇರೆ ದಿಕ್ಕಿಗೆ ಬಿದ್ದವೆಂದು ಅವುಗಳಲ್ಲಿ ಹುಲಿಗೆಮ್ಮ, ಸೌದತ್ತಿ ಎಲ್ಲಮ್ಮ, ಮಾಂತಗೆಮ್ಮ, ಬಳ್ಳಾರಿ ದುರ್ಗಮ್ಮ, ಹೊಸೂರಮ್ಮ, ಸಿರ್ಸಿಮಾರಮ್ಮ, ಉಚ್ಚಂಗಿ ಎಲ್ಲಮ್ಮ, ಮೂರ್ತಿಗಳಾದವು. ಉಚ್ಚಂಗಿ ಎಲ್ಲಮ್ಮನ ಮೂಲ ರೇಣುಕಾ ಎಲ್ಲಮ್ಮನಿಂದ ಬಂದುದು ಎಂಬ ಒಟ್ಟಾರೆ ಅಭಿಪ್ರಾಯ ಈ ಕಥೆಯಿಂದ ವ್ಯಕ್ತಪಟ್ಟಿದೆ.[೪]

ವೈದಿಕ ದೇವತೆಗಳ ಹುಟ್ಟು ಬೆಳವಣಿಗೆ ತಿಳಿಯಬೇಕಾದರೆ ಪುರಾಣಗಳ ಮೊರೆ ಹೋಗುತ್ತೇವೆ. ಅವು ಅಧಿಕ ಪ್ರಮಾಣದಲ್ಲಿವೆ. ಉದಾಹರಣೆ ವಿಷ್ಣುಪುರಾಣ, ವಾಯುಪುರಾಣ, ಬ್ರಹ್ಮಪುರಾಣ. ಹೀಗೆ ೧೮ ಪುರಾಣಗಳಿವೆ. ಆದರೆ ಉಚ್ಚಂಗೆಮ್ಮನ ಹೀಗೆ ತಿಳಿಯಲು ಸರಿಯಾದ ಪುರಾಣದ ಆಕರಗಳಿಲ್ಲ. ಆಕರಗಳು ಇಲ್ಲದೆ ಇದ್ದರೆ ಅವುಗಳನ್ನ ತಿಳಿಯಲು ಕಷ್ಟಸಾಧ್ಯವಾಗುತ್ತದೆ.

ಜನಪದೀಯ ಅಂಶಗಳಲ್ಲಿ ಉಚ್ಚಂಗೆಮ್ಮ

ಜನಪದರು ತಮಗೆ ಸರಿ ಎನಿಸಿದ್ದನ್ನು ಸರಿಯೆಂದು ಕಂಡುಕೊಂಡ ಸತ್ಯಗಳನ್ನು ಮೌಖಿಕ ಪರಂಪರೆಯಲ್ಲಿ ಅಳಿಯದೆ ಉಳಿಸಿಕೊಂಡ ಪ್ರಕಾರವಾಗಿ ಐತಿಹ್ಯವು ಪ್ರಮಾಣೀಕೃತ ವಾಯಿತು. ನಿರ್ದಿಷ್ಟ ವಸ್ತು-ವಿಷಯಗಳಿಗೆ ಅಂಟಿಕೊಂಡು ಸ್ಥಿರವಾಗುವ ಸ್ಥಳಾಂತರಗೊಂಡು ಚಲನಶೀಲತೆಯನ್ನು ಪಡೆದುಕೊಳ್ಳುವ ಗುಣವುಳ್ಳ ಐತಿಹ್ಯಗಳು ಘಟನೆಗೆ ಸಂಬಂಧಿಸಿದ ಸತ್ಯಾಂಶಗಳನ್ನು ವಾಸ್ತವಕ್ಕೆ ಹತ್ತಿರವಾಗುವ ಸುಳಿವು-ಸೂಕ್ಷ್ಮತೆಗಳನ್ನು ಅರಿಯುವಂತೆ ಮಾಡುತ್ತವೆ. ಲೌಕಿಕ-ಅಲೌಕಿಕತೆಗಳೆರಡನ್ನೂ ಒಗ್ಗೂಡಿಸಿ ನೆಲದ ಒಡಲಿಗೆ ತಂದು ಸಮೀಕರಿಸುವ ಆಶಯವುಳ್ಳವೂ ಆಗಿರುತ್ತವೆ. ಎಲ್ಲಿಯೋ ಎಂದೋ ನಡೆದು ಹೋದ ಘಟನೆ ಇತಿಹಾಸವು ಲಿಖಿತ ಪುಟಗಳಲ್ಲಿ ದಾಖಲಾಗಿ ಭೂತಕಾಲಕ್ಕೆ ಸೇರುತ್ತದೆ. ಆದರೆ ಐತಿಹ್ಯದಲ್ಲಿ ಖಚಿತವಾಗಿ ಎಂದು ನಡೆದಿದೆ ಎಂದು ದಾಖಲಿಸುವ ಬದಲು ವರ್ತಮಾನಕ್ಕೆ ಅನ್ವಯಿಸುವ ಪ್ರಯತ್ನ ಮಾಡುತ್ತಾರೆ. ನಿರೂಪಕ ಮತ್ತು ಕೇಳುಗರಲ್ಲಿ ಐತಿಹ್ಯದ ಸಂವಹನವೇರ್ಪಡುವಾಗಲೆಲ್ಲ ಅದು ವರ್ತಮಾನದ ಪ್ರಕ್ರಿಯೆಯಾಗುತ್ತದೆ.

ಶಿವಮೊಗ್ಗ ಜಿಲ್ಲೆಯ ಹಿರೇಮಾವುರಿನಿಂದ ಬಂದ ಈ ದೇವತೆ ಮ್ಯಾಗಳಗೇರಿಯಲ್ಲಿ ವಾಸ್ತವ್ಯ ಮಾಡಿದಳಂತೆ. ತನ್ನ ಮನಸ್ಸಿನ ಇಚ್ಛೆಯಂತೆ ಮ್ಯಾಗಳಗೇರಿಯಿಂದ ಪೂರ್ವಕ್ಕೆ ಪ್ರಯಾಣ ಬೆಳೆಸಿದಳು. ಬೇಸಿಗೆ ಕಾಲವಾದ್ದರಿಂದ ದಣಿವಾರಿಸಿಕೊಳ್ಳಲು ಇಂದಿನ ಉಚ್ಚಂಗಿದುರ್ಗದ ಪಶ್ಚಿಮಕ್ಕಿರುವ ಮರದ ತೋಪಿನಲ್ಲಿ ಕುಳಿತುಕೊಳ್ಳಲು ಇಂದಿನ ಉಚ್ಚಂಗಿದುರ್ಗದ ಪಶ್ಚಿಮಕ್ಕಿರುವ ಮರದ ತೋಪಿನಲ್ಲಿ ಕುಳಿತುಕೊಳ್ಳಲಾಗಿ ಮತ್ತು ಬಾಯಾರಿಕೆಯಾದ್ದರಿಂದ ನೀರಿಗಾಗಿ ಹಂಬಲಿಸಿ ದಳು. ಆಗ ಅಲ್ಲೆ ಇದ್ದ ಕುರುಬರು ತಮ್ಮ ಬಳಿಯೂ ನೀರಿಲ್ಲದಿದ್ದರಿಂದ ಕುರಿಯ ಹಾಲನ್ನೇ ಕೊಟ್ಟರಂತೆ ಅದನ್ನೇ ಕುಡಿದು ಬಾಯಾರಿಕೆ ಕಳೆದುಕೊಂಡು ಇವಳು ಇಲ್ಲಿಗೆ ಬರುವ ಜನರಿಗೆಲ್ಲ ಹಾಲಿನಂತೆ ನೀರು ಸಿಗಲೆಂದು ಹರಸಿದಳಂತೆ. ಅಲ್ಲಿಂದ ಮುಂದುವರೆದು ಅವಳು ಬೆಟ್ಟದ ಮೇಲೆ ನೆಲೆಸಿದ್ದಳೆಂದು ಈ ಹಿಂದೆ ಈ ಸ್ತ್ರೀ ದಣಿವಾರಿಸಿಕೊಳ್ಳಲು ಕುಳಿತುಕೊಂಡ ಪ್ರದೇಶದಲ್ಲಿ ಕುರುಬರು ಬಾವಿ ತೆರೆಯಲಾಗಿ ಅಲ್ಲಿ ಹಾಲಿನಂತ ನೀರು ಕಂಡುಬಂದರಂತೆ

ಹೀಗೆ ಸುತ್ತಲಿನ ಜನತೆಗೆ ದೇವಿಯಾಗಿ ಮಾರ್ಪಾಡಾದಳೆಂದು ಆಕೆ ನೆಲಸಿದ ಪರ್ವತ ಉಚ್ಚ ಎತ್ತರವಾದ್ದರಿಂದ ಉಚ್ಚಂಗಿ ದೇವಿಯಾದಳು. ಈ ಸ್ಥಳಕ್ಕೆ ಉಚ್ಚಂಗಿ ಎಂದು ಅಲ್ಲಿಯ ಅರ್ಚಕರಾನೇಕರು ಅಭಿಪ್ರಾಯಪಟ್ಟಿದ್ದಾರೆ.[೫] ಮತ್ತು ಉಚ್ಚಂಗೆಮ್ಮ ಕುಳಿತುಕೊಂಡಿದ್ದ ತೋಪಿಗೆ ಹಾಲಮ್ಮನ ತೋಪು, ಆಕೆ ನೆಲಸಿದ್ದ ಮ್ಯಾಗಳ ಕೇರಿಯಲ್ಲಿ ಆಕೆಯ ಗುಡಿಯಿರುವುದರಿಂದ ಇದನ್ನು ಅವರು ಸಮರ್ಥಿಸಿಕೊಳ್ಳುತ್ತಾರೆ.

ಮತ್ತೊಂದು ರೀತಿ ಜನಪದ ನಂಬಿಕೆಯಂತೆ ಹಿಂದೆ ಉಚ್ಚಂಗಿ ಬೆಟ್ಟದ ಮೇಲೆ ಸಿದ್ಧರು ವಾಸಿಸುತ್ತಿದ್ದರು. ಅವರು ಸುತ್ತಮುತ್ತಲಿನ ಗ್ರಾಮಗಳಿಂದ ಭಿಕ್ಷೆ ಬೇಡಿಕೊಂಡು ಬರುತ್ತಿದ್ದರು. ಮಾಯ, ಮಾಟ, ಮಂತ್ರ, ಮಾಡಿ ಜನರನ್ನು ಭೀತಿಗ್ರಸ್ಥರನ್ನಾಗಿ ಮಾಡಿದ್ದರು. ಇದರಿಂದ ಉಚ್ಚಂಗಿಯ ಮತ್ತು ಸುತ್ತಲಿನ ಜನತೆ ತುಂಬಾ ಭೀತರಾಗಿದ್ದರು. ಈ ಸಂದರ್ಭದಲ್ಲಿ ದೇವತಾ ಸ್ತ್ರೀಯೊಬ್ಬಳು ಈ ಬೆಟ್ಟದ ಮೇಲೆ ವಾಸಿಸಲು ಇಚ್ಛಿಸಿದಳು. ಆದರೆ ಇದಕ್ಕೆ ಸಿದ್ಧರ ವಿರೋಧವಿತ್ತು. ಹೇಗೋ ಅವರನ್ನು ಒಪ್ಪಿಸಿ ಇವರ ಜೊತೆಗೆ ಇದ್ದಳು. ಇವರಿಗೆ ಅಡುಗೆ ಮಾಡಿ ನೀಡುತ್ತಿದ್ದಳು. ಒಂದು ಸಲ ಅಡುಗೆಯಲ್ಲಿ ಭಂಗಿಯಪುಡಿಯನ್ನು ಬೆರಸಿ ಕುಡಿಸಿದಳು(ಇಲಿಸವ್ವನ ಹಾಡಿನಲ್ಲಿ ಇದರ ವಿವರ ಸಿಗುತ್ತದೆ). ಭಂಗಿಯನ್ನು ಕುಡಿದ ಸಿದ್ಧರು ಇವಳನ್ನು ಮೋಹಿಸಲು ಹೋದರು. ಆಗ ಸಿಟ್ಟಿಗೆದ್ದ ಈ ಸ್ತ್ರೀ ಬೆಟ್ಟದ ಮೇಲೆ ಉಚ್ಚಿಯನ್ನು ಮಾಡಿದಳು. ಈ ಉಚ್ಚಿಯ ರಭಸದಲ್ಲಿ ಸಿದ್ಧರು ತೇಲಿ ಕೆಲವರು ಹತರಾದರು ಮತ್ತೆ ಕೆಲವರು ಕೆಳಗೆ ಬಿದ್ದು ಓಡಿ ಹೋದರೆಂದು ಹೀಗೆ ಉಚ್ಚಿಯಿಂದಲೇ ಗುರುತಿಸಿ ಉಚ್ಚಮ್ಮ, ಉಚ್ಚಂಗಿ ಎಂಬ ಹೆಸರು ಬಂದಿತೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ.[೬] ಹೀಗೆಯೇ ಉಚ್ಚಂಗಮ್ಮನ ಬಗ್ಗೆ ಶಾಸನದಲ್ಲಿ, ಪುರಾಣದಲ್ಲಿ, ಜನಪದೀಯ ಅಂಶಗಳಲ್ಲಿ ಒಂದೊಂದು ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೩.೧.೨. ಉಚ್ಚಂಗಿದುರ್ಗವನ್ನು ಆಳಿದ ರಾಜಸಂತತಿಗಳು

ಹಾರತೀಪುತ್ರರಾದ ಕದಂಬ ವಂಶದ ಕುಮಾರವರ್ಮನ ಮಗನಾದ ಮಂಧಾತ ರಾಜನು, ಉಚ್ಚಂಗಿ ಉಚ್ಚಶೃಂಗಿಯ ರಾಜಧಾನಿಯಿಂದ ಆಳುತ್ತಿದ್ದನು.[೭] ಈ ಕದಂಬರು ಇದೇ ಉಚ್ಚಂಗಿಯನ್ನು ಕೇಂದ್ರ ಮಾಡಿಕೊಂಡಿದ್ದರೆಂಬುದನ್ನು ಅವರ ರಾಜಕೀಯ ಇತಿಹಾಸದಲ್ಲಿ ಚರ್ಚಿಸಲಾಗಿದೆ. ಕದಂಬರ ನಂತರ ಆಳಿದ ಬಾದಾಮಿ ಚಾಳುಕ್ಯ ರಾಷ್ಟ್ರಕೂಟರ ಶಾಸನಗಳಾವುವು ಇಲ್ಲಿ ದೊರೆತಿಲ್ಲ. ಮುಂದೆ ಲಭ್ಯವಿರುವ ಕಲ್ಯಾಣಿ ಚಾಲುಕ್ಯರು ಪಾಂಡ್ಯರು, ಹೊಯ್ಸಳರ ಶಾಸನಗಳಲ್ಲಿ ಉಚ್ಚಂಗಿದುರ್ಗದ ಹೆಸರು ಉಲ್ಲೇಖವಾಗಿರುವುದನ್ನು ಶಾಸನಪಾಠಗಳಲ್ಲಿ ಕಾಣಬಹುದು. ಈ ಉಚ್ಚಂಗಿದುರ್ಗವನ್ನು ಆಳಿದ ರಾಜಸಂತತಿಗಳು ಸಹ ಕಂಡುಬರುತ್ತವೆ. ಪಲ್ಲವರು, ಕದಂಬರು, ಗಂಗರು, ರಾಷ್ಟ್ರಕೂಟರು, ನೊಳಂಬಪಲ್ಲವರು, ಕಲ್ಯಾಣಿಚಾಲುಕ್ಯರು,

ಪಾಂಡ್ಯರು, ಹೊಯ್ಸಳರು, ವಿಜಯನಗರದ ಅರಸರು ಕೊನೆಯದಾಗಿ ಪಾಳೇಗಾರರು ಈ ರಾಜ ಸಂತತಿಗಳು ಉಚ್ಚಂಗಿ ದುರ್ಗವನ್ನು ಆಳ್ವಿಕೆ ನಡೆಸಿವೆ.

ಉಚ್ಚಂಗಿದುರ್ಗ ಮತ್ತು ಪಲ್ಲವರು

ಈ ಉಚ್ಚಂಗಿ ದುರ್ಗಕ್ಕೆ ಸಂಬಂಧಿಸಿದಂತೆ ಪಲ್ಲವರ ಯಾವ ಕುರುಹುಗಳು ದೊರೆಯುವುದಿಲ್ಲ. ಆದರೆ ಕೆಲವು ಮಾಹಿತಿಗಳು ಹಾಗೂ ಕೈಫಿಯತ್ತುಗಳಲ್ಲಿ ಈ ಕೋಟೆಯ ಬಗ್ಗೆ ಕೆಲವು ಮಾಹಿತಿಗಳು ದೊರೆಯುತ್ತವೆ. ಕಾಂಚಿಯ ಪಲ್ಲವರು, ಮಧುರೆಯ ಅರಸರು ಒಂದಾಗಿ ಪ್ರಬಲತರ ದುರ್ಗವೆಂದು ಹೆಸರಾಗಿದ್ದ ಈ ಉಚ್ಚಂಗಿದುರ್ಗವನ್ನು ತಮ್ಮ ಸೈನ್ಯದೊಂದಿಗೆ ಮುತ್ತಿಗೆ ಹಾಕಿದರು. ಸಂಗ್ರಾಮವಾದ ನಂತರ ದುರ್ಗವು ಶತ್ರುಗಳ ವಶವಾಯಿತು ಆದರೂ ರಾಜ್ಯಲೋಲಪರಾಧ ಕಾಂಚಿಯ ರಾಜರು ಮಧುರೆಯ ಅರಸರು ತಮ್ಮಲ್ಲಿಯೇ ಸಂಧಾನ ಮಾಡಿಕೊಂಡು ದುರ್ಗವನ್ನು ಬಲಪಡಿಸಿ ದೇಶವನ್ನು ನೀರಾವರಿ ಯೋಜನೆಗಳಿಂದ ವೃದ್ಧಿ ಮಾಡಿಕೊಂಡು, ಉಭಯತ್ರರು ಸೇರಿ ಒಂದು ಕೆರೆಯನ್ನು ನಿರ್ಮಿಸಿದರು. ಅದಕ್ಕೆ ಮೂರು ಕಡೆ ಕಟ್ಟೆಯನ್ನು ಕಾಂಚಿ ಮತ್ತು ಮಧುರೆಯ ಪಲ್ಲವರು ಕಟ್ಟಿಸಿದರು.[೮] ಕದಂಬ ವಂಶದ ಉಚ್ಚಂಗಿಯ ದೊರೆಗಳು ಸಿಂಹವಿಷ್ಣುವಿನ ವಂಶದ ಪಲ್ಲವರಿಂದ ನೆರವು ಪಡೆದರು. ಉಚ್ಚಂಗಿ ವಿಷ್ಣುವರ್ಮ ಕದಂಬನಿಗೆ ಶಾಂತಿವರ್ಮ ಪಲ್ಲವನು ಪಟ್ಟಕಟ್ಟಿದ್ದು, ವಿಷ್ಣುವರ್ಧನ ಮಗನಾದ ಸಿಂಹವರ್ಮನಿಗೂ ಪಲ್ಲವರು ನೆರವು ನೀಡಿದರು. ನಂತರ ಕಾಡುವೆಟ್ಟಿಯನ್ನು ಚಾಲುಕ್ಯರು ಸೋಲಿಸಿದರು.[೯]

ಉಚ್ಚಂಗಿದುರ್ಗ ಮತ್ತು ಕದಂಬರು

ಉಚ್ಚಂಗಿದುರ್ಗ ಆಳಿದ ರಾಜಸಂತತಿಗಳಲ್ಲಿ ಬನವಾಸಿ ಕದಂಬರು ಒಬ್ಬರು. ಇವರ ಬಗೆ ಒಂದು ಹೇಳಿಕೆಯೊಂದಿದೆ. ಉಚ್ಚಂಗಿದುರ್ಗ ಸಮೀಪದ ಹಳ್ಳಿಯೊಂದರಲ್ಲಿ ಮಾದಕ್ಕನೆಂಬ ಮಹಿಳೆಯು ಕೋಟ್ಯಾಧೀಶಳಾಗಿದ್ದಳೆಂದೂ ಆಕೆಗೆ ಐಶ್ವರ್ಯಾಧಿ ದೇವತೆಯು ಪ್ರತ್ಯಕ್ಷಳಾಗಿ ಪಟ್ಟಾಭಿಶಕ್ತ ರಾಜನಿಂದ ಅಶ್ವಮೇಧಯಾಗವನ್ನು ಮಾಡಿಸಿ ಯಜ್ಞಕಾರ್ಯ ಕೈಗೊಳ್ಳಬೇಕೆಂದು ತಿಳಿಸಿದಳಂತೆ(ಚಾಲುಕ್ಯರಲ್ಲಿ ಕೃಷ್ಣ ಹೆಸರಿನ ರಾಜರೇ ಇಲ್ಲ). ಚಾಲುಕ್ಯರ ಒಂದನೇ ಪುಲಿಕೇಶಿಯು ಬಾದಾಮಿಯಲ್ಲಿ ಅಶ್ವಮೇಧಯಾಗ ಮಾಡಿದ್ದನು. ಇದು ಉಚ್ಚಂಗಿದುರ್ಗಕ್ಕೆ ಸಂಬಂಧಿಸಿದ್ದಲ್ಲ. ಅದರಂತೆ ದೀರ್ಘಾವಧಿಯವರೆಗೆ ಜರುಗಿದ ಈ ಯಜ್ಞವು ಪರಿಸಮಾಪ್ತಿಯಾದರೂ ಯಜ್ಞವಾದ ಸ್ಥಳದಿಂದ ಬಂದ ಜನರು ಹಿಂತಿರುಗದೇ ಅಲ್ಲಿಯೇ ನೆಲಸಿದ ಕಾರಣ ಒಂದು ಗ್ರಾಮ ನಿರ್ಮಾಣವಾಯಿತಂತೆ. ಅದು ಬೂದಿಹಾಳ್ ಎಂಬ ಹೆಸರಿನಿಂದ ಕರೆಯಲ್ಪಡುವ ಬೂದಿಹಾಳ್ ಉಚ್ಚಂಗಿದುರ್ಗಕ್ಕೆ ಈಶಾನ್ಯ ಭಾಗಕ್ಕೆ ೧೦ ಮೈಲು ದೂರದಲ್ಲಿದೆ.

ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಕದಂಬರು ಕ್ರಿ.ಶ.ನಾಲ್ಕನೆಯ ಶತಮಾನದಿಂದ ಆರನೆಯ ಶತಮಾನದ ಮಧ್ಯದವರೆಗೆ ಆಳಿದುದನ್ನು ಚರಿತ್ರೆಯಿಂದ ತಿಳಿಯಬಹುದಾಗಿದೆ. ಮಯೂರವರ್ಮನಿಂದ ಕ್ರಿ.ಶ.೩೪೫ರಲ್ಲಿ ಆರಂಭವಾಯಿತ್ತೆನ್ನಲಾದ ಕದಂಬ ವಂಶವು ಕೊಂಗವರ್ಮ, ಭಗೀರಥವರ್ಮ, ರಘುವರ್ಮ, ಕಾಕುಸ್ಥವರ್ಮ, ಶಾಂತಿವರ್ಮ, ಕುಮಾರವರ್ಮ, ಮೊದಲನೆ ಕೃಷ್ಣ, ಮೃಗೇಶವರ್ಮ ಇತ್ಯಾದಿ ದೊರೆಗಳನ್ನೊಳಗೊಂಡಿತ್ತು. ಮುಂದೆ ಕಾಕುಸ್ಥವರ್ಮನಿಗೆ ಕುಮಾರವರ್ಮ(ಮಂಧಾತ) ಮತ್ತು ಕೃಷ್ಣವರ್ಮ ಎಂಬ ೨ ಮಕ್ಕಳಾಗಿ ಉಚ್ಚಂಗಿಯ ಅಧಿಪತಿಯಾದ ಕೃಷ್ಣವರ್ಮನು ತನ್ನ ಹಿರಿಯಣ್ಣನ ಮಗ ಮೃಗೇಶನಿಗೆ ವಿರುದ್ಧವಾಗಿ ಪಲ್ಲವರ ಬೆಂಬಲ ಪಡೆದನು. ಹೀಗೆ ಕದಂಬರ ರಾಜ್ಯವು ಇಬ್ಭಾಗವಾಯಿತು. ಒಂದು ಭಾಗವು ತಲಕಾಡಿನ ಗಂಗರ ಬೆಂಬಲ ಪಡೆದ ಬನವಾಸಿ ಶಾಖೆ ಮತ್ತೊಂದು ಪಲ್ಲವರ ಹಾಗೂ ಪಾರವಿ ಗಂಗರ ಬೆಂಬಲ ಪಡೆದ ಉಚ್ಚಂಗಿ ಶಾಖೆ.[೧೦]

ಈ ಹೇಳಿಕೆಗಳಿಂದ ಉಚ್ಚಂಗಿ ದುರ್ಗವು ಮಂದಾತವರ್ಮ(ಕ್ರಿ.ಶ.ಸು.೪೪೮)ನಿಂದ ಹರಿವರ್ಮನ(ಕ್ರಿ.ಶ.ಸು.೫೬೫)ರವರೆಗೆ ಅಂದರೆ ಸುಮಾರು ೧೧೭ ವರ್ಷಗಳವರೆಗೆ ಕದಂಬರ ಆಳ್ವಿಕೆಗೆ ಒಳಪಟ್ಟಿದ್ದಿರಬೇಕೆಂದು ಸ್ಪಷ್ಟವಾಗುತ್ತದೆ. ಪ್ರಾಚೀನ ಶಾಸನಗಳಲ್ಲಿ ಇದನ್ನು ಉಚ್ಚಶೃಂಗಿ ಎಂದು ಕರೆದಿದ್ದು ಈ ಉಚ್ಚಶೃಂಗಿಯೇ ಈಗಿನ ಉಚ್ಚಂಗಿ ಎಂದು ಗುರುತಿಸಬಹುದಾಗಿದೆ. ಕದಂಬಗಳಿಗೆ ಸಾವಿರಕ್ಕೆ ಸೇರಿರುವುದೂ ಈ ಮೇಲಿನ ಅಭಿಪ್ರಾಯಕ್ಕೆ ಕಾರಣವಾಗಿದೆ.

ಗಂಗರು ಮತ್ತು ರಾಷ್ಟ್ರಕೂಟರು

ಕದಂಬರ ನಂತರ ಕರ್ನಾಟಕದಲ್ಲಿ ಪ್ರಮುಖ ರಾಜಮನೆತನವೆಂದರೆ ಬಾದಾಮಿ ಚಾಲುಕ್ಯರು. ಇವರ ಬಗ್ಗೆ ಯಾವ ಮಾಹಿತಿ ದೊರಕುವುದಿಲ್ಲ. ನಂತರ ಬಂದ ಗಂಗವಂಶದ ಎರಡನೇ ಮಾರಸಿಂಹನು ಚಾಲುಕ್ಯಚೂಡಾಮಣಿ ರಾಜಾಧಿತ್ಯನನ್ನು ಸೋಲಿಸಿದನೆಂದು ಶ್ರವಣ ಬೆಳಗೊಳದ ಶಾಸನದಲ್ಲಿ[೧೧] ಉಲ್ಲೇಖವಾಗಿದ್ದು. ಕ್ರಿ.ಶ.೯೭೧ರಲ್ಲಿ ಈ ಘಟನೆ ಘಟಿಸಿದೆ[೧೨] ಎಂದು ತಿಳಿಸಲಾಗಿದೆ.

ರಾಷ್ಟ್ರಕೂಟರ ಕಾಲದ ಶಾಸನಗಳು ಇಲ್ಲಿ ಅಲಭ್ಯವಾದರೂ ಇವರ ಕಾಲಕ್ಕೆ ಸೇರಬಹುದಾದ ಮತ್ತು ಅವರ ಕಲಾಶೈಲಿಯನ್ನು ಹೋಲುವ ದೇವಸ್ಥಾನದ ಅಧಿಷ್ಠಾನಗಳು, ಕಂಬಗಳು ಮತ್ತು ಇತರೆ ಅವಶೇಷಗಳು ಕಂಡುಬರುವವು.

ಉಚ್ಚಂಗಿದುರ್ಗ ಮತ್ತು ನೊಳಂಬ ಪಲ್ಲವರು, ಕಲ್ಯಾಣಿ ಚಾಲುಕ್ಯರು

ನೊಳಂಬ ಪಲ್ಲವರು ಪಲ್ಲವ ವಂಶದ ಕಿರುಶಾಖೆಗೆ ಸೇರಿದವರು. ಇವರು ಕರ್ನಾಟಕದಲ್ಲಿ ಆಳಿದರು. ಖಟ್ವಾಂಗ ಧ್ವಜರಾಜ ಇವರು ಲಲಾಟ, ನಯನ ಅಥವಾ ತ್ರಿಲೋಚನ ಪಲ್ಲವನ

ವಂಶಜರೆಂದೂ ಕಾಂಚಿಯ ಪ್ರಭುಗಳೆಂದು ಕರೆದುಕೊಂಡಿದ್ದಾರೆ. ಹೇಮಾವತಿ ಇವರ ರಾಜಧಾನಿ. ಇವರ ಲಾಂಛನ ನಂದಿ ನೊಳಂಬಳಿಗೆ ೩೨೦೦೦ಕ್ಕೆ ಬಳ್ಳಾರಿ, ಕೋಲಾರ, ಬೆಂಗಳೂರು, ಜಿಲ್ಲೆಯ ಭಾಗಗಳು ಸೇರಿಕೊಂಡವು.[೧೩] (ಈ ವಂಶದ ಸ್ಥಾಪಕ ತ್ರಿನಯನ ಪಲ್ಲವ) ಆಗ ಉಚ್ಚಂಗಿದುರ್ಗವು ನೊಳಂಬರ ಆಡಳಿತಕ್ಕೆ ಒಳಗಾದ ಪ್ರದೇಶವಾಗಿರಬಹುದು(ಇದೇ ಸಮಯದಲ್ಲಿ ಕಂಡುಬರುತ್ತದೆ). ಬಳ್ಳಾರಿ ಜಿಲ್ಲೆಯ ಕಂಪಿಲಿಯಲ್ಲಿ ಆಡಳಿತ ಮಾಡಿದ ಜಗದೇಕಮಲ್ಲ, ನೊಳಂಬ ಪಲ್ಲವರು ಉದಯಾದಿತ್ಯ ನೊಳಂಬಪಲ್ಲವ ಪೇರ್ಮಾಡಿಯಿಂದ ಈ ಕಾಲಕ್ಕೆ ಉಚ್ಚಂಗಿದುರ್ಗ ನೊಳಂಬ ಪಲ್ಲವರಿಗೆ ಸೇರಿದ್ದಿರಬಹುದು.

ಕ್ರಿ.ಶ.೧೦೬೪ಕ್ಕಿಂತ ಮುಂಚೆಯೇ ಕಲ್ಯಾಣ ಚಾಲುಕ್ಯರಿಗೆ ನೊಳಂಬವಾಡಿ ಸೇರ್ಪಟ್ಟು ನೇರ ಆಡಳಿತಕ್ಕೆ ಒಳಪಟ್ಟಿರಬಹುದೆಂದು ತಿಳಿದುಬರುತ್ತದೆ.[೧೪] ತನ್ನ ತಂದೆಯ ಅಣತಿಯಂತೆ ವಿಷ್ಣುವರ್ಧನ ವಿಜಯಾದಿತ್ಯನು ಕ್ರಿ.ಶ.೧೦೬೮ರವರೆಗೆ ನಿರಂತರವಾಗಿ ನಾಲ್ಕು ವರ್ಷ ದಕ್ಷಿಣ ಕರ್ನಾಟಕದ ದಿಗ್ವಿಜಯದಲ್ಲಿ ನಿರತನಾಗಿದ್ದನು. ಮತ್ತು ಈ ಅವಧಿಯಲ್ಲಿ ಅವನು ಹೆಚ್ಚಿನ ಸಮಯವನ್ನು ತನ್ನ ನೊಳಂಬರಾಜ್ಯದ ನೆಲೆವೀಡಾದ ಕಂಪಲಿಯಲ್ಲಿ ಬೀಡುಬಿಟ್ಟು ಇರುತ್ತಿದ್ದನು. ಮೂರು ಶಾಸನಗಳು ಉಚ್ಚಂಗಿಗೆ ಸೇರಿದ್ದು ಉಚ್ಚಂಗಿ ೩೦ ಕೂಡಾ ನೊಳಂಬವಾಡಿಗೆ ರಾಜಧಾನಿಯಾಗಿತ್ತೆಂಬುದು ತಿಳಿದುಬರುತ್ತದೆ.[೧೫]

ಕ್ರಿ.ಶ.೧೦೬೪ರಲ್ಲಿ ಆರ್ಮಡಿ ವಿಕ್ರಮಾದಿತ್ಯನ ಸೋದರ ವಿಷ್ಣುವರ್ಧನ ವಿಜಯಾದಿತ್ಯನು ತಂದೆ ಸೋಮೇಶ್ವರನ ಕೆಳಗೆ ನೊಳಂಬವಾಡಿ ೩೨೦೦೦ ಮಾಂಡಳಿಕನಾಗಿದ್ದನು.[೧೬]

ಉಚ್ಚಂಗಿದುರ್ಗದ ಪೂರ್ವದಿಕ್ಕಿನ ಹೊಲದಲ್ಲಿರುವ ಶಿಲಾಶಾಸನದಲ್ಲಿ ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಹನ ಉಲ್ಲೇಖವನ್ನು ಗುರುತಿಸಲಾಗಿದೆ.

"ಉಚ್ಚಂಗಿ ಕೋಟೆಯ ಮೇಗಣ ತೈಲೇಶ್ವರ ದೇವರ ಭೋಗಕ್ಕೆಂ
ಗಂಟಿಗನ ಕೆರೆಯಂ ಶ್ರೀ ಮತ್ತೈಲ್ಲೋಕ್ಯಮಲ್ಲ ನೊಳಂಬ
ಪಲ್ಲವ ಪೆರ್ಮಾಡಿ ಜಯಸಿಂಘ ದೇವರು ಬಿಟ್ಟುಕೊಟ್ಟರು"

ನೊಳಂಬ ಪ್ರದೇಶವು ನೊಳಂಬ ಪಲ್ಲವರ ನಂತರ ಚಾಲುಕ್ಯರಿಗೆ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಆಗ ಚಾಲುಕ್ಯರ ಆಡಳಿತಕ್ಕೆ ನೊಳಂಬರಿಂದ ಉಚ್ಚಂಗಿದುರ್ಗವು ಒಳಪಡುತ್ತದೆ. ವಿಷ್ಣುವರ್ಧನ ವಿಜಯಾದಿತ್ಯದೇವ ಹಾಗೂ ನೊಳಂಬ ಪೆರ್ಮಾಡಿ ಜಯಸಿಂಘ ದೇವನು, ಮಾಂಡಳೀಕರಾಗಿ ನೊಳಂಬವಾಡಿಯನ್ನು ಆಳುತ್ತಿದ್ದಾಗ ಉಚ್ಚಂಗಿದುರ್ಗ ಇವರಿಗೆ ಪ್ರಮುಖ ಕೇಂದ್ರವಾಗಿದ್ದಿತ್ತೆಂದು ತಿಳಿದುಬರುತ್ತದೆ. ವಿಷ್ಣುವರ್ಧನ ವಿಜಯಾದಿತ್ಯನು ಉಚ್ಚಂಗಿದುರ್ಗದಲ್ಲಿ

ದೇವಾಲಯಗಳನ್ನು ಕಟ್ಟಿಸಿದ ಮತ್ತು ಬಾವಿಗಳನ್ನು ತೋಡಿಸಿದ ದಾನದತ್ತಿಗಳನ್ನು ಬಿಟ್ಟದ್ದು ವಿವರವಾಗಿ ತಿಳಿದುಬರುತ್ತದೆ. ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಹನು ತೈಲೇಶ್ವರ ದೇವರ ಭೋಗಕ್ಕೆ ಗಂಟಿಗನ ಕೆರೆಯನ್ನು ದಾನಬಿಟ್ಟು ವಿಷಯ ಉಚ್ಚಂಗಿದುರ್ಗದ ಹೊಲ ವೊಂದರಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ಹಾಗೆಯೇ ಅನೇಕ ಅಂಶಗಳು ಉಚ್ಚಂಗಿದುರ್ಗದಲ್ಲಿ ಕೆಲವು ಶಾಸನಗಳಲ್ಲಿ ತಿಳಿದುಬರುತ್ತದೆ.[೧೭]

ಉಚ್ಚಂಗಿದುರ್ಗ ಮತ್ತು ಪಾಂಡ್ಯರು

ಕರ್ನಾಟಕ ಮುಖ್ಯವಾದ ಅಧೀನ ರಾಜಕುಲಗಳಲ್ಲಿ ಉಚ್ಚಂಗಿಯ ಪಾಂಡ್ಯಕುಲವೂ ಒಂದಾಗಿದೆ. ಪಾಂಡ್ಯರನ್ನು ಚಂದ್ರವಂಶೀಯರೆಂದು ಹೇಳಿಕೊಂಡಿದ್ದಾರೆ. ಇವರು ಸಪ್ತಕೊಂಕಣಗಳಲ್ಲಿ ಒಂದಾದ ಹೈವೆಯ ಅರಸರಾಗಿದ್ದಾರೆ. ಇವರ ರಾಜಧಾನಿ ಪಿಸುಗುಳಿ ಕ್ರಿ.ಶ.೧೧೧೩ರ ಪಾಂಡ್ಯ ರಾಜ್ಯನೊಬ್ಬನು ಗೋಕರ್ಣ ಪುರದ ಅರಸನೆಂದೂ ಕೊಂಕಣ ರಕ್ಷಕನೆಂದೂ ಹೇಳಿಕೊಂಡಿದ್ದಾನೆ. ಪಶ್ಚಿಮ ಚಾಲುಕ್ಯ ರಾಜನಾದ ಜಯಸಿಂಹನು ಸಪ್ತಕೊಂಕಣಗಳನ್ನು ಜಯಿಸಿದ ಮೇಲೆ ಪಾಂಡ್ಯರು ಹಿಂದಿನ ಮೈಸೂರು ಸಂಸ್ಥಾನದ ಬಡಗಣ ಗಡಿಯ ಬಳ್ಳಾರಿ ಜಿಲ್ಲೆಯ ಈಶಾನ್ಯಕ್ಕಿರುವ ಗಿರಿದುರ್ಗವಾದ ಉಚ್ಚಂಗಿಗೆ ತೆರಳಿದನು. ಈ ಪಾಂಡ್ಯರು ನೊಳಂಬವಾಡಿ ಮೂವತ್ತೆರಡು ಸಾವಿರದ ನಾಡಿನ ಅರಸರಾಗಿದ್ದರು. ಮಂಗಯ್ಯ ಇಲ್ಲವೆ ಆದಿತ್ಯದೇವ ಎಂಬುವವನು ಪಾಂಡ್ಯಕುಲದ ಸ್ಥಾಪಕ. ಅವನ ಮಗ ಚೇದಿರಾಜ, ಚೇದಿರಾಜನ ಮಗ ಪಾಂಡ್ಯ. ಈ ಪಾಂಡ್ಯನು ಚೇದಿಕುಲದ ಅರಸರನ್ನು ಸದೆ ಬಡಿದವನೆಂದು ಪ್ರತೀತಿಯಿದೆ. ಪಾಂಡ್ಯನು ಚೇದಿದೇಶದ ಅಭಿಮಾನಿಯಾದುದ ರಿಂದ ಇವರಿಗೆ ಪಾಂಡ್ಯನೆಂಬ ಹೆಸರು ಬಂದುದಾಗಿರಬೇಕು ಎಂದು ಶಾಸನೋಕ್ತಗಳಿಂದ ಊಹಿಸಬಹುದು.[೧೮] ಈ ಅಂಶಗಳಿಂದ ಇಂತಹ ರಾಜರ ಬಗ್ಗೆ ಈ ಶಾಸನಗಳು ತಿಳಿಸಿಕೊಡುತ್ತವೆ.

ತ್ರಿಭುವನ ಮಲ್ಲ ಪಾಂಡ್ಯನು ಚಾಲುಕ್ಯ ತ್ರಿಭುವನ ಮಲ್ಲನ ಮಾಂಡಲಿಕನಾಗಿ ಕ್ರಿ.ಶ. ೧೦೮೩ರಲ್ಲಿ ನೊಳಂಬವಾಡಿಯನ್ನು ಆಳುತ್ತಿದ್ದನು.[೧೯] ಕ್ರಿ.ಶ.೧೧೦೧ರಲ್ಲಿ ಬಲ್ಲಕುಂದ ೩೦೦ ನಾಡಿಗೂ ಮಾಂಡಲೀಕನಾಗಿದ್ದನು. ದಾವಣಗೆರೆ ಸಮೀಪದಲ್ಲಿರುವ ಬೆಳ್ಳೂತ್ತು ಅವರ ರಾಜಧಾನಿಯಾಗಿರ ಬಹುದು. ಕಲ್ಯಾಣ ಚಾಲುಕ್ಯರು ಆಳ್ವಿಕೆ ಮಾಡುವಾಗ ನೊಳಂಬವಾಡಿ ಮೂವತ್ತೆರಡು ಸಾವಿರ ಇದೊಂದು ವಿಭಾಗವಾಗಿತ್ತು. ಇದರಲ್ಲಿ ಉಪವಿಭಾಗಗಳಾಗಿ ಕದಂಬಳಿಗೆ ಸಾವಿರ, ಸಿಂದವಾಡಿ ಸಾವಿರ, ಕೋಗಳಿ ಐದುನೂರು ಇತ್ಯಾದಿಗಳಿದ್ದವು. ನೊಳಂಬವಾಡಿ ಮೂವತ್ತೆರಡು ಸಾವಿರಕ್ಕೆ ಮಹಾಮಂಡಳೇಶ್ವರರಾಗಿ ಕಲ್ಯಾಣ ಚಾಲುಕ್ಯರಿಗೆ ಸಾಮಂತರಾಗಿ

ಉಚ್ಚಂಗಿದುರ್ಗವನ್ನು ಕೇಂದ್ರ ಮಾಡಿಕೊಂಡು ಪಾಂಡ್ಯರು ಆಳ್ವಿಕೆ ಮಾಡಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ತ್ರಿಭುವನ ಮಲ್ಲ ಪಾಂಡ್ಯ[೨೦] ರಾಯಪಾಂಡ್ಯ,[೨೧] ವೀರಪಾಂಡ್ಯ[೨೨] ಮತ್ತು ವಿಜಯಪಾಂಡ್ಯ[೨೩] ಉಚ್ಚಂಗಿಯನ್ನು ಕೇಂದ್ರ ಮಾಡಿಕೊಂಡು ನೊಳಂಬವಾಡಿ ಮೂವತ್ತೆರಡು ಸಾವಿರದಲ್ಲಿ ಆಳ್ವಿಕೆ ನಡೆಸಿದರು. ವಿಜಯಪಾಂಡ್ಯನು ಉಚ್ಚಂಗಿಯ ಪಾಂಡ್ಯರಲ್ಲಿಯೇ ಪ್ರಮುಖವಾದುದ್ದನ್ನು ಊಹಿಸಬಹುದು.

ಉಚ್ಚಂಗಿದುರ್ಗ ಮತ್ತು ಹೊಯ್ಸಳರು

ಕಲ್ಯಾಣಿ ಚಾಲುಕ್ಯರ ನಂತರ ಕರ್ನಾಟಕವನ್ನು ಆಳಿದ ರಾಜಮನೆತನಗಳಲ್ಲಿ ಹೊಯ್ಸಳರು ಪ್ರಮುಖರು. ಇವರು ಕ್ರಿ.ಶ.೧೧ನೇ ಶತಮಾನದಿಂದ ೧೪ನೇ ಶತಮಾನದ ಮಧ್ಯಭಾಗದವರೆಗೆ ಅಂದರೆ ಸುಮಾರು ಮೂರು ಶತಮಾನಗಳ ಕಾಲ ರಾಜ್ಯವಾಳಿದರು. ಈ ಸಂತತಿಯ ಆಳ್ವಿಕೆಯ ಪ್ರಾರಂಭದಲ್ಲಿ ಕರ್ನಾಟಕದಲ್ಲಿ ಕಲ್ಯಾಣಿ ಚಾಲುಕ್ಯರು ತಮಿಳುನಾಡಿನಲ್ಲಿ ಚೋಳರು ಪ್ರಬಲರಾಗಿದ್ದರು. ಈ ಎರಡೂ ರಾಜ್ಯಗಳ ಮಧ್ಯ ಸದಾಯುದ್ಧಗಳು ಜರುಗಿದ್ದವು. ಇಂಥಹ ಸನ್ನಿವೇಶದಲ್ಲಿ ಹೊಯ್ಸಳರು ಬೆಳಕಿಗೆ ಬಂದರು.

ಒಂದು ಎರಡು ಮತ್ತು ಮೂರನೇ ಬಲ್ಲಾಳರು ಒಂದನೇ ನರಸಿಂಹ ಸೋಮೇಶ್ವರ ಎರಡು ಮತ್ತು ಮೂರನೆ ನರಸಿಂಹ ಹೊಯ್ಸಳ ದೊರೆಗಳಲ್ಲಿ ಪ್ರಮುಖರು. ಎರಡನೇ ವಿನಯಾದಿತ್ಯನ ಮರಣ ನಂತರ ಅವನ ಮೊಮ್ಮಗನಾದ ಒಂದನೇ ಬಲ್ಲಾಳನು ಪಟ್ಟಕ್ಕೆ ಬಂದನು. ಇವನು ಕ್ರಿ.ಶ.೧೧೦೦ ರಿಂದ ೧೧೦೮ರವರೆಗೆ ರಾಜ್ಯವಾಳಿದನು. ಇವನು ಕೂಡಾ ಚಾಲುಕ್ಯರ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಸಾಮಂತನಾಗಿದ್ದನು. ಬಲ್ಲಾಳನು ತನ್ನ ತಮ್ಮ ಬಿಟ್ಟಿದೇವನೊಂದಿಗೆ ಉಚ್ಚಂಗಿಯ ಪಾಂಡ್ಯ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಆ ರಾಜ್ಯದ ಅಪಾರ ಐಶ್ವರ್ಯವನ್ನು ಸೂರೆಗೊಂಡನು.[೨೪] ತಲಕಾಡಿನ ವಿಜಯದಿಂದ ಸ್ಫೂರ್ತಿಗೊಂಡ ವಿಷ್ಣುವರ್ಧನನು ಚಾಲುಕ್ಯರ ಅಧೀನದಿಂದ ಸ್ವತಂತ್ರನಾಗಲಿಚ್ಛಿಸಿದನು. ಕ್ರಿ.ಶ.೧೧೧೭ರಲ್ಲಿ ಚಾಲುಕ್ಯರ ಸಾಮಂತನಾಗಿದ್ದ ಉಚ್ಚಂಗಿಯ ಪಾಂಡ್ಯರನ್ನು ಚಿತ್ರದುರ್ಗ ಜಿಲ್ಲೆಯ ದುಮ್ಮೆ ಎಂಬ(ಹೊಳಲ್ಕೆರೆ ತಾಲೂಕು) ಸ್ಥಳದಲ್ಲಿ ಸೋಲಿಸಿದನು. ತನ್ನ ಉತ್ತರಾಧಿಕಾರಿಯಾಗಲಿದ್ದ ಮಗುವು ಜನಿಸಿದ್ದರಿಂದ ಹರ್ಷಚಿತ್ತನಾದ ವಿಷ್ಣುವರ್ಧನನು ಪುನಃ ತನ್ನ ದಂಡಯಾತ್ರೆ ಕೈಗೊಂಡನು. ತನ್ನ ಸೈನ್ಯವನ್ನು ತನ್ನ ರಾಜ್ಯದ ಉತ್ತರಗಡಿಯಾಚೆಗೆ ನಡೆಸಿ ಉಚ್ಚಂಗಿಯ ಪಾಂಡ್ಯರನ್ನು ಬನವಾಸಿಯ ಕದಂಬರನ್ನು ಪುನಃ ಸೋಲಿಸಿದನು.

ಉಚ್ಚಂಗಿದುರ್ಗ ಮತ್ತು ವಿಜಯನಗರದ ಅರಸರು

ದಕ್ಷಿಣ ಭಾರತದ ಆಳ್ವಿಕೆ ಮಾಡಿದ ಪ್ರಮುಖ ರಾಜಮನೆತನಗಳಲ್ಲೊಂದಾದ ವಿಜಯನಗರವು ಕ್ರಿ.ಶ.೧೩೩೬ ರಿಂದ ೧೫೬೫ರವರೆಗೆ ಉನ್ನತ ಸ್ಥಿತಿಯಲ್ಲಿದ್ದು ತನ್ನ ವ್ಯಾಪಕತೆಯನ್ನು ದಕ್ಷಿಣ ಭಾರತದಲ್ಲಿ ಬಹುತೇಕ ಭಾಗದಲ್ಲಿ ಹೊಂದಿತೆನ್ನಲಾಗುವ ವಿಷಯ ಹೊಸದೇನಲ್ಲ. ಹರಿಹರ ಪ್ರೌಢದೇವರಾಯ, ಕೃಷ್ಣದೇವರಾಯ, ಅತ್ಯುತರಾಯ ಪ್ರಮುಖ ಅರಸನಾದರೂ ಅಳಿಯರಾಮ ರಯನ ಹೆಸರೂ ಕೇಳಬರುತ್ತದೆ. ಶಾಸನವೊಂದರಲ್ಲಿ ಹೀಗಿದೆ.

> ಶ್ರೀ ಶಾಲಿವಾಹನ ಶಕವರುಶಗಳು ೧೪೫೩ನೇ ಕೋಧನ ಸಂವ
>
> ತ್ಸರದ ವ್ಯಯಿಶಾಕ ಶುದ್ಧ ೩ ಲು ಶ್ರೀ
>
> ಮತು ರಾಮರಾಜ ಅಯನವರು[೨೫]

ಮತ್ತು ಉಚ್ಚಂಗಿ ದೇವತೆಯ ಉಲ್ಲೇಖದೊಂದಿಗೆ ದಾನಬಿಟ್ಟ ವಿಷಯ ತಿಳಿದುಬರುತ್ತದೆ. ಇದಕ್ಕಿಂತ ಪೂರ್ವದಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕ ಕಾಲದಲ್ಲಿ ಸಭೆಯಲ್ಲಿದ್ದ ಅವರ ವಂಶಸ್ಥರು ಹರಪನಹಳ್ಳಿಯ ಪಾಳೇಗಾರ ಪ್ರಾಂತ್ಯವನ್ನು ಪಾಲಿಸುವುದಕ್ಕೆ ಅನುಕೂಲವಾದ ಸಿಬ್ಬಂದಿಯಲ್ಲಿದ್ದಿರಬಹುದಾದುದು ತಿಳಿದುಬರುತ್ತದೆ.[೨೬]

ದಾದಯ್ಯನಾಯಕನಿಗೆ ವಿಜಯನಗರದ ಅರಸರಿಂದ ಅನೇಕ ಬಿರುದುಗಳು ಮಾನ್ಯ ಮಾಡಲ್ಪಟ್ಟಿರುವುದು ತಿಳಿದುಬರುತ್ತದೆ.[೨೭] ಈ ಮೇಲಿನ ಹೇಳಿಕೆಗಳ ಆಧಾರದ ಮೇಲೆ ತಿಳಿದು ಬರುವ ಅಂಶಗಳನ್ನೊಳಗೊಂಡಂತೆ ಉಚ್ಚಂಗಿದುರ್ಗ ಮತ್ತು ಹೊಯ್ಸಳರ ಅಧ್ಯಾಯದಲ್ಲಿ ಪ್ರಸ್ತಾಪಿಸಿದಂತೆ ಉಚ್ಚಂಗಿದುರ್ಗವನ್ನು ಹೊಯ್ಸಳರು ಗೆದ್ದಿದ್ದರಿಂದ ತುಂಗಾಭದ್ರ ನದಿಯ ಉತ್ತರ ಭಾಗದವರೆಗೆ ಅವರ ನಾಲ್ಕನೇ ಬಲ್ಲಾಳ ನಿಃ ಸಂತಾನವಿದ್ದಿರಬೇಕು. ಆಗ ಹಿಂದೂ ರಾಜ್ಯ ಹಾಳಾಗುವ ಸ್ಥಿತಿಗೆ ಬಂದಿದ್ದು ದಕ್ಷಿಣದಲ್ಲಿ ಪಾಂಡ್ಯನಾಡು ಮುಸಲ್ಮಾನರ ಆಳ್ವಿಕೆಗೆ ತುತ್ತಾಗಿದ್ದಿತು. ಆ ಸಂದರ್ಭದಲ್ಲಿ ರಾಜ್ಯದ ರಕ್ಷಣೆಗೆ ಹರಿಹರ ಬುಕ್ಕರು, ಹೊಯ್ಸಳ ಬಲ್ಲಾಳರ ಮಾಂಡಲಿಕರು, ಬಳಗದವರೂ ಸೇರಿದಂತೆ ರಾಜ್ಯಕಟ್ಟಲು ಮುಂದಾದರು. ಇದರಿಂದ ವಿಜಯನಗರ ಸ್ಥಾಪಿಸಲ್ಪಟ್ಟಿತು.[೨೮] ಆಗ ಹೊಯ್ಸಳರ ಪ್ರದೇಶವಾದ ಉಚ್ಚಂಗಿದುರ್ಗವು ವಿಜಯನಗರದ ಆಡಳಿತಕ್ಕೆ ಒಳಪಟ್ಟಿತು. ವಿಜಯನಗರ ರಾಜ್ಯವು ಕ್ಷೀಣಿಸಿದಾಗ ಪಾಳೇಗಾರರ ಸ್ವತಂತ್ರರಲ್ಲೇ ದಾದಯ್ಯನಾಯಕನು ಒಬ್ಬನು.[೨೯] ಇವನು ಉಚ್ಚಂಗಿದುರ್ಗವನ್ನು ಆಳ್ವಿಕೆ ಮಾಡಿದುದು ತಿಳಿದುಬರುತ್ತದೆ.

ವಿಜಯನಗರದ ಅರಸರು ದೇವಾಲಯಗಳಿಗೆ ದಾನದತ್ತಿ ನೀಡಿದ ಉಲ್ಲೇಖಗಳು ಮತ್ತು ಕೆರೆ ಕಟ್ಟಿಸಿದ ಪ್ರಸ್ತಾಪಗಳು ಉಚ್ಚಂಗಿದುರ್ಗದ ಸುತ್ತಮುತ್ತಲಿನ ಶಾಸನಾವಶೇಷಗಳಿಂದ ತಿಳಿದುಬರುತ್ತದೆ.

ಉಚ್ಚಂಗಿದುರ್ಗದ ಪಾಳೇಗಾರರು

ಉನ್ನತ ಸ್ಥಿತಿಯಲ್ಲಿದ್ದ ವಿಜಯನಗರ ಸಾಮ್ರಾಜ್ಯವು ರಕ್ಕಸ ತಂಗಡಿ ಕಾಳಗವಾದ ನಂತರ ಶಿಥಿಲವಾಗುತ್ತಾ ಬಂದಿತು. ಆಗ ಕರ್ನಾಟಕದಲ್ಲಿ ಪಾಳೇಗಾರರ ವಂಶದವರು ಪಟ್ಟಣಗಳನ್ನು ಆರಿಸಿಕೊಂಡು ಚಿಕ್ಕಪುಟ್ಟ ರಾಜ್ಯಗಳನ್ನು ಕಟ್ಟಿಕೊಂಡರು. ಅಂತಹ ಪಾಳೇಗಾರರ ಪಟ್ಟಣಗಳಲ್ಲಿ ಉಚ್ಚಂಗಿದುರ್ಗವು ಒಂದೆಂದು ಕಂಡುಬರುತ್ತದೆ. ಇಲ್ಲಿ ದಾದಯ್ಯ ನಾಯಕ ಪಾಳೇಗಾರನಾಗಿದ್ದು, ಉಚ್ಚಂಗಿದುರ್ಗವನ್ನು ಕೇಂದ್ರಮಾಡಿಕೊಂಡು ಮೊದಲ ಪಾಳೇಗಾರನಾಗಿ ಮತ್ತು ಆತ ಆಳಿದ ವಿವರಗಳೂ ಹಾಗೂ ಸಂಬಂಧಿಕರನ್ನು ತಿಳಿಸಲು ಕೆಲವು ಹೇಳಿಕೆಗಳು ಹೀಗಿವೆ.

ಮೊದಲನೆಯದಾಗಿ ವಿಜಯನಗರದ ಸ್ಥಾಪನೆಗೆ ಇರುವ ಮೊಲ ಮತ್ತು ನಾಯಿ ಹೇಳಿಕೆಯೇ ಇಲ್ಲಿಯೂ ಬರುತ್ತದೆ. ದಾದಯ್ಯನಾಯಕನು ಮೊಲವು ನಾಯಿಯನ್ನು ಅಂಜಿಸಿದ ದೃಶ್ಯವನ್ನು ಕಂಡು ಆ ಸ್ಥಳದಲ್ಲಿ ರಾಜ್ಯಕಟ್ಟಿದ್ದನೆಂದು ಅದೇ ಹರಪುರವಾಗಿದ್ದಿತೆಂದು ಹೇಳಿಕೆ ಇದೆ.

ಎರಡನೆಯದಾಗಿ ಬೇಡರ ಮುದ್ದಪ್ಪ ನಾಯಕರಿಗೆ ದಾದಯ್ಯ, ರಂಗಯ್ಯ, ತಿಮ್ಮಯ್ಯ ಮತ್ತು ಓಬಣ್ಣ ಎಂಬ ನಾಲ್ಕು ಮಕ್ಕಳಿದ್ದರು. ಅದರಲ್ಲಿ ದಾದಯ್ಯನಿಗೆ ಸ್ವಪ್ನವಾಯಿತಂತೆ ಅದರಂತೆ ತುಂಗಭದ್ರ ನದಿಯನ್ನು ಮೊದಲಗಟ್ಟಿಯ ಬಳಿದಾಟ ಕಾನಹಳ್ಳಿಯಲ್ಲಿ ನೆಲಸಿದ್ದರೆಂದು ನಂತರದಲ್ಲಿ ಬಾಗಳಿಗೌಡರ ಪರಿಚಯದೊಂದಿಗೆ ಒಂದು ಕತ್ತಿಯ ವಿಷಯವು ತಿಳಿಯುತಂತೆ. ಆ ಕತ್ತಿಯು ಹೊಯ್ಸಳ ವಿಷ್ಣುವರ್ಧನನದೆಂದು ಅವನ್ನು ವಿಷ್ಣುವರ್ಧನನೇ ಒಂದು ಗುಂಡಿಯಲ್ಲಿ ಹೂಳಿಟ್ಟನೆಂದು ನಂತರ ವಿಷ್ಣುವರ್ಧನ ಸಮೀಪದ ಬೆಟ್ಟದಲ್ಲಿ ಅಡಗಿಕೊಂಡಿದ್ದನಂತೆ(ಇಂದಿಗೂ ಕತ್ತಿಗುಂಡಿ ಬೆಟ್ಟದ ಮರಡಿ ಇವೆ) ಕತ್ತಿಯನ್ನು ಗೌಡರ ಮನೆಯಿಂದ ಪಡೆದು ದಾದಯ್ಯನು ನೀಲಗುಂದದ ಅಡವಿಯಲ್ಲಿ ಭೇಟಿಯಾಡಿದ ನಂತರ ವಿಶ್ರಾಂತಿ ಪಡೆಯುವಾಗ ಇವನ ಮೇಲ್ಭಾಗದಲ್ಲಿ ಸರ್ಪ ಇದ್ದ ವಿಷಯವನ್ನು ಕಾಮಭಟ್ಟರಿಂದ ತಿಳಿದು ಅವರ ಹೇಳಿಕೆಯಂತೆ ಒಂದು ರಾಜ್ಯ ಕಟ್ಟಿದನಂತೆ ಅದೇ ಹರಪುರವಾಯಿತೆಂಬ ಪ್ರತೀತಿ ಇದೆ.

ಮೂರನೆದಾಗಿ ದಾದಯ್ಯನಿಗೆ ಸ್ವಪ್ನದಲ್ಲೊಂದು ದಿನ ದೇವಿಯ ಆದೇಶವಾಯಿತಂತೆ. ಅದರಂತೆ ವಿಜಯನಗರದ ಅಚ್ಯುತದೇವರಾಯನ ವಾಗ್ಗೇಯಕಾರ ರಾಮಪ್ಪನ ಮನೆಯಲ್ಲಿ

ದರೋಡೆ ಮಾಡಿಕೊಂಡು ಬಂದ ದರೋಡೆಕಾರರ ಐಶ್ವರ್ಯವು ದಾದಯ್ಯನಿಗೆ ಸಿಗಲಾಗಿ ಇದರಿಂದ ರಾಜ್ಯವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.

ನಾಲ್ಕನೆಯದಾಗಿ ಕೆಳದಿ ನೃಪವಿಜಯ(ಪು.೧೮೨) ಉಲ್ಲೇಖಿಸಿದಂತೆ "ಆದಿಯೊಳ್ವುಚ್ಚಂಗಿ ಯೆಂಬ ಸ್ಥಳದೊಳಿರ್ದು ಅನಂತರ ಹರಿಪುರ ಪ್ರತಿನಾಮ ಹರಪನಹಳ್ಳಿ ಎಂಬ ಕೋಟೆಯೂ ಬಲಿಸಿ ಆ ಕೋಟೆಯೊಳಿರ್ದು ರಾಜ್ಯಂ ಗೆದ್ದ ದಾದಾನಾಯಕ, ರಂಗರಾಜಯ್ಯ, ಕಿರಿಯ ಬಸವಂತ ನಾಯಕ" ಇತ್ಯಾದಿ ವಿಷಯಗಳು ತಿಳಿದುಬರುವವು.

ಈ ಹೇಳಿಕೆಗಳು ದಾದಯ್ಯ ನಾಯಕನೇ ಉಚ್ಚಂಗಿದುರ್ಗ ಮತ್ತು ಹರಪನಹಳ್ಳಿಯ ಪಾಳೇಗಾರರ ರಾಜ್ಯ ಸ್ಥಾಪಕನೆಂದು ಸಮರ್ಥಿಸುತ್ತದೆ. ಈ ದಾದಯ್ಯ ನಾಯಕನಿಗೆ ಕ್ರಿ.ಶ.೧೫೬೬ರಲ್ಲಿ ಪಟ್ಟಾಭಿಷೇಕವಾದಂತೆ ಕ್ರಿ.ಶ.೧೮೦೦ರಲ್ಲಿ ಹರಪನಹಳ್ಳಿಯು ಬ್ರಿಟಿಷರ ವಶವಾಗುವ ಕಾಲದಲ್ಲಿ ಅವರಿಗೆ ಬರೆದುಕೊಟ್ಟ ಕೈಫಿಯತ್ತಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದು ತಿಳಿದುಬರುತ್ತದೆ.[೩೦] ದಾದಯ್ಯ ನಾಯಕನು ಮೊದಲು ಬಾಗಳಿಯಲ್ಲಿದ್ದನು.[೩೧] ನಂತರ ದಾದಯ್ಯ ನಾಯಕನು ಚಿತ್ರದುರ್ಗ ತಿಮ್ಮಣ್ಣನಾಯಕನಿಗೆ ಬಸವಾಪಟ್ಟಣದ ಕೆಂಗಣ್ಣನ ವಿರುದ್ಧ ಸೋಲು ಮಾಡಿದ್ದರಿಂದ ಉಚ್ಚಂಗಿದುರ್ಗ ವನ್ನು ಮತ್ತು ತನ್ನ ಮಗಳಾದ ಹೊನ್ನವ್ವ ನಾಗತಿಯನ್ನು ಚಿತ್ರದುರ್ಗದ ತಿಮ್ಮಣ್ಣ ನಾಯಕನು ದಾದಯ್ಯ ನಾಯಕನಿಗೆ ಕೊಟ್ಟನೆಂದು ಊಹಿಸಬಹುದಾಗಿದೆ.[೩೨] ರಂಗಣ್ಣನಾಯಕ, ಭರಮಣ್ಣ, ಬಸವಂತನಾಯಕ, ಹರಿಯಮ್ಮಾಜಿ, ಮುಮ್ಮಡಿ ಬಸಪ್ಪನಾಯಕ, ಸೋಮಶೇಖರ ನಾಯಕ ಕೂಡಾ ಕಂಡುಬರುತ್ತಾರೆ. ಹೀಗೆಯೇ ಅನೇಕ ರಾಜಮನೆತನಗಳ ರಾಜರು ಈ ಉಚ್ಚಂಗಿ ದುರ್ಗವನ್ನು ಆಳ್ವಿಕೆ ಮಾಡುತ್ತಿದ್ದರು.

೩.೨. ಶಾಸನದಲ್ಲಿ ಹರಿಹರದ ಹರಿಹರೇಶ್ವರ(ದಾವಣಗೆರೆ ಶಾಸನ ಸಂಖ್ಯೆ-೨೫)

ಹೊಯ್ಸಳ ಚಕ್ರವರ್ತಿ ಇಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ಈ ಶಾಸನವನ್ನು ಕ್ರಿ.ಶ.೧೨೨೩ರಲ್ಲಿ ನೆಡಸಲಾಗಿದೆ. ಆಂಧ್ರ ಪ್ರದೇಶಕ್ಕೆ ಸೇರಿದ ನಾರಾಯಣಪುರದ ಅತ್ತಿರಾಜ ಮತ್ತು ನವಿಲಾಡೆಯಕ್ಕರ ಪುತ್ರ, ಹೊಯ್ಸಳ ದೊರೆ ವೀರಬಲ್ಲಾಳನ ಮಗ ವೀರನರಸಿಂಹ ಹಾಗೂ ಮೊಮ್ಮಗ ವೀರಸೋಮೇಶ್ವರರ ಆಸ್ಥಾನದಲ್ಲಿ ಪ್ರಧಾನ ಅಮಾತ್ಯನಾಗಿದ್ದ ಪೊಲಾಳ್ವದಂಡ ನಾಥನು ಶಕವರ್ಷ ೧೧೪೫(ಕ್ರಿ.ಶ.೧೨೨೩)ನೇ ಸ್ವಭಾನು ಸಂವತ್ಸರ ಮಾಘಶುದ್ಧ ಏಕಾದಶಿ ಗುರುವಾರದಂದು ೧೧೫ ಹೊನ್ನಕಳಸದಿಂದ ಕೂಡಿದ ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿದನು. ಜೊತೆಗೆ ಲಕ್ಷ್ಮೀನಾರಾಯಣಪುರ ಹೆಸರಿನ ಭಾನುವಳ್ಳಿಯನ್ನು ನಿರ್ಮಿಸಿ, ಎಲೆವಳ್ಳಿ, ಜಿಗುಳಿ, ಹೇಳೆಹಾಳುಗಳನ್ನು ನೂರನಾಲ್ಕು ಬ್ರಾಹ್ಮಣರಿಗೆ ಧಾರಾಪೂರ್ವಕವಾಗಿ ಕೊಟ್ಟನು.

ಎರಡು ಸಂಸ್ಕೃತ ಶ್ಲೋಕಗಳಿಂದ ಕೂಡಿರುವ ಈ ಶಾಸನ ಐವತ್ತು ಪದ್ಯಗಳು, ವೃತ್ತ, ಕಂದ, ಗದ್ಯಗಳಿಂದ ರಚಿತವಾಗಿದೆ. ಪೊಲಾಳ್ವನ ವ್ಯಕ್ತಿ ಚಿತ್ರಣವನ್ನು ತಿಳಿಸುವ ಈ ಶಾಸನವು ಕೆಲವು ಅಂಶಗಳನ್ನು ಒಳಗೊಂಡಿದೆ.

* ಶ್ರೀ ಹರಿಹರದೇವರ ಸ್ತುತಿ ಹಾಗೂ ದೇವರ ಮಹಿಮೆಯ ವರ್ಣನೆ.
* ಹೊಯ್ಸಳವಂಶದ ಉತ್ಪತ್ತಿ ಮತ್ತು ಆ ರಾಜವಂಶದ ವರ್ಣನೆ
* ಹರಿಹರ ದೇವಾಲಯದ ನಿರ್ಮಾಣ ಮತ್ತು ಅದರ ಕಲಾವೈಭವ.

ಆರಂಭದಲ್ಲಿ ಹರಿಹರನಿಗೆ ನಮಿಸಿ, ವಿಸ್ತಾರವಾದ, ಶಿರಸ್ಸನ್ನು ಮುತ್ತಿಡುತ್ತಿರುವ ಚಂದ್ರನೆಂಬ ಚಾಮರದಿಂದ ಮನೋಹರನಾದ ಮೂರು ಲೋಕಗಳೆಂಬ ನಗರಕ್ಕೆ ಆಧಾರಸ್ತಂಭದಂತಿರುವ ಶಂಭುವಿಗೆ ನಮಸ್ಕಾರ ಎನ್ನುವ ಪ್ರಾರ್ಥನೆಯೊಂದಿಗೆ ಶಾಸನವನ್ನು ಮುಂದುವರಿಸಲಾಗಿದೆ. ಕೊನೆಯಲ್ಲಿ ತಾನಾಗಲೀ ಇತರರಾಗಲೀ ದಾನ ಮಾಡಿದ ಭೂಮಿಯನ್ನು ಅಪಹರಿಸುವವನು ಅರವತ್ತು ಸಾವಿರ ವರ್ಷ ಅಮೇಧ್ಯದಲ್ಲಿ ಹುಳುವಾಗಿ ಹುಟ್ಟುವನೆನ್ನುವ ಎಚ್ಚರಿಕೆಯನ್ನು ನೀಡಲಾಗಿದೆ. ಈ ಶಾಸನದ ೯೨ನೇ ಸಾಲಿನಲ್ಲಿ ಉಲ್ಲೇಖಿಸಿರುವಂತೆ 'ಹರಿಚಾರಿತ್ರ್ಯ' ಕೃತಿಯನ್ನು ರಚಿಸಿದ ಕವಿ ಪೊಲಾಳ್ವ ಎಂದು ತಿಳಿದುಬರುತ್ತದೆ.

ಈ ಕ್ಷೇತ್ರಕ್ಕೆ ಕೂಡಲೂರು, ಗುಹಾರಣ್ಯ, ಹರಿಹರ ಕ್ಷೇತ್ರ ಎಂಬ ಮುಂತಾದ ಹೆಸರುಗಳಿರುವುದು ಶಾಸನ ಹಾಗೂ ಐತಿಹ್ಯಗಳಿಂದ ತಿಳಿದುಬರುತ್ತದೆ. ಪುರಾತನ ಕಾಲದಲ್ಲಿ ಗುಹಾರಣ್ಯ ಕ್ಷೇತ್ರದ ಅತ್ಯಂತ ಪವಿತ್ರವಾದ ತುಂಗಾಭದ್ರೆಯ ದಡದ ಮೇಲೆ ಗುಹಾಸುರನು ಇಂಧ್ರಿಯಗಳನ್ನು ನಿಗ್ರಹಿಸಿ, ಬ್ರಹ್ಮದೇವನನ್ನು ಕುರಿತು ಸಾವಿರ ವರ್ಷಗಳ ಕಾಲ ತಪಸ್ಸನ್ನು ಆಚರಿಸಿದನು. ಸುಪ್ರೀತನಾದ ಬ್ರಹ್ಮನು ಪ್ರತ್ಯಕ್ಷನಾಗಿ ದೈತ್ಯನು ಕೇಳಿದ ದೇವತೆಗಳಿಂದಾಗಲೀ, ತ್ರಿಮೂರ್ತಿಗಳಿಂದಾಗಲೀ, ಮರಣವಾಗದ ವರವನ್ನು ಕೊಟ್ಟನು. ವರಬಲದಿಂದ ಕೊಬ್ಬಿದ ದೈತ್ಯನು ಲೋಕ ಕಂಟಕನಾಗಿ ದೇವತೆಗಳನ್ನು ಹಿಂಸಿಸತೊಡಗಿದನು. ಗುಹಾಸುರನ ಕಾಟವನ್ನು ಸಹಿಸಲಾರದ ದೇವತೆಗಳು ಕ್ಷೀರಸಾಗರದಲ್ಲಿ ಯೋಗನಿದ್ರೆಯಲ್ಲಿದ್ದ ಮಹಾವಿಷ್ಣುವಿನಲ್ಲಿಗೆ ಹೋಗಿ, ಸೋತ್ರಗಳಿಂದ ಅವನನ್ನು ಒಲಿಸಿ, ತಮ್ಮ ಕಷ್ಟಗಳನ್ನು ಅವನಲ್ಲಿ ತೋಡಿಕೊಂಡು ಅವರ ಪ್ರಾರ್ಥನೆಯನ್ನು ಕೇಳಿದ ವಿಷ್ಣು, ರಾಕ್ಷಸನಿಗೆ ಬ್ರಹ್ಮ ಶಿವರ ವರಬಲವಿರುವುದನ್ನು ಅರಿತು, ರಾಕ್ಷಸನ ಸಾವಿಗೆ ತಕ್ಕ ಉಪಾಯವನ್ನು ಯೋಚಿಸುವುದಾಗಿ ದೇವತೆಗಳನ್ನು ಸಮಾಧಾನ ಮಾಡಿ ಕಳುಹಿಸಿದನು. ಆನಂತರ ಮಹಾವಿಷ್ಣು ಕೈಲಾಸಕ್ಕೆ ತೆರಳಿ, ಶಿವನೊಡನೆ ಆಲೋಚಿಸಿ, ತಾವಿಬ್ಬರೂ ಹರಿಹರನಾಗಿ ರಾಕ್ಷಸನನ್ನು ಸಂಹರಿಸಬೇಕೆಂದು ನಿರ್ಧಾರಕ್ಕೆ ಬಂದರು.

ತಮ್ಮ ನಿರ್ಧಾರದಂತೆ ವಿಷ್ಣುಶಿವರು ಹರಿಹರೈಕ ರೂಪವನ್ನು ಧರಿಸಿ, ಗುಹಾಸುರನಲ್ಲಿಗೆ ಧಾವಿಸಿ, ಹತ್ತು ಸಾವಿರ ವರ್ಷಗಳ ಕಾಲ ಅವನೊಡನೆ ಯುದ್ಧ ಮಾಡಿ ಗುಹಾಸುರನ್ನು ಸಂಹರಿಸಿದರು. ಈ ಕ್ಷೇತ್ರಕ್ಕೆ ನನ್ನ ಹೆಸರು ಸುಪ್ರಸಿದ್ಧವಾಗಿರಲಿ. ನಿನ್ನ ಪಾದಗಳು ಯಾವಾಗಲೂ ನನ್ನ ವಕ್ಷಸ್ಥಳದ ಮೇಲಿರಲಿ ಎಂದು ಬೇಡಿದ ದೈತ್ಯನ ಮರಣದ ಕಾಲದ ಪ್ರಾರ್ಥನೆಯನ್ನು ಹರಿಹರನು ಅನುಗ್ರಹಿಸಿದರು. ಅಂದಿನಿಂದ ಪಾತಾಳಕ್ಕೆ ತುಳಿದ ದೈತ್ಯನ ವಕ್ಷಸ್ಥಳದ ಮೇಲೆ ಸ್ವಾಮಿಯ ಪಾದಗಳಿರುವುದರಿಂದ ಮರ್ತ್ಯಂರಿಗೆ ಕಂಡುಬರುವುದಿಲ್ಲ.[೩೩] ಹೀಗೆಯೇ ಈ ಶಾಸನದಲ್ಲಿ ಕೂಡಲೂರು, ಗುಹಾರಣ್ಯ, ಹರಿಹರಕ್ಷೇತ್ರ ಎಂಬ ಹೆಸರುಗಳು ಕಂಡುಬಂದಿದ್ದು, ಕೂಡಲೂರು ಹೇಗೆ ಉತ್ಪತ್ತಿಗೊಂಡಿದೆ ಎಂಬುದರ ಬಗ್ಗೆ ವಿವರಣೆ ಇಲ್ಲ. ಆದರೆ ಗುಹಾರಣ್ಯ ಎಂಬ ಹೆಸರಿನ ಗುಹಾನ ಕಥೆ ಹೇಳಿರುವುದನ್ನು ಇದು ಶಾಸನೋಕ್ತವಾಗಿ ಐತಿಹ್ಯವನ್ನು ಕುರಿತು ಈ ಶಾಸನ ತಿಳಿಸುತ್ತದೆ.

ಅಡಿಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾ.ಸಂ.೧, ಹರಪ–೬

೨. ಅದೇ, ಪು.೪೬೪

೩. ಗಣೇಶ ಕೆ.ಆರ್.,(ಪ್ರ.ಸಂ.) **ಗುಣಮಧುರ**(ದೇವರಕೊಂಡಾರೆಡ್ಡಿ ಅಭಿನಂದನ ಗ್ರಂಥ), ಪು.೪೨೩

೪. ಕೊಟ್ರೇಶ್ ಎಂ., **ಉಚ್ಚಂಗಿದುರ್ಗ**(ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಧ್ಯಯನ), ಪು.೩೮

೫. ಅದೇ, ಪು.೪೦–೪೧

೬. ಅದೇ, ಪು.೪೧

೭. ಪಂಚಮುಖಿ ಆರ್.ಎಸ್., **ಕರ್ನಾಟಕ ಇತಿಹಾಸ**, ಪು.೧೧೧

೮. ಕೊಟ್ರೇಶ್ ಎಂ., **ಪೂರ್ವೋಕ್ತ**, ಪು.೧೬

೯. ಅದೇ, ಪು.೧೬೦

೧೦. ಅದೇ, ಪು.೧೩೪–೩೬

೧೧. ಪಂಚಮುಖಿ ಆರ್.ಎಸ್., **ಪೂರ್ವೋಕ್ತ**, ಪು.೧೩೪

೧೨. ಪಾಟೇಲ್ ಪಿ.ಎಸ್., **ದಿಕ್ಸೂಚಿ**–೧೯೯೪

೧೩. ಕೊಟ್ರೇಶ್ ಎಂ., **ಪೂರ್ವೋಕ್ತ,** ಪು.೨೭೭

೧೪. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂ.೬, ಪು.೫೭೪–೭೫

೧೫. ನಾಗರಾಜಯ್ಯ ಹಂಪ, **ವಿಷ್ಣುವರ್ಧನ, ವಿಜಯಾದಿತ್ಯ, ಕೀರ್ತಿವರ್ಮ,** ಪು.೪೭

೧೬. ಸಂಪದ್ಗಿರಿರಾವ್ ಕೆ., **ಪೂರ್ವೋಕ್ತ,** ಪು.೧೬೪

೧೭. ಕೊಟ್ರೇಶ್ ಎಂ., **ಪೂರ್ವೋಕ್ತ,** ಪು.೨೧

೧೮. ಅದೇ, ಪು.೨೨

೧೯. ಅದೇ, ಪು.೨೧೩

೨೦. ಅದೇ, ಪು.೫

೨೧. **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್,** ಸಂ–೯, ಭಾಗ–೨, ಪು.೨೦೬

೨೨. ಕೊಟ್ರೇಶ್ ಎಂ., **ಪೂರ್ವೋಕ್ತ,** ಪು.೨೩

೨೩. **ಸೌತ್ ಇಂಡಿಯನ್ ಇನ್‌ಸ್ಕ್ರಿಪನ್ಸ್,** ಪು.೬

೨೪. ವೆಂಕನಗೌಡ ಟಿ., **ಕರ್ನಾಟಕ ಇತಿಹಾಸ,** ಸಂ–೨, ಸಂಚಿಕೆ–೨, ಪು.೧೨೨

೨೫. ಕೊಟ್ರೇಶ್ ಎಂ., **ಪೂರ್ವೋಕ್ತ,** ಪು.೨೮

೨೬. ಅದೇ, ಪು.೨೮

೨೭. ಸೌತ್ ಇಂಡಿಯನ್ ಇನ್‌ಸ್ಕ್ರಿಷನ್ಸ್, ಸಂ.೯(ಕೊಟೂರುಶಾಸನ), ಪು.೬೮೫

೨೮. ವಸುಂಧರಾ ಫಿಲಿಯೋಜಾ, 'ಅಳಿದುಳಿದ ಹಂಪಿ', ಪು.೬

೨೯. ಸೌತ್ ಇಂಡಿಯನ್ ಇನ್‌ಸ್ಕ್ರಿಷನ್ಸ್, ಸಂ–೯, (ಕೊಟೂರು ಶಾಸನ), ಪು.೬೮೬

೩೦. ಕೊಟ್ರೇಶ್ ಎಂ., **ಪೂರ್ವೋಕ್ತ,** ಪು.೩೦

೩೧. ಅದೇ, ಪು.೩೭

೩೨. ಅದೇ, ಪು.೩೦

ಅಧ್ಯಾಯ ನಾಲ್ಕು

ಇತರೆ ದಾಖಲೆಗಳಲ್ಲಿ ಐತಿಹ್ಯಗಳು

ಅಧ್ಯಾಯ ನಾಲ್ಕು

ಇತರೆ ದಾಖಲೆಗಳಲ್ಲಿ ಐತಿಹ್ಯಗಳು

೪.೧. ಕೈಫಿಯತ್ತುಗಳಲ್ಲಿ ಐತಿಹ್ಯಗಳು

ಮೆಕೆಂಝಿಯ ಸಂಗ್ರಹದಲ್ಲಿ 'ಕೈಫಿಯತ್ತು'ಗಳು ಮಹತ್ವದ ಪಾತ್ರವನ್ನು ವಹಿಸಿವೆ. ಕೈಫಿಯತ್ತುಗಳ ಬಗೆಗೆ ನಾವು ವಿಶೇಷವಾಗಿ ಅಧ್ಯಯನ ಕೈಗೊಳ್ಳುವುದು, ಅವುಗಳ ಮಹತ್ವವನ್ನು ಅರಿಯುವುದು ಅವಶ್ಯಕವಾಗಿದೆ. ಒಂದು ದೇಶದ ಚರಿತ್ರೆಯನ್ನು ರಚಿಸಲು ಸ್ಮಾರಕಗಳು, ಶಾಸನಗಳು, ನಾಣ್ಯಗಳು, ವಿದೇಶಿಯರ ಬರವಣಿಗೆಗಳು ಇವೇ ಮುಂತಾದ ಆಕರಗಳಂತೆಯೇ ಕೈಫಿಯತ್ತುಗಳು ಪ್ರಮುಖ ಪಾತ್ರವಹಿಸುತ್ತವೆ. ಇವುಗಳು ಶಾಸನಗಳಷ್ಟು ನಿಖರವಾದ ಮಾಹಿತಿಯನ್ನು ನೀಡುವಲ್ಲಿ ಸ್ವಲ್ಪಮಟ್ಟಿಗೆ ಅಸಮರ್ಥವಾದರೂ, ಪ್ರಮಾಣ ಗ್ರಂಥಗಳಿಗೆ ಪೋಷಕವಾಗಿ ಅನೇಕ ಮಾಹಿತಿಗಳನ್ನು ನೀಡುವಲ್ಲಿ ಸಹಾಯವಾಗಿವೆ. ಒಂದು ಪ್ರದೇಶದ ಆಚಾರ-ವಿಚಾರ, ಸಂಪ್ರದಾಯಗಳು, ಭಾಷೆ, ಸಂಸ್ಕೃತಿ, ಮತೀಯ ಅಂಶಗಳು, ವ್ಯಕ್ತಿಗಳು ಹಾಗೂ ಸ್ಥಳನಾಮ ವಿಶೇಷಗಳು ಹಲವು ಮಹತ್ವದ ಸಂಕಥನಗಳ ಬಗೆಗೆ. ಅದೇ ಗ್ರಾಮದ ಅಥವಾ ಪ್ರದೇಶದ ಪಂಡಿತರಿಂದ, ಹಿರಿಯರಿಂದ, ತಿಳುವಳಿಕೆಯುಳ್ಳವರಿಂದ ತಕ್ಕಮಟ್ಟಿಗೆ ಓದುಬರಹ ಬಲ್ಲವರಿಂದ ಬರೆಯಿಸಿ, ಸಂಗ್ರಹಿಸಲ್ಪಟ್ಟ ದಾಖಲೆಗಳನ್ನೇ 'ಕೈಫಿಯತ್ತು'ಗಳೆಂದು ಕರೆಯಲಾಗಿದೆ. ಕೈಫಿಯತ್ ಎಂಬ ಪದ ಮೂಲತಃ ಪರ್ಷಿಯನ್-ಅರಬಿಗೆ ಸೇರಿದ್ದರೂ ಹಿಂದಿ ಹಾಗೂ ಮರಾಠಿಯಲ್ಲಿ ಕೈಫಿಯತು, ಕೈಫಿತ್, ಕೈಫಿಯೆತ್, ಕೈಫೀತ್, ಕೈಪೋತ್ ಎಂದು ಕರೆಯಲ್ಪಟ್ಟಿದೆ.[೧]

'ಕೈಫಿಯತ್ತು' ಎಂದರೆ ವಿವರಣೆಗಳನ್ನೊಳಗೊಂಡ ದಾಖಲೆ, ಸ್ಪಷ್ಟವಾದ ಹೇಳಿಕೆ, ಅಜ್ಞಾಪತ್ರ ಎಂದು ಅರ್ಥ. 'ಕೈಫಿಯತ್ತು' ಎಂಬ ಪದ ಅರಾಬಿಕ್ ಪರ್ಷಿಯನ್ ಭಾಷೆಯ ಮೂಲದಿಂದ ಕನ್ನಡ ಭಾಷೆಗೆ ಬಂದಿದೆ. ಕನ್ನಡದಲ್ಲಿ 'ಕೈಪಾವತಿ' ಎಂಬ ತದ್ಭವವೂ ಬಳಕೆಯಲ್ಲಿದೆ. ಕರ್ನಲ್ ಮೆಕೆಂಝಿ ತಾನು ಸಂಗ್ರಹಿಸಿದ ಅನೇಕ ಸ್ಥಳಗಳಿಗೆ ಸಂಬಂಧಿಸಿದ ದಾಖಲೆಗಳನ್ನು

"ಕೈಫಿಯತ್" ಎಂದು ಕರೆದ, ಕನ್ನಡದ ಪರಿಭಾಷೆಯಲ್ಲಿ ಕೈಫಿಯತ್ ಎಂದರೆ ಸ್ಥಳಪುರಾಣ, ಐತಿಹ್ಯ, ಜಾನಪದ ಮತ್ತು ಇತಿಹಾಸ ವಿವರಗಳನ್ನೊಳಗೊಂಡಂತಹ ದಾಖಲೆ ವಿವರ ಎನ್ನಬಹುದು. ಇವುಗಳನ್ನು ಮೆಕೆಂಝಿಗೆ ಸ್ಥಳೀಯ ಅಧಿಕಾರಿಗಳು, ಪಂಡಿತರು, ಶಾನುಭೋಗರು, ಪಟೇಲರು ಮೊದಲಾದವರು ಸ್ವತಃ ಬರೆದುಕೊಟ್ಟು ೧೮೦೦ ರಿಂದ ೧೮೨೧ ಅವಧಿಯಲ್ಲಿ ಮೆಕೆಂಝಿ ಇವುಗಳನ್ನು ಸಂಗ್ರಹಿಸಿದನು.

ಈ ಕೈಫಿಯತ್ತುಗಳು ಪೌರಾಣಿಕ ಹಿನ್ನೆಲೆಯಲ್ಲಿ ಆರಂಭವಾಗಿ, ಐತಿಹ್ಯಗಳು, ಸ್ಥಳಪುರಾಣಗಳ ನೆಲೆಯಲ್ಲಿ ರಚಿತವಾಗಿವೆ. ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಅನೇಕ ವಿಷಯಗಳನ್ನು ಇವು ಪ್ರಸ್ತಾಪಿಸುತ್ತವೆ. ಕೈಫಿಯತ್ತುಗಳು ನೀಡಿರುವ ಮಾಹಿತಿಗಳೆಲ್ಲ ಸತ್ಯಾಂಶಗಳಿಂಧ ಕೂಡಿವೆ ಎಂದು ಹೇಳಲಾಗುವುದಿಲ್ಲ. ಐತಿಹ್ಯ, ಪುರಾಣ ಮತ್ತು ದಂತಕಥೆಗಳ ನಡುವೆ ಐತಿಹಾಸಿಕ ಅಂಶಗಳು ಬೆರೆತುಕೊಂಡಿವೆ. ಇತನು ಮಹಾನ್ ವಿದ್ವಾಂಸನೆಂದು ಅರ್ಥೈಸಬೇಕಿಲ್ಲ. ಈಗ ಜನರನ್ನು ಬಳಸಿಕೊಳ್ಳುವುದರಲ್ಲಿ ಪಳಗಿದವನು. ಈತನ ಸಂಗ್ರಹ ಕಾರ್ಯದಲ್ಲಿ ನೆರವಾದ ಸ್ಥಳೀಯರೆಂದರೆ ಕಾವಲಿಬೋರಯ್ಯ, ಕಾವಲಿ ಲಕ್ಷ್ಮಯ್ಯ, ಹುಲಿಗುಡ್ಡ ಲಕ್ಷ್ಮಯ್ಯ ಮುಂತಾದವರು. ಕನ್ನಡವನ್ನು ಬಹಳ ತೀವ್ರವಾಗಿ ಸಂಘಟಿಸಿ ಅದರ ದೇಶೀರೂಪವನ್ನು ಆಗ ಕಟ್ಟುತ್ತಾ ಸಾಗುತ್ತಾನೆ. 'ಕೈಫಿಯತ್ತು ಒಳಗೊಂಡಂತೆ ಈ ಬಗೆಯ ಆಕರ ಸಾಮಗ್ರಿಯನ್ನು ಬರೆಯಿಸಿದ ಸಂಗ್ರಹಿಸಿದ ವಿದ್ವಾಂಸ ವ್ಯಕ್ತಿಗಳಲ್ಲಿ ಕರ್ನಲ್ ಮೆಕೆಂಝಿ ಕರ್ನಾಟಕದಲ್ಲಿ ಪ್ರಥಮನೆನಿಸಿದ್ದಾನೆ. ಕೈಫಿಯತ್ತುಗಳ ಮೂಲಕ ಕನ್ನಡ ನಾಡಿನ ಚರಿತ್ರೆಯನ್ನು ಸರಳ-ರೇಖಾತ್ಮಕ ಕಾಲಗತಿಯಲ್ಲಿ ಕಟ್ಟಿಕೊಡುವ ಹಾದಿಯನ್ನು ಮೆಕೆಂಝಿ ಸುಗಮಗೊಳಿಸುತ್ತಾನೆ. ಮೆಕೆಂಝಿ ಇಂಥ ಸೂಕ್ಷ್ಮತೆಗಳತ್ತಾ ಏಕೆ ಗಮನಹರಿಸಿದ. ಬಹುಶಃ ಆತನ ಹಿನ್ನೆಲೆಯೇ ಇದಕ್ಕೆ ಕಾರಣವಿರಬಹುದು. ಆತನ ಬದುಕಿನ ಲೋಕ ಬ್ರಿಟಿಷರ ಅನುಭವ ಲೋಕಕ್ಕಿಂತ ಭಿನ್ನವಾದುದ್ದಾಗಿತ್ತು.

ಕೈಫಿಯತ್ತುಗಳ ಅಧ್ಯಯನವು ವರ್ತಮಾನದ ರಾಜಕೀಯ ಚರಿತ್ರೆಯ ದೃಷ್ಠಿಯಿಂದಲೂ ವಿಶಿಷ್ಟವಾಗಿದೆ. ಇದನ್ನು ಸಮರ್ಥಿಸಲು ಕೆಲವು ಕಾರಣಗಳನ್ನು ನೀಡಬಹುದು. ಇಲ್ಲಿಯವರೆಗೆ ಆಧುನಿಕ ಪೂರ್ವಕಾಲದ ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಹೆಚ್ಚಾಗಿ ಸಾಹಿತ್ಯ ಮತ್ತು ಶಾಸನಗಳನ್ನವಲಂಬಿಸಿ ರಚಿಸಲಾಗಿದೆ. ಆದರೆ ಈಗಾಗಲೇ ನಿರೂಪಿತವಾಗಿರುವಂತೆ ಶಾಸನಗಳೆಂದರೆ ರಾಜನ ರಾಜ್ಯವಿಸ್ತಾರದಲ್ಲಿ ನೆರವಾದವರಿಗೆ ದಾನ ಮಾಡಿದ ವಿವರಗಳು ಮಾತ್ರ ಇವೆಯೇ ಹೊರತು ಮತ್ತೇನೂ ಇಲ್ಲ. ಆದ್ದರಿಂದ ರಾಜನ ಆಸ್ಥಾನದಲ್ಲಿ ರಚಿಸಲ್ಪಟ್ಟ ಸಾಹಿತ್ಯ ಕೃತಿಗಳು ನಾಡಿನ ರಾಜಕೀಯ ಚರಿತ್ರೆಯನ್ನು ಅರಿತುಕೊಳ್ಳುವ ದಿಸೆಯಲ್ಲಿ ಹೆಚ್ಚು ಸಹಾಯಕವೆಂದು ಭಾಪಿಸಿದ್ದು ಸರಿಯಾದುದಲ್ಲ. ಇದರಿಂದ ಇಲ್ಲಿಯವರೆಗೂ ನಡೆದಿರುವ ರಾಜಕೀಯ ಚರಿತ್ರೆಯ

ಕ್ಷೇತ್ರದ ಸಂಶೋಧನೆಯಲ್ಲಿ ಹೆಚ್ಚು ಅನಿರ್ದಿಷ್ಟತೆ ತಲೆದೋರಿರುವುದು ಸಹಜವಾಗಿದೆ. ಈ ಕಾರಣದಿಂದ ಹಿಂದಿನ ಅಜ್ಞಾನವೆಂದರೆ ರಾಜ್ಯವಿಸ್ತರಣೆಗೆ ಉಪಯೋಗಿಸಲಾದುದೆಂದೇ ಅರ್ಥೈಸಬೇಕಾಗಿದೆ. ಅಲ್ಲದೆ ಮಧ್ಯಯುಗೀನ ಕಾಲದವರೆಗೂ ರಚನೆಯಾದ ಹೆಚ್ಚಿನ ಶಾಸನಗಳು ಮತ್ತು ಕೃತಿಗಳು ರಾಜಾಶ್ರಯದಲ್ಲಿ ತಯಾರಾಗಿದ್ದರಿಂದ ಅವನ್ನ ಜನ ಸಾಮಾನ್ಯರ ಚರಿತ್ರೆ ಎನ್ನುವಂತಿಲ್ಲ. ಆದರೆ ಎಲ್ಲ ಕೈಫಿಯತ್ತುಗಳೂ ಪೂರ್ಣವಾಗಿ ಜನರ ನಡುವೆಯೇ ರಚನೆಗೊಂಡಿವೆ. ಈ ಕೈಫಿಯತ್ತುಗಳನ್ನ ಶಾಸನಗಳಲ್ಲಿ ಒಂದು ಎನ್ನಬಹುದು. ಇವು ಜನಪ್ರಿಯ ಭಾಷೆ ನಾಡಿನಾದ್ಯಂತ ಕಂಡುಬರುತ್ತವೆ.

೪.೧.೧. ಸೂಳೆಕೆರೆ ಕೈಫಿಯತ್ತು

ಸೂಳೆಕೆರೆ ಎಂಬ ಸ್ಥಳನಾಮದ ಬಗ್ಗೆ ಮೆಕೆಂಝಿ ಕೈಫಿಯತ್ತಿನಲ್ಲಿ ಅದು ಹೇಗೆ ಯಾರು ನಿರ್ಮಿಸಿದರು ಈ ಕೆರೆ ಸೂಳೆಕೆರೆ ಎಂದು ಹೆಸರು ಹೇಗೆ ಬಂದಿತು ಎಂಬುದನ್ನು ತಿಳಿಸಿದ್ದಾನೆ. ಪ್ರಾಕು ಬಲ್ಲಾಳ ಹೊಯಿಸಳರಾಯರು ರಾಜ್ಯವಾಳುವ ಕಾಲದಲ್ಲಿ ಸಂಗಮೇಶ್ವರ ದೇವರು ಹುಟ್ಟಿದು ತುಂಗಾಭದ್ರ ಮಹಾತ್ಮೆಯಲ್ಲು ಹೇಳುವ ಪ್ರಕಾರ, ಸ್ಕಂದ ಪುರಾಣೋತ್ತರ ಕೃತಯುಗದಲ್ಲಿ ಸಿದ್ಧಾಶ್ರಮ, ಮುಂದೆ ತ್ರೇತಾಯುಗದಲ್ಲಿ ನೀಲಕಂಧರ ಎಂಬ ಆಶ್ರಮ, ದ್ವಾಪರಯುಗದಲ್ಲಿ ಮರುತ್ತಂ ಎಂಬ ಆಶ್ರಮವು, ಕಲಿಯುಗದಲ್ಲಿ ಋಷ್ಯಾಶ್ರಮ ಎಂಬ ಆಶ್ರಮಗಳಿಗೆ ಈ ತುಂಗಾಭದ್ರಾ ನದಿಗೆ ಕೂಡಿರುವ ಹರಿದ್ರಾ ಸಂಗಮವಾಗಿರುವ ಬಳಿ, ಸಂಗಮೇಶ್ವರ ದೇವರು ಇದ್ದಾನೆ. ಈ ಕ್ಷೇತ್ರ ಸಪ್ತ ಬೆಟ್ಟದಲ್ಲಿ ಇರುವ ಸುರಗಿರಿ ಪರ್ವತ ಈ ಪರ್ವತದಲ್ಲಿ ಪ್ರತ್ಯಕ್ಷನಾಗಿ ಈಶ್ವರ ಲಿಂಗರೂಪಿಯಾಗಿ ಸಮಸ್ತ ಋಷಿಗಳು, ದೇವತೆಗಳು, ಭೂ ಸುರರಿಂದ ಪೂಜಿತವಾಗಿ ಇದ್ದಾರೆ. ಈ ಪರ್ವತಕೆ ದಕ್ಷಿಣ ದಿಕ್ಕಿನಲ್ಲಿ ನರಸಿಂಹಸ್ವಾಮಿ ಇದ್ದಾರೆ. ಉತ್ತರ ಭಾಗದಲ್ಲಿ ಲೋಕನಾಥ ಅಮ್ಮನವರು ಪ್ರತ್ಯಕ್ಷವಾಗಿ ಲಿಂಗರೂಪದಲ್ಲಿ ಇದ್ದಾರೆ. ಪೂರ್ವದಲ್ಲಿ ಈ ಪರ್ವತದ ಸಮೀಪದಲ್ಲಿ ಆಂಜನೇಯ ದೇವಸ್ಥಾನ ಮತ್ತು ವೀರಭದ್ರದೇವರ ದೇವಸ್ಥಾನ, ಇಂದ್ರದಿಕ್ಕಿನಲ್ಲಿ ದೇವಗಿರಿ ಪರ್ವತದಲ್ಲಿ ಹರಿಹರಾತ್ಮವಾಗಿ ಲಿಂಗದ ರೂಪದಲ್ಲಿ ರಂಗನಾಥ ದೇವರು ಪ್ರತ್ಯಕ್ಷನಾಗಿ ಇದ್ದಾನೆ. ಈ ಪ್ರಕಾರ ಅತಿಮನೋಹರವಾಗಿರುವಂತ ಸ್ಥಳದಲ್ಲಿ ಮಹತ್ವವಾಗಿ ಈ ಬಲ್ಲಾಳವಂಶವನ್ನು ಎತ್ತಿ ಹಿಡಿಯುವಂತೆ ವಿಮೋಚನೆ ಮಾಡಿ ವಿಕ್ರಮರಾಜನು ಈ ಸ್ಥಳವನ್ನು ನೋಡಿ ಸಂತೋಷಪಟ್ಟು ಇರಲು, ಈ 'ಪಟ್ಟಣವನ್ನು ಕಟ್ಟಬೇಕು' ಎಂಬುದಾಗಿ ಆಲೋಚನೆ ಮಾಡಿ ಮಳೆ–ದಟ್ಟವಾಗಿ ಬೆಳೆದ ಗಿಡದ ಗುಂಪು ಕಡಿದಿ ಈ ಪರ್ವತದಲ್ಲಿ ಸ್ವಾಮಿಯವರು ಉದ್ಭವಿಸಿದ ಕಾರಣದಿಂದಲೂ ಪಟ್ಟಣವನ್ನು ಕಟ್ಟಿ ಅದಕ್ಕೆ ಸ್ವರ್ಗಾವತಿ ಎಂಬ ಹೆಸರಿಟ್ಟನು. ಈ ಪಟ್ಟಣದ ವಿವರ ೭೦೦ ಅಗ್ನಿ ಹೋತ್ರಗಳು ಮಾಡುವ ಬ್ರಾಹ್ಮಣರು ಮುಂತಾದ ಮುಖ್ಯಸ್ಥರು ಸಹಿತವಾಗಿ ಇದ್ದ ಅಗ್ನಿಹೋತ್ರಗಳು

ಈಗಲೂ ಕೆರೆ ಶ್ಯಾಲಿವಳಿಗೆ ಒಂದು ಕಲ್ಲು ದೃಚಿಸ್ತಂಭ ನಿಂತು ಇರುವುದು. 'ದೀಕ್ಷಿತರ ಕಲ್ಲು' ಎಂಬುದಾಗಿ ಕರೆಸಿಕೊಳ್ಳುತ್ತದೆಯಾಗಿ ಮೇಲಾಗಿ ಅಧ್ಯಾಪಕರು ಬ್ರಾಹ್ಮಣರು ಮನೆ ೧೦೦೦ ಈ ಸ್ಥಳದ ಶ್ಯಾನಭಾಗ ಬಡಿಗನಾಡ(ಉತ್ತರ) ಕನ್ನಡಿಗ ವಾಸಪ್ಪಣ್ಣ ಅಶ್ಲಾಯನೆ ಹೆಸರು ಕುಕ್ಕುರುಕ್ಕು ಶಾಖೆಯ ಹೊನ್ನರಸಯ್ಯ ಮುಂತಾದ ವಿನಿಯೋಗದವರು ಸಹಿತವಾಗಿ ಇಟ್ಟುಕೊಂಡು ಪಟ್ಟಣವನ್ನು ಆಳುತ್ತಾ ಇದ್ದರು.

ಹರಿದ್ರಾ ನದಿ ತೀರದಲ್ಲು ಸುರಗಿರಿ ಪರ್ವತದಲ್ಲು ಪ್ರಾಕು ಯುಗಾಂತ್ರದವಸ್ಥೆಯಲ್ಲು ಮೊದಲು ಋಷೇಶ್ವರರಿಗೆ ಪ್ರತ್ಯೇಕ್ಷವಾದಂಥ ಸಿದ್ದೇಶ್ವರ ಸ್ವಾಮಿಯ ದೇವಸ್ಥಾನ ಶಿಥಿಲವಾಗಿ, ದೇವರ ಮೇಲೆ ವಾಲ್ಮೀಕಿ ಬೆಳೆದು ಈ ಪರ್ವತ ಮಹಾ ಅರಣ್ಯವಾಗಿದ್ದಲ್ಲಿ ಈ ಅರಸನಿಗೆ ಗೋವಿನ ಹಿಂಡು ಬಹಳವಾದ್ದರಿಂದ ಗೊಲ್ಲರು ಗೋವಿನ ಹಿಂಡುಗಳನ್ನು ಹೊಡಕೊಂಡು ಮೈಸುವುದಕ್ಕೆ ಬರುತ್ತ ಇದ್ದಲ್ಲಿ ಆ ಗೋವುಗಳಲ್ಲಿ ಕಾಮಧೇನು ಎಂಬ ಹೆಸರಿನ ಪಂಚಮ ಮೊಲೆಯ ಗೋವು, ಹರಿದ್ರಾನದಿ ದಡದಲ್ಲು ಸುರಗಿರಿಪರ್ವತದಲ್ಲು ಪ್ರತಿನಿತ್ಯ ಮೇದುಕೊಂಡು ಇದ್ದು. ಈ ಗುಡ್ಡದಲ್ಲಿರುವ ಹುತ್ತದ ಮೇಲೆ ಈ ಪಂಚಮೊಲೆಯ ಗಾಯಿತ್ರಿಯು ಸುರಭಿಯನ್ನು ಸುರಿಸಿ ಬರುತ್ತಾ ಇದ್ದಲ್ಲಿ, ರಾತ್ರಿಯಲ್ಲಿ ಮನೆಗೆ ಬಂದ ಗೊಲ್ಲನು ಆಕಳ ಹಿಂಡುಗಳ ಹಾಲು ಕರೆಯುತ್ತಾ ಇದ್ದಲ್ಲಿ ಈ ಗೋವಿನ ಮೊಲೆಯಲ್ಲಿ ಒಂದು ಧಾರೆಯಲ್ಲಿಯೂ ಹಾಲು ಬಾರದ್ದರಿಂದ ದನಕಾಯುವ ಗೊಲ್ಲನು ಆಶ್ಚರ್ಯಪಟ್ಟು ಈ ಗೋವಿನ ಚಾವಡಿಕೊಂಡು ಹೋಗಿ ನೋಡುವುದರೊಳಗೆ ಅದೇ ಮೇರೆ ಗಾಯತ್ರಿಯು ಹುತ್ತದ ಮೇಲೆ ಹಾಲು ಸುರಿಸುವುದು ಕಂಡು ಅದನ್ನ ರಾಯನ ಬಳಿಗೆ ಹೇಳಲಾಗಿ ಆತನು ಸಂತೋಷಪಟ್ಟು ಆ ಅರಸು ಈ ಪರ್ವತಕೆ ಬಂದು ನೋಡಿ ಇಲ್ಲಿಯೇನೊ ದೇವತಾ ಇರಬಹುದು ಎಂದು ತಿಳಿದು, ಆ ತಕ್ಷಣದಲ್ಲಿ ಕಾಮಟೆ(ಹುತ್ತ ಹಗೆಯುವರು)ಯವರನ್ನ ಕರೆಸಿ ಆ ಹುತ್ತವನ್ನು ಬಗೆಸಿ ನೋಡಿದಲ್ಲಿ ಸಿದ್ದೇಶ್ವರ ಸ್ವಾಮಿಯ ಲಿಂಗವು ಪ್ರತ್ಯಕ್ಷವಾಗಿರುವುದನ್ನು ಕಂಡು ಅದಕ್ಕೆ ಪೂಜೆ ಮಾಡಿ, ದೇವಸ್ಥಾನವನ್ನು ಕಟ್ಟಿಸಿ ದೇವರ ಮೇಲೆ ಭಕ್ತಿಯಿಂದಲು ದೇವರಸೇವೆಯಲ್ಲಿಯೇ ಇದ್ದುಕೊಂಡು ಇರುತ್ತ ಇರಲಾಗಿ ಈ ಸ್ವರ್ಗಾವತಿ ಪಟ್ಟಣ ಆಳಿಕೊಂಡು ಸುಖದಲ್ಲಿ ಇದ್ದರು.

ಒಂದನೊಂದು ದಿವಸ ಈ ಪಟ್ಟಣದಲ್ಲಿ ಒಬ್ಬ ಬಡವಿಗೆ ಹತ್ತು ಜನ ಗಂಡುಮಕ್ಕಳು ಇದ್ದುದ್ದರಿಂದ ಹೊಟ್ಟೆಗೆ ಬಟ್ಟೆಗೆ ಮಕ್ಕಳ ಸಾಕಲಾರದೆ ಇರುವ ಬಡತನ ಆಕೆಗೆ. ಈ ಅರಸನಿಗೆ ಒಬ್ಬ ಸುಂದರ ಮಗನನ್ನು ಕೊಟ್ಟಿದ್ದರಿಂದಲು ಅರಸನ ಹೊಟ್ಟೆಯಲ್ಲಿ ಮಕ್ಕಳು ಇಲ್ಲದೆ ಯೋಚನೆ ಮಾಡುವಂತ ವೇಳೆಲಿ ಆ ಬಡವಿಯು ಅರಸನ ಬಳಿಗೆ ಬಂದು ಮಗನನು ಸಾಕಲಾರೆನು ಎಂದು ತಂದುಕೊಟ್ಟಿದ್ದರಿಂದ ಅರಸನಿಗೆ ಪರಮಸಂತೋಷದಿಂದಲು ಅವನನ್ನ

ಜೋಪಾನ ಮಾಡಿ ಅವನಿಗೆ ರಣಜಿರಾಯ ಎಂದು ನಾಮಕರಣ ಮಾಡುತ್ತಾನೆ. ಹೀಗೆಯೇ ರಾಜ್ಯಭಾರ ಮಾಡುತ್ತಾ ಇರುವಾಗ ಈತನ ಹೆಂಡತಿ ನೂತನದೇವಿ ಮಕ್ಕಳಾಗಲಿಲ್ಲ ಎಂದು ಯೋಚನೆ ಮಾಡುವ ಸಂದರ್ಭದಲ್ಲಿ ದೇವಲೋಕದಲ್ಲಿ ಸುಂದರವಾದ ಚಿತ್ರಶೋಭಿತೆಯೆಂಬ ಸ್ತ್ರೀಯು ರೂಪಲಾವಣ್ಯದಿಂದ ಇದ್ದಳು. ಒಬ್ಬ ದೃಷ್ಯದ್ಯುಮ್ನನೆಂಬ ಗಾಂಧರ್ವನು ಈಕೆಯನ್ನು ನೋಡಿ ಮೋಹಿತನಾಗಿ ಅಕೆಯ ಬಳಿ ಬಂದು ಮಾತನಾಡುತ್ತಾನೆ. ಅವಳಿಗೆ ಇಷ್ಟವಾಗದೆ ಎಲೆ ಗಾಂಧರ್ವನೆ ನೀನು ಕುಳಿತು ಇಂತಹ ದುರ್ವ್ಯವಹಾರಗಳ ನಡೆಸಿದರೆ ಸಾಮಾನ್ಯ ಜನರ ಪಾಡೇನಾಗಬೇಕು ಎಂದು ಹೇಳಿದಾಗ ಎಷ್ಟು ಹೇಳಿದರೂ ಕೇಳದೇ ಹೋದುದರಿಂದ ಚಿತ್ರಶೋಭಿತೆ ಅವನಿಗೆ ಶಾಪಕೊಟ್ಟಳು. 'ಇನ್ನು ಈ ಲೋಕದಲ್ಲಿ ಇರಬಾರದು' ಎಂಬುದಾಗಿ. ಆಕೆಯು ನಂತರ ಸೂಳೆಕೆರೆ (ಸುರಗಿರಿ) ಪ್ರಾಂತ್ಯಕ್ಕೆ ಬಂದು ಈ ಸ್ಥಳವನ್ನು ನೋಡಿ ಆನಂದಪಟ್ಟು ಈ ಸ್ತ್ರೀ ಜೀವನ ಬೇಡ ಎಂದು ಈ ಪರ್ವತದ ತಪ್ಪಲಿನಲ್ಲಿ ಶ್ರೀಪರಮೇಶ್ವರನ ಕುರಿತು ಒಂದು ವರ್ಷ ಪರಿಯಂತ್ರ ವಾಯುಆಹಾರವಾಗಿ ತಪಸ್ಸು ಮಾಡಿದ್ದರಿಂದ ಆಕೆಯ ಭಕ್ತಿಗೆ ಮೆಚ್ಚಿ ಪರಮೇಶ್ವರ ನಿಜರೂಪ ಧರಿಸಿ ಅಪ್ಪಣೆ ನೀಡಿ, "ಮುಂದೆ ನಿನ್ನಿಂದ ಮಹತ್ತರ ಕೆಲಸವಾಗಬೇಕಾಗಿದೆ" ಎಂದು ಈ ಪಟ್ಟಣದ ಅರಸನ ಹೆಂಡತಿಯ ಹೊಟ್ಟೆಯಲ್ಲಿ ಅಂದರೆ ನೂತನ ದೇವಿ ಹೊಟ್ಟೆಯಲ್ಲಿ ಜನಿಸು ಎಂದು ಹೇಳಿ ಕಾಣದೇ ಹೋದನು.

ಇತ್ತ ಕಡೆ ನೂತನದೇವಿ ಮಕ್ಕಳಾಗಲಿಲ್ಲ ಎಂಬ ಕೊರತೆಯಿಂದ ದೇವರ ಕುರಿತು ಪ್ರಾರ್ಥನೆ ಮಾಡಿಕೊಳ್ಳುತ್ತಾ ದಿನ ಆ ದೇವರಿಗೆ ಸೇವೆ ಸತ್ಕಾರ ಮಾಡುತ್ತಾ ಇರಲು ಒಂದು ದಿನ ಆ ಸ್ವಾಮಿ ಕನಸಿನಲ್ಲಿ ಬಂದು "ನಿನಗೆ ಗಂಡು ಸಂತಾನವಿಲ್ಲ, ಒಬ್ಬ ಹೆಣ್ಣು ಮಗಳು ಜನಿಸುತ್ತಾಳೆ" ಎಂದು ವಿಭೂತಿ ಕೊಟ್ಟು ಅಪ್ಪಣೆ ಕೊಟ್ಟದರಿಂದ ಆ ವಿಭೂತಿಯನ್ನ ದಿನ ಸೇವಿಸುತ್ತಾಳೆ. ಅದರ ಪರಿಣಾಮ ಒಂದು ತಿಂಗಳ ನಂತರ ನವಮಾಸ ತುಂಬಿ ಹೆಣ್ಣು ಶಿಶುವೂ ಜನಿಸುತ್ತಾಳೆ. ಈ ಪರಮೇಶ್ವರ ಸ್ವಾಮಿ ಹೆಸರನ್ನೇ ಈಕೆಗೆ ಶಾಂತಪರಮೇಶ್ವರಿ ಎಂಬುದಾಗಿ ಹೆಸರಿಟ್ಟರು.

ಹೀಗೆಯೇ ಬೆಳೆದು ದೊಡ್ಡವಳಾದ ಶಾಂತಪರಮೇಶ್ವರಿಗೆ ೧೦ ವರ್ಷ ತುಂಬಿದರಿಂದ ಲಗ್ನ ಮಾಡಬೇಕು ಎಂದು ವಿಕ್ರಮರಾಯ ಯೋಚನೆ ಮಾಡಿ ರಾಜ್ಯದಲ್ಲಿ ಗಂಡನ್ನ ವಿಚಾರಿಸಿ ತನ್ನ ಮಗಳು ಶಾಂತಪರಮೇಶ್ವರಿ ಕರೆದು "ನಿನಗೆ ಗಂಡ ಯಾರು ಬೇಕು" ಎಂದು ಕೇಳಿದಾಗ ಶಾಂತಪರಮೇಶ್ವರಿ ಯಾರನ್ನು ಒಪ್ಪದೇ ಪರಶಿವನೇ ತನ್ನ ಗಂಡ ಎಂದು ಹೇಳುತ್ತಾಳೆ. ಶ್ರೀ ಸ್ವಾಮಿ ಅಪ್ಪಣೆಯಾದ ಮೇರೆಗೆ ಮಾಡಬಹುದು ಎಂದು ನಿಶ್ಚಿಯಿಸಿದಲ್ಲಿ ಅದೇ ಪ್ರಕಾರ ಶಾಂತ ಪರಮೇಶ್ವರಿ ಸುರಗಿರಿ ಪರ್ವತದ ದೇವಸ್ಥಾನಕ್ಕೆ ಬಂದು ಶ್ರೀಸ್ವಾಮಿ

ಸೇವೆ ಮಾಡಿಕೊಂಡು ಹೀಗೆ ಭಕ್ತಿ, ಧ್ಯಾನ್ಯದಲ್ಲಿ ಇರಲು ಆ ಸ್ವಾಮಿ ನಿಜರೂಪ ತೋರಿಸಿದಲ್ಲಿ ಈಕೆ ನೋಡಿ ಆಶ್ಚರ್ಯಪಟ್ಟು ಇತನ ಬಿಟ್ಟು ಬೇರೆ ಪತಿಯೇ ಬೇಡ ಎಂಬುದಾಗಿ ಹೇಳಿ ಈಕೆಯ ಭಾವಕೆ ಮೆಚ್ಚಿ ಪರಮೇಶ್ವರನು ಮನುಷ್ಯಾಕೃತಿಯಲ್ಲಿ ದಿನ ಸಂಜೆ ಬರುತ್ತಾ ಇದ್ದ. ಒಂದು ಬೊಂತೆ (ಹರಿದ ಬಟ್ಟೆಗಳನ್ನ ಹೊಲಿದು ಮಾಡಿದ ಹಚ್ಚಡ, ಒಂದು ರೀತಿಯ ಚಿನ್ನದ ನಾಣ್ಯ ಎನ್ನಬಹುದು) ಕೊಡಹಿದರಿಂದ ದಿನ ಹಾಸಿಗೆಯಲ್ಲಿ ಬೀಳುತ್ತಿದ್ದವು. ಅವುಗಳನ್ನ ಮುದ್ರೆಯಿಂದ ಕೂಡಿದ ಚಿನ್ನದ ನಾಣ್ಯಗಳು ಅಂದರೆ ವರಹಗಳು ಹಾಸಿಗೆ ತೆಗೆದರೆ ಬೆಳಿಗ್ಗೆ ಸಿಗುತ್ತಿದ್ದವು. ಅವುಗಳಣ್ನು ಕೂಡಿ ಹಾಕಿ ಯೋಚನೆ ಮಾಡಿ 'ಈ ಸ್ತ್ರೀ ಜನ್ಮ ಸ್ಥಿರವಲ್ಲ' ಎಂದರೆ ಶಾಶ್ವತವಲ್ಲವೆಂದು ಇವುಗಳಿಂದ ಮುಂದೆ ಹೆಸರು ಉಳಿಯುವಂತೆ ಮಾಡಬೇಕು ಎಂದು ಒಂದು ದಿನ ಸ್ವಾಮಿ ಹತ್ತಿರ ಹೇಳುತ್ತಾಳೆ. ಆಗ ಸ್ವಾಮಿ ಅಪ್ಪನೆ ನೀಡಿ ಈ ಪರ್ವತದ ಮಗ್ಗುಲಲ್ಲಿ ಹಾದು ಹೋಗಿ ತುಂಗಾಭದ್ರ ನದಿಗೆ ಸಂಗಮವಾಗಿರುವ ಹರಿದ್ರಾ ನದಿಗೆ ವಡ್ಡ ಹಾಕಿ ಕೆರೆ ಕಟ್ಟಿಸು ಎಂಬುದಾಗಿ ಅಪ್ಪಣೆ ನೀಡುತ್ತಾನೆ. ಅಕೆ ತನ್ನ ತಂದೆ ವಿಕ್ರಮರಾಯನ ಬಳಿ ಬಂದು ಈ ವಿಷಯ ಹೇಳಿದಾಗ ಅವರು ಕಲ್ಲುವಡ್ಡರು, ಮಣ್ಣುವಡ್ಡರ ಕರೆಸಿ ಈ ಕೆರೆ ಕಟ್ಟಲು ಮುಂದಾದರು.

೧೦೦೦೦ ಮಣ್ಣು ವಡ್ಡರು ನಾಗ ಅರಸರು ತನ್ನ ಜನವನ್ನು ಕರಕೊಂಡು ಕೆಲಸ ಮಾಡಿಸಿ ಬಂದು ಶಾಂತಪರಮೇಶ್ವರಿ ಮುಂದೆ ನಿಲ್ಲಲು ಆಕೆಯು ಆ ವಡ್ಡರಿಗೆ ಗರ್ಭದಲ್ಲಿರುವ ಕೂಸಿಗೆ ಸಹವಾಗಿ ಹತ್ತು ಜನ ೧ಕ್ಕೆ ಒಂದು ಸೊಲಿಗೆ ಅಂದರೆ ಅವರಿಗೆ ಕೈಕಡಗ, ಕಾಲಿಗೆ ಬಳೆ, ಮುತ್ತಿನ ಆಭರಣವನ್ನು ಕೊಡುತ್ತಾ ಬಂದಳು. ಈ ಕೆರೆಯನ್ನು ೧೦ ವರ್ಷಗಳು ಕಟ್ಟಿದರು. ಈ ಕೆರೆಗೆ ಮೂರು ತೂಬುಗಳಿವೆ.

೧. ಪರ್ವತದ ಸಮೀಪದಲ್ಲಿರುವ ಸಿದ್ದೇಶ್ವರ ತೂಬು.

೨. ಇದರ ಮುಂಕಡರಿ ತೂಬು.

೩. ಸಾಂತ್ರಮ್ಮನವರ ಹೆಸರಲ್ಲಿ ತೂಬು.

ಈ ಮೂರು ತೂಬು ಹಚ್ಚಿ ಕೆರೆ ಕಟ್ಟಿದರು. ಗೌಡಿಯು ದಿನ ಅಮ್ಮನವರ ಕೆಲಸದಲ್ಲಿ ಇದ್ದುದರಿಂದ ಅಲ್ಲಿ ಕಸ ತೆಗೆಯುವಲ್ಲಿ ಸಿಕ್ಕದಂತ ವಸ್ತುಗಳನ್ನು ಕೂಡಿ ಹಾಕಿ ಈ ಪರ್ವತದ ಪಶ್ಚಿಮಕ್ಕೆ ತನ್ನ ಹೆಸರಿನಲ್ಲಿ ಕೆರೆ ಕಟ್ಟಿಸಿದಳು. ಇದಕ್ಕೆ ತೊತ್ತಿನ ಕೆರೆ ಎಂದು ಕರೆಯುತ್ತಿದ್ದರು.

ಹೀಗೆಯೇ ಕೆಲವು ದಿನಗಳ ಕಾಲ ಹೀಗೆಯೇ ಇರಲು ದಿನೇ ದಿನೇ ಕಲಿಯುಗ ಅಭಿವೃದ್ಧಿಯಾಗಿ ಪಾಪ ಹೆಚ್ಚಿದರಿಂದ ಸ್ವಾಮಿ ಕಾಣದೇ ಆಗುತ್ತಾನೆ. ಆಗ ಶಾಂತಮ್ಮನು "ಸ್ವಾಮಿಯನ್ನು ಎಂದಿನಂತೆ ಕಾಣದೇ ಹೋದುದರಿಂದ ಜನ್ಮವು ವ್ಯರ್ಥವಾಯಿತು, ಇನ್ನು

ಮೇಲೆ ಇದ್ದು ಸಾರ್ಥಕವಿಲ್ಲ ಎಂದು ಮಹಾವೈರಾಗ್ಯದಿಂದಲೂ ಕಲ್ಲು ಕಟ್ಟಿದಂತ ಕೆರೆಯಲ್ಲಿ ಕರಡಿ ತೂಬಿನ ಬಳಿಯಲ್ಲಿ ನಿಂತು ಗಂಗಾಪೂಜೆ ಮಾಡಿ, ಬ್ರಾಹ್ಮಣರಿಗೆ, ಮುತ್ತೈದೆರಿಗೆ ಸ್ತೋತ್ರ ಷೋಡಶೋಪಚಾರ ಪೂಜೆಯನ್ನ ಮಾಡಿ ಅವಳು ಈ ಕೆರೆಗೆ ಬಿದ್ದಳು. ಆ ಕೆರೆಯ ಗುರುತುಗಳು ಯಾವ ಯಾವ ಸ್ಥಳದಲ್ಲಿ ಕಾಣುತ್ತದೆಯೋ ಆ ಸ್ಥಳದಲ್ಲೂ ಹರಿದ್ರಕರವಾಗಿದ್ದುದು ಎಂಬುದಾಗಿ ಅಪ್ಪಣೆ ಕೊಟ್ಟರು. ಅದೇ ಮೇರೆಗೆ ಈ ಸ್ಥಳಗಳ ಗ್ರಾಮಗಳ ಪಟ್ಟಿ ಈಗಲೂ ಇದೆ. ಈಗಲೂ ಅಲ್ಲಿ ಗ್ರಾಮಗಳ ಕಟ್ಟಿಸಿ, ಅದೇ ಹೆಸರನ್ನೇ ಇಟ್ಟಿದ್ದಾರೆ.[೨]

ಆ ಸ್ವರ್ಗಾವತಿ ಪಟ್ಟಣವೇ ಈಗ ಸೂಳೆಕೆರೆ ಎಂದು ಕರೆಯಲಾಗಿದೆ. ಈ ಸೂಳೆಕೆರೆ ಎಂಬ ಹೆಸರು ಅಶ್ಲೀಲವಾಗಿದೆ ಎಂದು ಕೆಲವರು 'ಶಾಂತಿಸಾಗರ' ಎಂದು ೮೦ರ ದಶಕದಲ್ಲಿ ನಾಮಕರಣ ಮಾಡಲಾಯಿತು. ಆದರೆ ಒಬ್ಬ ಸೂಳೆಯನ್ನ ಆಕೆಯ ಸ್ಥಾನದಿಂದ ಪರಿಗಣಿಸದೆ ಲೋಕಕಲ್ಯಾಣಕ್ಕಾಗಿ ಆಕೆ ಮಾಡಿದ ತ್ಯಾಗವನ್ನು ಸಾರುವ ಮೂಲ ಹೆಸರು ಐತಿಹಾಸಿಕವಾಗಿ ಉಳಿದಿರುವಾಗ ಅದನ್ನು ಬದಲಾಯಿಸುವುದು ಸರಿಯಲ್ಲ ಎಂದು ಖ್ಯಾತ ಸಂಶೋಧಕ ಡಾ.ಎಂ.ಚಿದಾನಂದಮೂರ್ತಿ ಹೇಳಿದ್ದಾರೆ. ಮತ್ತೆ ಸೂಳೆಕೆರೆ ಎಂದು ಮರುನಾಮಕರಣ ಮಾಡಿದರು. ಅದೇನೆ ಇರಲಿ, ಈ ಶಾಂತವ್ವೆ ಕಟ್ಟಿಸಿದ ಕೆರೆ ಚಿರಕಾಲ ಉಳಿಯುವಂತೆ ಇದೆ. ಹೀಗೆಯೇ ಮೆಕೆಂಝಿ ಸ್ಥಳನಾಮಗಳ ಬಗ್ಗೆ ಕೈಫಿಯತ್ತುಗಳಲ್ಲಿ ಬರೆಸುತ್ತಾ ಹೋಗುತ್ತಾನೆ. ಈ ಸ್ಥಳನಾಮಕ್ಕೆ ಈಗಲೂ ಸೂಳೆಕೆರೆ ಎಂದು ಹೆಸರು ಇದೆ.

ಹಾಗೆಯೇ ಜನಪದರು ಕೂಡಾ ಈ ಸೂಳೆಕೆರೆ ಬಗ್ಗೆ ಹಲವಾರು ಅಭಿಪ್ರಾಯ ನೀಡುತ್ತಾರೆ. ವಿಕ್ರಮರಾಯನ ಮಗಳು ಶಾಂತವ್ವೆ ಎನ್ನುವವಳು ದೇವ ಪುರುಷನೊಬ್ಬನಲ್ಲಿ ಅನುರಕ್ತಳಾದಳೆಂದು ಮದುವೆಗೆ ಮುನ್ನ ಶೀಲ ಕಳೆದುಕೊಂಡಿದ್ದರಿಂದ ತನ್ನ ತಂದೆಯೇ ಶಾಂತವ್ವೆಯನ್ನು ಸೂಳೆ ಎಂದು ಕರೆದ. ಅದರ ಪಶ್ಚಾತಾಪಕ್ಕಾಗಿ ಲೋಕಕಲ್ಯಾಣಕೋಸ್ಕರ ಈ ಉದ್ದೇಶವಿಟ್ಟುಕೊಂಡು ಕೆರೆ ಕಟ್ಟಿಸಿದರ ಬಗ್ಗೆ ಪುರಾಣ ಕತೆಗಳು ಜನಪದರ ಬಾಯಲ್ಲಿ ಇವೆ. ಹೀಗೆಯೇ ಕೈಫಿಯತ್ತುಗಳಲ್ಲಿ ಮತ್ತೆ ಜನಪದರಲ್ಲಿ ಈ ಸೂಳೆಕೆರೆ ಬಗ್ಗೆ ಈ ರೀತಿಯ ಅಭಿಪ್ರಾಯಗಳಿವೆ.

೪.೧.೨. ಸಂತೇಬೆನ್ನೂರು ಸೀಮೆಯಿಂದ ಕೈಫಿಯತ್ತು ಪಟ್ಟಿ

ಹರಿಹರದೇವ ಮಹಾರಾಯರು ರತ್ನಸಿಂಹಾಸನಾರೂಢನಾಗಿ ರಾಜ್ಯವನ್ನು ಆಳುತ್ತಾ ಹರಿಹರ ಮುಂತಾದ ಸ್ಥಳಗಳಲ್ಲಿ ಬಂದು ಇರುವ ಸಮಯದಲ್ಲಿ ಮದಕರಿಯೆಂಬ ಸ್ಥಳದಲ್ಲಿ ಗಿಡ ಬೆಳೆದು ಮಹತ್ತರವಾದ ಬೆಟ್ಟ ಇದ್ದಲ್ಲಿ, ಅಲ್ಲಿ ಕೊಬ್ಬೆರಿದ ಆನೆ ಇರುತ್ತಿರಲಾಗಿ ಈ

ವಿಷಯವನ್ನು ರಾಯರಿಗೆ ತಿಳಿಸಲಾಗಿ ರಾಯರು ಈ ಮದೋನ್ಮತ್ತವಾಗಿದಂಥ ಆನೆಯನ್ನು ಕೈವಶ ಮಾಡಿಕೊಳ್ಳುವ ನಿಮಿತ ಇಲ್ಲಿಗೆ ಬಂದರು. ಈ ಆನೆ ಇವರ ವಶವಾಗದೆ ಇದ್ದುದರಿಂದ ರಾಯರು ತಮ್ಮ ಮನಸ್ಸಿಗೆ ವ್ಯಾಕುಲ ಹಚ್ಚಿಕೊಂಡು ಆ ದಿವಸ, ಆ ಆನೆ ಇರುವ ಸ್ಥಳದಲ್ಲಿಯೇ ಇದ್ದು, ಈ ರಾಯರ ಸಂಗಡ ಶ್ರೀವತ್ಸಗೋತ್ರದ ಆಪಸ್ತಂಭಸೂತ್ರದ ಯಜುಶ್ಶಾಖೆಯ ಇಂದ್ರಕುಟಿ ಆವಳಿ ನರಸಿಂಹಭಟ್ಟನು ಆಶ್ರಯಿಸಿಕೊಂಡು ಇರಲಾಗಿ ಈ ಸಮಯದಲ್ಲಿ ರಾಯರು ಈತನ ಕುರಿತು ಪ್ರಶ್ನೆಯನ್ನು ಮಾಡಲಾಗಿ ನರಸಿಂಹಭಟ್ಟನು "ಉದಯವಾದ ಅಂದರೆ ಬೆಳಗಿನ ಜಾವ ೩ಕೆ ಆನೆಯು ಕೈವಶವಾಗುತ್ತದೆ ಎಂಬುದಾಗಿ ಹೇಳಿದಲ್ಲಿ ರಾಯರು "ಈ ಪ್ರಶ್ನೆಯು ಸುಳ್ಳು ಆಗಬಾರದು" ಎಂದು ಕೇಳಿದಲ್ಲಿ ಆತನು "ಈ ಪ್ರಶ್ನೆ ಬಗ್ಗೆ ದೇವತಾ ಅನುಗ್ರಹ ಉಂಟು. ತಮಗೆ ದೇವರು ಕನಸಿನಲ್ಲಿ ಹೇಳಿದ್ದಾರೆ ಎಂಬುದಾಗಿ ಹೇಳಿದರಿಂದ ಅದೇ ಪ್ರಕಾರಕ್ಕೆ ಕನಸಿನ ಮುಖದಿಂದ ದೇವರು ಪ್ರಸನ್ನನಾಗಿ, "ಈ ಆನೆ ಇಂಥಹ ವೇಳೆಗೆ ನಿನಗೆ ವಶವಾಗುತ್ತದೆ ಯೋಚನೆ ಮಾಡಬೇಡಾ ಎಂದು ಅಪ್ಪನೆ ಕೊಟ್ಟಿದ್ದರಿಂದ ರಾಯರು ಜಾಗ್ರತರಾಗಿ ಮಲಗಿರಲು ಬಿಟ್ಟು ನೋಡಲು ಇವರು ಇಳಿದು ಇದ್ದ ಸ್ಥಳದಲ್ಲಿ ಒಂದು ಹುತ್ತವಿತ್ತು. ಆ ಹುತ್ತದಲ್ಲಿ ಪ್ರಕಾಶ ಮಾನವಾಗಿ ದಿವ್ಯ ಮಾಣಿಕ್ಯದೋಪಾದಿಯಲ್ಲಿ ಲಿಂಗಾಕಾರವಾಗಿ ಕಂಡದರಿಂದ ಇವರೇ ಪ್ರಸನ್ನ ಮೂರುತಿ ಎಂಬುದಾಗಿ, ಅಲ್ಲಿ ಮದಕರಿಯೆಂಬುದಾಗಿ ಗ್ರಾಮಕ್ಕೆ ಹೆಸರು ಇಟ್ಟು ಕನಸು ಬಿದ್ದ ಸ್ಥಳದಲ್ಲಿ ಗಿಡ ಹತ್ತಿದಂತಾಗಿದ್ದು, ಅದನ್ನ ಕಡಿಸಿ ದೇವಸ್ಥಾನವನ್ನು ಕಟ್ಟಿಸಿದನು. ಆ ದೇವರಿಗೆ ತೋಪಿನ ರಂಗನೆಂದು ಹೆಸರು ಇಟ್ಟು, ಆ ಸ್ಥಳದಲ್ಲಿ ಕೊಪ್ಪನಹಳ್ಳಿಯೆಂಬ ಗ್ರಾಮಕಟ್ಟಿಸಿದನು.

ರಾಯರು ಹರಿಹರ ಗುಹಾರಣ್ಯ ಕ್ಷೇತ್ರದಲ್ಲಿ ತುಲಾಪುರುಷವೆ ಮುಖ್ಯವಾದ ದಾನಗಳ ಕೊಡುವ ಸಮಯದಲ್ಲಿ ಈ ನರಸಿಂಹ ಬಟ್ಟಗೆ ಶಕ ೧೩೧೬ನೆಯ ಯುವ ಅಥವಾ (ಅರವತ್ತು ಸಂವತ್ಸರಗಳಲ್ಲಿ ಒಂದು) ವೈಶಾಖ ಶು ೧೫ ಚಂದ್ರಗ್ರಹಣದಲ್ಲಿ ಜ್ಯೋತಿಷ್ಯಾ ಪೌರೋಹಿತ್ಯ ಶ್ಯಾನುಭೋವಿಕೆ ಬಗ್ಗೆ ಸಹಾ ನರಸಿಂಹಬಟ್ಟಗೆ ಶಾಸನವನ್ನು ಬರೆಸಿಕೊಟ್ಟು ಹವಳಕಟ ಬ್ರಹ್ಮನಹಳ್ಳಿ ಎರಡು ಗ್ರಾಮ ಗ್ರಾಮಾನುಗ್ರಾಮಗಳಲ್ಲಿ ಗದ್ದೆ ಬೆದ್ದಲ್ಲು ಮುಂತಾಗಿ ಸರ್ವಮಾನ್ಯಯತ್ತಲಾಗಿ ನಡೆದು ಬರುವಂತೆ ದಯಪಾಲಿಸಿದರು.

ಇತ್ತ ಕಡೆ ರಾಯರ ಆಕಳ ಹಿಂಡುಗಳ ದೇವಗಿರಿಯಲ್ಲು ಆಡುತ್ತಾ ಇರಲು, ಅದರಲ್ಲಿ ಒಂದು ಪಂಚಮೊಲೆಯ ಕಾಮಧೇನುಯೆಂಬ ಕಪಿಲೆಯ ಆಕಳು ಹೋಗಿ ಗುಡ್ಡವನ್ನು ಹತ್ತಿಹುತ್ತದ ಮೇಲೆ ಹಾಲು ಕರಿಯುತ್ತಾ ಇದ್ದಲ್ಲಿ ಇದು ರಾಯರಿಗೆ ತಿಳಿದು ಆ ಆಕಳ ಸಹವಾಸಕ್ಕೆ ಹೋಗಬೇಡ ಎಂದು ಗೋವನ್ನ ಹಾಡಿಸುವವನಿಗೆ ಹೇಳುತ್ತಾನೆ.

ಹೀಗೆಯೇ ಒಂದಾನೊಂದು ಕಾಲದಲ್ಲಿ ರಾಯರ ಕಡೆಯಿಂದ ಕುದುರೆಗಳು ಏರಿ ಭೇಟೆಗಾರರು ಭೇಟೆ ಆಡುತ್ತಾ ಬರುವ ಸಮಯದಲ್ಲಿ ಒಂದು ಉಡವು ಕಣ್ಣಿಗೆ ಕಂಡದ್ದರಿಂದ ಆ ಉಡಕ್ಕೆ ನಾಯಿಗಳ ಬಿಟ್ಟು ಬಲೆ ಹಾಕುತ್ತಾರೆ. ಆ ಉಡವು ಏನಕ್ಕೂ ಬಗ್ಗದೇ ಯಾರಿಗೂ ಸಿಗದೇ ದೊಡ್ಡ ಉಡವಾಗುತ್ತದೆ. ಆ ಸ್ಥಳದಲ್ಲಿ ಹೋಗಿ ಒಂದು ಗುರುತು ಮಾಡುತ್ತದೆ. ಮತ್ತೆ ಅವರು ಬೆನ್ನು ಹತ್ತುತ್ತಾರೆ. ಆಗ ಚಿಕ್ಕ ಉಡವಾಗಿ ಕಂಡದರಿಂದ ಆಶ್ಚರ್ಯಪಟ್ಟು ಆ ಸ್ಥಳಕ್ಕೆ ಒಂದು ಗುರುತು ಮಾಡಿ ಮತ್ತೆ ಬೆನ್ನ ಹತ್ತಿ ಹಿಂದೆಯೇ ಹೋಗುತ್ತಾರೆ. ಅದು ಆಗ ಅವರನ್ನ ನೋಡುತ್ತಾ ನಿಲ್ಲುತ್ತದೆ. ಆ ಸ್ಥಳಕ್ಕೂ ಒಂದು ಗುರುತು ಮಾಡಿ ಮತ್ತೆ ಹೋದಾಗ ಈ ಜನರ ಕುರಿತು ಪಾಠವನ್ನ ಅಥವಾ ನೀತಿಯನ್ನ ಹೇಳಿ ಇವಕ್ಕೂ ಗುರುತು ಮಾಡಿ ಮತ್ತೆ ಉಡವನ್ನು ಬೆನ್ನ ಹತ್ತಿ ಬರಲು ಪೂರ್ವದ ದೇವಗಿರಿಯ ಗುಡ್ಡದ ಮೇಲೆ ಆಕಳು ಹಾಲು ಕರೆಯುತ್ತಿದ್ದ ಹುತ್ತವನ್ನು ಹೊಕ್ಕದರಿಂದ ಈ ಬ್ಯಾಟೆಕಾರರು ಕಂಡು ಹುತ್ತವನ್ನ(ವಾಲ್ಮೀಕ) ಬಗೆದು ನೋಡಿದ ಸಮಯದಲ್ಲಿ ಇವರ ಸಂಗಡ ಇದ್ದ ನಾಯಿಗಳು ಪ್ರಜ್ಞೆ ತಪ್ಪಿದವು.

ಹೀಗೆಯೆ ಭಗವಂತನ ಅನುಗ್ರಹದಿಂದ ಆ ಪ್ರಜ್ಞೆ ತಪ್ಪಿದ ಜನರಲ್ಲಿ ಒಬ್ಬನಿಗೆ ಎಚ್ಚರವಾಗಿ ಆತ ಎದ್ದು ಈ ಸಂಗತಿ ಕಂಡು ಅಲ್ಲಿ ನಿಲ್ಲುವುದಕ್ಕೆ ಧೈರ್ಯವಿಲ್ಲದೆ ಪುನಃ ರಾಯರ ಸಮೀಪಕ್ಕೆ ಹೋಗಿ ಈ ಘಟನೆ ತಿಳಿಸಲಾಗಿ ಅವರು ಅದು ಏನು, ಯಾವುದು, ಸಂಗತಿಯೇನು ಎಂದು ಅವರು ಯಾಕೆ ಪ್ರಜ್ಞೆ ತಪ್ಪಿದರು ಎಂದು ರಾಯರು ಆ ಸ್ಥಳವು ಸ್ಥಳವಲ್ಲ, ಗುಹಾರಣ್ಯಕ್ಕೆ ಸಮವಾದುದು ಎಂದು ಹರಿದ್ರಾ ತೀರ ನಾವು ಹರಿಹರಾತ್ಮಕರು ಇದ್ದೇವೆ ಎಂಬುದಾಗಿ ಹೇಳಲು ರಾಯರು ಪ್ರಾರ್ಥಿಸಿಕೊಂಡು ಆ ಸ್ಥಾನದಿಂದ ಈ ಜನರು ಪ್ರಕಾರ ಮಾಡಿದರ. ಮುಂದೆ ಈ ಜನರು ಪೂರ್ವ ಪ್ರಕಾರಕೆ ಮೂರ್ಚೆ ತಿಳಿದು ಎದ್ದರು. ಸ್ಥಳ ಮಹತ್ತು ಇದೆಯೇ ಸರಿಯೆಂಬುದಾಗಿ ಪ್ರಾರ್ಥಿಸಿಕೊಳ್ಳಲಾಗಿ ಅದೇ ಪ್ರಕಾರವಾದುದರಿಂದ ರಾಯರು ಈ ಸ್ಥಳವೂ ಮಹಾಘಟಿಕಾ ಸ್ಥಳ, ಆದಿ ಹರಿಹರಾತ್ಮಕವಾದಂತಾದು ಎಂಬುದಾಗಿ ಪೂರ್ವದಲ್ಲಿ ಉಡವೂ ಬೇಟೆ ಆಡುವ ಸಮಯದಲ್ಲಿ ಯಾವ ಸ್ಥಳಗಳನ್ನ ತೋರಿಸಿತೋ ಆ ಗುರುತಿನ ಸ್ಥಳಗಳಿಗೆ ಗ್ರಾಮಗಳನ್ನ ನಿರ್ಮಾಣ ಮಾಡಿಸಿ ಶ್ರೀಹರಿಹರಾತ್ಮಕವಾಗಿ ಉಡ ವಿನಾಕಾರಣದಿಂದ ತೋರಿಸಿ ಕೊಂಡದ್ದರಿಂದ 'ಉಡುಮರೂಪಿ ರಂಗನಾಥ' ಎಂಬುದಾಗಿ ಈ ಸ್ಥಳದಲ್ಲಿ ಒಂದು ಅಂಕಣ ದೇವಸ್ಥಾನವನ್ನು ಕಟ್ಟಿಸಿ ಈ ದೇವರಿಗೆ ಈ ಗ್ರಾಮಗಳನ್ನು ಉತ್ತರವನ್ನ ಕೊಟ್ಟರು. ದೇವರಿಗೆ ಇದ್ದ ಸ್ಥಳಕ್ಕೆ ದೇವರಹಳ್ಳಿ ಗ್ರಾಮ ಕಟ್ಟಿದರು. ಚನ್ನಾಸಿಗಿಯಾ ಬೇಟೆಗಾರರು ನಿರೀಕ್ಷಿಸಿದ ಸ್ಥಳದಲ್ಲಿ ಚೆನ್ನಾಪುರಯೆಂಬ ಗ್ರಾಮ ಕಟ್ಟಿಸಿದರು.

ಈ ಪ್ರಮುಖ ಆದಂತ ಉಡವೂ ಬ್ಯಾಟೆಕಾರರನ್ನ ನಿಂತು ನೋಡಿದ ಸ್ಥಳಕ್ಕೆ ನಿಂತಾಪುರವೆಂಬ ಗ್ರಾಮ ಕಟ್ಟಿದರು. ದೊಡ್ಡ ಉಡವಾಗಿದ್ದರಿಂದ ಆ ಸ್ಥಳಕ್ಕೆ ಹಿರೆಉಡವೆಂಬ

ಗ್ರಾಮವನ್ನ ಕಟ್ಟಿಸಿದರು. ಈ ಬ್ಯಾಟೆಕಾರರ ಹತ್ತಿರ ಆಶ್ಚರ್ಯಕರವಾದ ಉಡವು ನೀತಿಯನ್ನು ಹೇಳಿದಂಥ ಸ್ಥಳಕ್ಕೆ ನೀತಿಗೆರೆ ಗ್ರಾಮ ಕಟ್ಟಿಸಿದರು. ಈ ಉಡವು ದೇವಗಿರಿ ಗುಡ್ಡಕ್ಕೆ ಪ್ರವೇಶ ಮಾಡುವಾಗ ನಿಂತು ರಾಮರಾಮ ಎಂದು ಧ್ವನಿ ಮಾಡಿದ ಸ್ಥಳಕ್ಕೆ ರಾಮನಹಳ್ಳಿ ಎಂಬ ಗ್ರಾಮ, ಈ ಉಡವು ನಮ್ಮ ವಶವಾಗದೆಂದು ಬ್ಯಾಟಿಕಾರರು ತರ್ಕ ಮಾಡಿದಲ್ಲಿ ಆ ಊರಿಗೆ ತಗರೂರು ಎಂಬ ಗ್ರಾಮ ಕಟ್ಟಿಸಿದರು.[೨] ಈ ಪ್ರಕಾರ ಇದ್ದ ಸ್ಥಳಗಳಲ್ಲಿ ಗ್ರಾಮಗಳನ್ನ ಕಟ್ಟಿಸಿ ದೇವರಿಗೆ ಉತ್ತರ ನೇಮಕ ಮಾಡಿದ್ದ ಹೀಗೆಯೇ ಆ ಉಡವೂ ತೋರಿಸಿದ ಜಾಗದಲ್ಲಿ ಇಂದು ಕೂಡಾ ಅದೇ ಹೆಸರುಗಳು ಇರುವುದನ್ನು ತಿಳಿಯಬಹುದು.

ಆದರೆ ಜನಪದರು ಕೂಡಾ ಈ ರೀತಿ ತಿಳಿಸಿದ್ದಾರೆ. ವಿಜಯನಗರದ ಅರಸು ಹರಿಹರ ಮಹಾದೇವ ಬೇಟೆಗಾಗಿ ಈ ಪ್ರಾಂತ್ಯಕ್ಕೆ ಒಮ್ಮೆ ಬಂದಾಗ ಆತನ ಸೈನಿಕರಿಗೆ ಒಮ್ಮೆ ದೊಡ್ಡ ಉಡವೊಂದು ಕಾಣಿಸಿತಂತೆ. ಅದನ್ನು ಹಿಡಿಯಲು ಬೆನ್ನಟ್ಟಿದಾಗ ಅದು ಈಗಿನ ಮರಡಿ ಗ್ರಾಮದ ಬಳಿ ಸುಗಂಧ ವಾಸನೆ ಹೊರಚೆಲ್ಲಿದ್ದರಿಂದ ಅದಕ್ಕೆ ಧೂಪ ಮರಡಿಯೆಂದಾಗಿತು. ಈ ನಂತರ ಬೆಳ್ಳಿಗನೂರು ಬಳಿ ಬೆಳ್ಳಿಯಂತೆಯೂ, ಹಿರೇ ಉಡ ಬಳಿ ದೊಡ್ಡ ಉಡವಾಗಿ ಚಿಕ್ಕ ಉಡ ಚಿಕ್ಕದಾಗಿ, ಕಾಕನೂರು ಬಳಿ ಕಾಗೆ ಕೂಗಿತೆಂದೂ, ಕೊಂಡದಹಳ್ಳಿ ಬಳಿ ಕೆಂಡವಾಗಿ, ರಾಮಗೊಂಡನಹಳ್ಳಿ ಬಳಿ ರಾಮರಾಮ ಎಂದು, ನೀತಿಗೆರೆ ಬಳಿ ನೀತ ಹೇಳಿ, ನುಗ್ಗಿಹಳ್ಳೀ ಬಳಿ ನುಗ್ಗಿಕೊಂಡು, ಈಗಿನ ದೇವರಹಳ್ಳಿ ಆಗಿತು ಎಂದು ಪುರಾಣಕತೆಯನ್ನು ಈ ಜನಪದರು ಕಟ್ಟಿ ಕೊಟ್ಟಿದ್ದಾರೆ. ಆದರೆ ಈ ಕತೆಯು ಆ ಸ್ಥಳನಾಮದ ಬಗ್ಗೆ ಐತಿಹ್ಯವನ್ನು ಕುರಿತು ಹೇಳುತ್ತದೆ. ಆ ಉಡವು ಹೇಳಿದ ಜಾಗದಲ್ಲಿ ಹೀಗಿನ ಹೆಸರುಗಳು ಅಸ್ತಿತ್ವದಲ್ಲಿವೆ.

೪.೧.೩. ಹರಿಹರದ ಕೈಫಿಯತ್ತು.

ಪೂರ್ವದ ಕಲಿಯುಗದ ಆದಿಯಲ್ಲಿ ಅಥವಾ ಪ್ರಾರಂಭದಲ್ಲಿ ಜನಮೇ ಜಯರಾಮ ದಕ್ಷಿಣ ದೇಶದ ದಿಕ್ಕಿಗೆ ಬರುವ ಬಗ್ಗೆ, ಯುದಿಷ್ಠರ ಶಖ ೧೧೧೧ನೇ ವರ್ಷ(ಸಂವತ್ಸರ)ದಲ್ಲಿ ದೇಶವನ್ನು ಸಾಧಿಸುತ್ತಾ ಹರಿಹರದ ಸಮೀಪಕ್ಕೆ ಬಂದು ಅಲ್ಲಿ ಸಕಲ ಮುನೀಶ್ವರ ಸಮೇತವಾಗಿ ಇರಲು ತನಗೆ ಶತ್ರು ಒಬ್ಬರು ಇಲ್ಲ ಎಂಬುದಾಗಿ ಅಂದುಕೊಂಡಲ್ಲಿ ತನ್ನ ತಂದೆಯಾದ ಪರೀಕ್ಷಿತುರಾಯರಿಗೆ ತಕ್ಷಕನಿಂದಾ ತನ್ನ ತಂದೆಗೆ ಉಪದ್ರವವಾಗಿ ಹೋದುದರಿಂದ ಪುತ್ವಾ ಸಾಧಿಸಬೇಕು, ಹರಿಹರದಲ್ಲು ಹರಿದ್ರಾ ನದಿ ತುಂಗಭದ್ರಾ ಸಂಗಮ ಸ್ಥಳದಲ್ಲಿ ಸರ್ಪಯಾಗವನ್ನು ಮಾಡಿಸುವ ಸಮಯದಲ್ಲಿ ಸಮಸ್ತ ಬ್ರಾಹ್ಮಣರು ಮುಂತಾದವರಿಗೆ ಯಾಗದ ಸಮಯದಲ್ಲಿ ಬಡಗಲ(ಉತ್ತರದಿಕ್ಕು) ದೇಶದಿಂದ ಬ್ರಾಹ್ಮಣರು ಗೌತಮಗೋತ್ರದ ಗೋವಿಂದಪ್ಪ ವರ್ಧನಿ, ವಶಿಷ್ಠಗೋತ್ರದ ವಾಮನಪ್ಪ ವರ್ಧನ, ಭಾರದ್ವಾಜ ಗೋತ್ರದ ಕೇಶವ ದೀಕ್ಷಿತರು, ಶ್ರೀವತ್ಸಗೋತ್ರದ

ನಾರಾಯಣದೀಕ್ಷಿತರೂ, ಚತುರಮುಖ ನಾನಾಗೋತ್ರದ ಬ್ರಾಹ್ಮಣಂಗೆ ತಮ್ಮ ಆಶ್ರಯವಾದ ಗೌತಮ ಗ್ರಾಮವನ್ನು ಧಾರಾಪೂರ್ವಕವಾಗಿ ಧಾರೆಯೆರದು ಕೊಟ್ಟರು, ತಾಮ್ರ ಶಾಸನವನ್ನು ಸಹ ಬರೆಸಿಕೊಟ್ಟರು. ನಾವು ಅನುಭವಿಸುತ್ತಾ ಇದ್ದಲ್ಲಿ ಸರ್ವಮಾನ್ಯವೂ ನುಡಿಯುತ್ತಾ ಬಂದು ತರುವಾಯ ಬಳ್ಳಾಳಲರಾಯರ ಕಾಲದಲ್ಲಿ ಆನೆಗೊಂದಿ ರಾಯರ ಕಾಲದಲ್ಲಿ ಸರ್ವಮಾನ್ಯವನ್ನು ಬ್ರಾಹ್ಮಣರಿಗೆ ನಡೆಯುತ್ತಾ ಬರುತ್ತಾ ಇದ್ದಲ್ಲಿ ಇರಲಾಗಿ ಇಕ್ಕೇರಿ ಸಂಸ್ಥಾನ ಶಿವಭಕ್ತರಿಗೆ ಅದರಿಂದ ಸಿದ್ದಪ್ಪನಾಯಕರ ಕಾಲದಲ್ಲಿ ಈ ಗ್ರಾಮಕ್ಕೆ ಕೂಡಿದ ೧೨ ಕುಲಗ್ರಾಮವನ್ನು ಬಿಡಿಸಿ ಈ ಗೋತಮ ಗ್ರಾಮಕ್ಕೆ ಶಿಸ್ತುಕಟ್ಟಿ ಅರವಾಸಿ ಹಣವನ್ನು ತೆಗೆದುಕೊಳ್ಳುತ್ತಾ ಬಂದರು.

ಅನಂತರ ಮುಸಲ್ಲರ ಅವಾಂತರದಲ್ಲು ಆ ಗ್ರಾಮ ಸುಟ್ಟು ಹಾಳು ಆಯಿತು. ಮತ್ತೆ ಈಚೆಗೆ ಬಾಜೀರಾಯರ ಕಾಲದಲ್ಲಿ ಪುನಃ ಹಾಳು ಆಯಿತು. ತರುವಾಯ ನಾನಾರಾಯರು ಎರಡು ವೇಳೆ ಬಂದು ಹೋದ ಬಳಿ ಸೂರ್ಯ ಬರೆದ ಆಕೃತಿ(ಚಿತ್ರಭಾನು) ಸಂವತ್ಸರ ಬಾಹದರನ ಆವಾಂತರವಾಗಿ ನಗರದ ರಾಜ್ಯ ಸ್ವಾಧೀನ ಮಾಡಿಕೊಂಡು ಸ್ವಭಾನುಸಂವತ್ಸರದಲ್ಲಿ ಆರೊವಾ ವರಹಾ ಪ್ರಕಾರ ಇದ್ದ ನಗದಿಕಟ್ಟಿ ರಾಜ್ಯ ನಡೆಸುತ್ತಾ ಬಂದರು. ತಾರಣ ಸಂವತ್ಸರದಲ್ಲು ಮಾಧವರಾಯರ ಆವಾಂತರದಲ್ಲು ಸುಟ್ಟು ಹಾಳು ಮಾಡಿದರು. ದಾಯ ಬಾಹದರವರ ಠಾಣಾಯಾಗಿ ಶುಭಕೃತು ಸಂವತ್ಸರ ಪರಿಯಂತ್ರ ಅರವಾಸಿ ಪ್ರಕಾರ ನಡಿಸುತ್ತಾ ಬಂದರು. ನಂತರ ಸುಲ್ತಾನರು ಶೋಭನಕೃತು ಸಂವತ್ಸರದಲ್ಲು ಈ ಗ್ರಾಮವನ್ನು ಅನಂತಪುರ ತಾಲೂಕಿಗೆ ಸೇರಿಸಿ ಜಪ್ತಿ ಮಾಡಿ ಯಾವತ್ತು ರೊಕ್ಕವನ್ನು ತೆಗೆದುಕೊಳ್ಳುತ್ತಾ ಬಂದರು. ಇಚ್ಚೆಗೆ ಸಿದ್ಧಾರ್ಥಿ ಸಂವತ್ಸರದಲ್ಲು ಇಂಗರೀಜಿ ಅವರು ಶ್ರೀರಂಗಪಟ್ಟಣ ಠಾಣೆ(ನೆಲೆ)ಗೆ ಹಾಕಿ, ಮೈಸೂರು ಸಂಸ್ಥಾನ ಅರಸುಗಳಿಗೆ ಕೊಟ್ಟ ಮೇಲೆ ಸ್ವಭಾನು ಸಂವತ್ಸರದಲ್ಲಿ ನಡೆದ ಪ್ರಕಾರ ಅರವಾಸಿ ನಡಿಸುತ್ತಾ ಇದ್ದಾರೆ. ಈಗ ನಡೆಯೋ ಬ್ರಾಹ್ಮಣರು ಅಗ್ರಹಾರದಲ್ಲು ಇರುವಂಥಾದ್ದು. ೧೮ ಒಕ್ಕಲುತನ ೧. ಮರಿಭಟ್ಟರು ಜೋಯಿಸರು ಕಾಶೀಪದ ಗೋತ್ರದವರು, ೨. ಅಗಸ್ತಿಗೋತ್ರದ ನಾರಾಯಣಭಟ್ಟರ ಸೋಮಭಟ್ಟರು, ೩. ಶ್ರೀವತ್ಸಗೋತ್ರದ ನರಸಿಂಹಭಟ್ಟರು, ೪. ಗೌತಮಗೋತ್ರದ ಸೂರ್ಯನಾರಾಯಣ ಭಟ್ಟರು, ೫. ವಶಿಷ್ಠ ಗೋತ್ರದ ಲಿಂಗಭಟ್ಟರು, ೬. ಕೌಂಡಿಣ್ಯಗೋತ್ರದ ವೆಂಕಟೇಶ್ವರ ಭಟ್ಟರು, ೭. ಭಾರದ್ವಾಜ ಗೋತ್ರದ ಕೃಷ್ಣಭಟ್ಟರು, ೮. ಹರಿತ್ಸಗೋತ್ರದ ಸುಬ್ಬಾಭಟ್ಟರು, ೯. ಕಾಶ್ಯಪ ಗೋತ್ರದ ರಾಮಭಟ್ಟರು ೧೦. ವಿಶ್ವಾಮಿತ್ರ ಗೋತ್ರದ ಮುಡ್ಲಗಿರಿಭಟ್ಟರು, ೧೧. ಜಮದಗ್ನಿ ಗೋತ್ರದ ನರಸಿಂಹಭಟ್ಟರು, ೧೨. ಹರಿತ್ಸಗೋತ್ರದ ಮಲ್ಲಿಭಟ್ಟರು, ೧೩. ಭಾರದ್ವಾಜಗೋತ್ರದ ಸುಬ್ಬಾಭಟ್ಟರು, ೧೪. ಭಾರದ್ವಾಜ ಗೋತ್ರದ ಸಿಂಗಾಭಟ್ಟರು, ೧೫. ವಶಿಷ್ಠಗೋತ್ರದ ರಾಮಪ್ಪಭಟ್ಟರು, ೧೬. ಶ್ರೀವತ್ಸಗೋತ್ರದ ಮಾದವಭಟ್ಟರ ನರಸಿಂಹಭಟ್ಟರು, ೧೭. ಭಾರದ್ವಾಜ ಗೋತ್ರದ ಶಂಕರಭಟ್ಟ, ೧೮. ಹರಿತ್ಸಗೋತ್ರದ ನರಸಿಂಹ ಭಟ್ಟರು.

ದೇವರ ವೃತ್ತಿಗಳು ೬

೧. ಸೋಮೇಶ್ವರ ದೇವರು, ೨. ವಿನಾಯಕದೇವರು, ೩. ಹನುಮಂತ ದೇವರು, ೪. ಸೂರ್ಯನಾರಾಯಣ ದೇವರು, ೫. ದುರ್ಗಪರಮೇಶ್ವರ ದೇವರು, ೬. ವೀರಭದ್ರಾ ದೇವರು. ಒಟ್ಟು ೨೪ ವೃತ್ತಿಗಳು.

ಈ ಪ್ರಕಾರ ಬ್ರಾಹ್ಮಣರು ಬಡಗಲ ದೇಶ ಬೆಟ್ಟಪುರದ ಸೀಮೆಯಿಂದ ಬಂದು ಸರ್ಪಯಾಗ ಕಾಲದಲ್ಲಿ ಇದ್ದುದ್ದರಿಂದ ಅವರಿಗೆ ಸರ್ವಸಾಮಾನ್ಯವಾಗಿ ೧೨ ಗ್ರಾಮವನ್ನು ಧಾರೆದತ್ತವಾಗಿ ಕೊಟ್ಟದ್ದರಿಂದ ಅದನ್ನು ಅನುಭವಿಸಿಕೊಂಡು ಬರುತ್ತಾ ಇದ್ದಾರೆ. ಇವರಿಗೆ ಗಳಾಡ ನಡಗಿರು ಇಂದು ಹೇಳಿಕೊಳ್ಳುತ್ತಾ ಇದ್ದಾರೆ. ಮುಂಧೆ ಅಕ್ಷರಗಳು ಇಲ್ಲ, ಈ ಋಷಿಗಳ ಆಶ್ರಮಕ್ಕೆ ಬಂದು ವಾಸವಾಗಿ ಇದ್ದಲ್ಲಿ ಕ್ಷಾಮವೂ ಹೋಗಿ ರಾಜ್ಯವು ಸುಭಿಕ್ಷವಾದ್ದರಿಂದ ಯಾವತ್ತು ಈ ಋಷಿಗಳು ತಮ್ಮ-ತಮ್ಮ ಮಕ್ಕಳಿಗೆ ತೆಗೆದುಕೊಂಡು ಇದ್ದಲ್ಲಿ ಇವರಿಗೆ ಬೇಕು ಎಂದು ಕೇಳಿದವರಿಗೆ ಈಗಲೂ ತಮ್ಮ ಋಷಿಗಳು ಯಾವನೂ ಕೊಡದೆ ನಿಮ್ಮ ಸ್ಥಳದಲ್ಲಿಯೇನು ಇದೆ. ಇಲ್ಲೇ ಸುಖದಿರುವುದು ಎಂಬುದಾಗಿ ಹೇಳಿದರಿಂದ ಇವರು ಬಹಳ ದಿವಸ ನೋಡಿ ಇವರಾದರೊ ಯಾವನೂ ಕೊಡುವುದಿಲ್ಲ. ಇವರಿಗೆ ಏನಾದರೂ ಒಂದು ಅಪರಾಧವನ್ನು ತೊಡಿಸಿ ತಮ್ಮ ಸ್ಥಳಕ್ಕೆ ಹೋಗಬೇಕೆಂದು ಯಾವತ್ತು ಋಷಿಗಳು ತಮ್ಮ ತಮ್ಮ ಮನಸ್ಸಲ್ಲಿ ಯೋಚನೆ ಮಾಡಿಕೊಂಡು ಈ ಗೌತಮ ಋಷಿಗಳು ಬ್ರಾಹ್ಮಣರು ಸ್ಥಳಕ್ಕೆ ಸ್ನಾನಕ್ಕೆ ಹೋಗುವಲ್ಲಿ ನವಧಾನ್ಯ ಸ್ನಾನವನ್ನು ಮಾಡಿಕೊಂಡು ತಿರುಗಿ ಬರುವಾಗ ಬಿತ್ತಿದಂತಾ ಬೆಳೆ ನಡುವೆ ಯಾವತ್ತು ಋಷಿಗಳು ಮಾಯದ ಗೋವು ನಿರ್ಮಾಣ ಮಾಡಿ ನಿಲ್ಲಿಸಿದಲ್ಲಿ ಆ ಸಮಯದಲ್ಲಿ ಗೌತಮರು ಬೆಳೆಯನ್ನು ತಿನ್ನುತ್ತಾ ಇದೆ ಎಂದು ಕಂಡುಸುಮ್ಮನೆ ಹೋಗಬಾರದು ಎಂದು ತಮ್ಮ.ಕೈಯಲ್ಲಿದ್ದ ಹುಲ್ಲಿನಲ್ಲಿ ಆ ಗೋವನ್ನು ದೂರದಿಂದ ಹೊಡೆದ ಕಾರಣ ಆ ಗೋವು ಅಲ್ಲಿ ಮೃತವಾಯಿತು. ತನ್ನ ಮಿತ್ಯ ಅಪವಾದ ಈ ಋಷಿಗಳಿಗೆ ಬಂದ ಕಾರಣ ಅವತ್ತು ಋಷಿಗಳು ತಮ್ಮ ಸ್ಥಳಕ್ಕೆ ಹೊರಟು ಹೋದರು.

ಆನಂತರ ಗೌತಮರು ಅಪವಾದ ಪರಿಹಾರಕೋಸ್ಕರ ತಪಸ್ಸು ಮಾಡಿ ಜಗದೀಶ್ವರನ ಪ್ರತ್ಯಕ್ಷವಾಗಿಸಿಕೊಂಡಿದ್ದ ತಮ್ಮ ಜಟೆಯಿಂದ ಗೋದಾವರಿ ನದಿ ಹುಟ್ಟಿಬಂದು ಆ ಗೌತಮನ ಮೇಲೆ ಹರಿಯುತ್ತಾ ಇದ್ದಾಳೆ. ಆ ಮೃತವಾದ ಗೋವು ಎಂದು ಹೋಗುತ್ತಾ ಇದೆ ಎಂದು ಹೇಳುತ್ತಾರೆ. ನವನೀತ(ಬೆಣ್ಣೆ)ಯನ್ನ ಕೊಡುತ್ತೇನೆ ಎಂದು ತೆಗೆದುಕೊಂಡು ಭೂಪ್ರದಕ್ಷಿಣೆ ಮಾಡಿ ಬನ್ನಿ ಎಂದು ಅಪ್ಪಣೆಕೊಟ್ಟದ್ದರಿಂದ ಕೊಟ್ಟಂತ ಬೆಣ್ಣೆಯನ್ನು ತೆಗೆದುಕೊಂಡು ಭೂಮಿಯನ್ನು ಪ್ರದಕ್ಷಿಣೆ ಮಾಡಿದಲ್ಲಿ ಈ ಸ್ಥಳದಲ್ಲಿ ಇದ್ದ ತೀರ್ಥವನ್ನು ಕಂಡು ಬೆಣ್ಣೆಯನ್ನು ಇಟ್ಟು

ಆಚರಣೆಯನ್ನು ಮುಗಿಸಿಕೊಂಡು ಪುನಃ ಬೆಣ್ಣೆಯನ್ನು ತೆಗೆದುಕೊಳ್ಳಬೇಕು ಅಂತ ಹೇಳಿದಲ್ಲಿ ಬೆಣ್ಣೆ ಇದ್ದ ಸ್ಥಳದಲ್ಲಿ ಲಿಂಗಾಕೃತಿಯಾಗಿರುವುದ್ದರಿಂದ ಈ ಲಿಂಗಕ್ಕೆ ಗೌತಮೇಶ್ವರ ಎಂದು ಹೆಸರು ಇಟ್ಟು, ಆ ಸ್ಥಳದಲ್ಲಿ ಸ್ಥಾಪನೆ ಮಾಡಿದ ಕಲಿಯುಗ ಬರುತ್ತಾ ಇದೆ ಆ ಕಲಿಯುದಲ್ಲಿ ಬೆಣ್ಣೆ ಲಿಂಗಾ ಸುಳ್ಳುಯೆಂಬುದಾಗಿ ಜನರೂ ಆಡಿಕೊಂಡಾರೆಂದು ಲಿಂಗವನ್ನು ಕಡೆ ಬೊಟ್ಟಿನಲ್ಲಿ ಎತ್ತಿದ್ದರಿಂದ ಎರಡು ಬೆರಳು ಲಿಂಗದ ಮೇಲೆ ನೆಟ್ಟು ಇದೆ. ಆ ನಂತರ ಗೌತಮೇಶ್ವರ ಲಿಂಗವೆಂದು ಹೆಸರು ಆಯಿತು. ತರುವಾಯ ಈ ಋಷಿಗಳು ಹೊರಟು ಮುಂದಕ್ಕೆ ತಮ್ಮ ಆಶ್ರಮಕ್ಕೆ ಹೋದರು. ಈ ಋಷಿಗಳು ಅಂದಂತೆ ಊರು ಕೂಡ ಹಾರವಾಯಿತು.[೪]

ಇಲ್ಲಿ ಋಷಿಗಳನ್ನು ಗೌತಮ ಊರಿಂದ ಓಡಿಸುವ ಪ್ರಯತ್ನ ಮಾಡಿ ಅವರು ಗೋವಿನ ರೂಪದಲ್ಲಿ ಈ ಸ್ಥಳದಲ್ಲಿ ಇದ್ದುದ್ದು, ಆ ಗೋವನ್ನ ದೂರದಿಂದ ದರ್ಭೆಯಲ್ಲಿ ಹೊಡೆದ ಕಾರಣ ಗೋವು ಸಾಯುತ್ತದೆ. ಆ ಗೋವು ಗೌತಮೇಶ್ವರ ಸ್ವಾಮಿ ಇರುವ ಸ್ಥಳವನ್ನ ಸೂಚಿಸುತ್ತದೆ.

ಅಡಿಟಿಪ್ಪಣಿಗಳು

೧. ಪುಟ್ಟಸ್ವಾಮಿ ಬಿ.ಎಸ್., **ಕರ್ನಲ್ ಮೆಕಿಂಝಿ ಮತ್ತು ಕೈಫಿಯತ್ತುಗಳು,** ಪು.೪೨

೨. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕ ಕೈಫಿಯತ್ತುಗಳು,** ಪು.೧೫೭-೧೬೦

೩. ಅದೇ, ಪು.೫೫೧-೫೫೩

೪. ಅದೇ, ಪು.೧೭೨-೧೭೪

ಅಧ್ಯಾಯ ಐದು

ಜನಪದ ಐತಿಹ್ಯಗಳು

ಅಧ್ಯಾಯ ಐದು

ಜನಪದ ಐತಿಹ್ಯಗಳು

ವ್ಯಕ್ತಿ ಮತ್ತು ಸ್ಥಳ ಪ್ರಸ್ತಾಪದಿಂದ ಐತಿಹ್ಯಗಳು ಹುಟ್ಟಿಕೊಳ್ಳುತ್ತವೆ. ಯಾವುದೇ ಐತಿಹ್ಯವನ್ನು ಗಮನಿಸಿದರೂ ಘಟನೆಯೊಂದು ನಡೆದೇ ಇರುತ್ತದೆ. ಇಂಥ ಸಂದರ್ಭಗಳ ಹಿನ್ನೆಲೆಯಲ್ಲಿಯೇ ವ್ಯಕ್ತಿ ಮತ್ತು ಸ್ಥಳ ಬಗ್ಗೆ ಜನಪದರಿಂದ ಬಾಯಿಂದ ಬಾಯಿಗೆ ಕತೆಗಳು ಅರಿದಾಡುತ್ತವೆ. ಸ್ಥಳಯೊಂದರ ವಿಶಿಷ್ಠತೆಯನ್ನು ಕುರಿತಂತೆ ನಿರೂಪಿತವಾಗುವ ಐತಿಹ್ಯಗಳಿಗೆ ಸ್ಥಳೈತಿಹ್ಯಗಳು ಅಥವಾ ಸ್ಥಳೀಯ ಐತಿಹ್ಯಗಳು ಎಂದು ಕರೆಯಲಾಗುತ್ತದೆ. ಜನರು ತಮ್ಮ ಸ್ವ-ಅನುಭವಗಳನ್ನೋ ಲೋಕಾನುಭವಗಳನ್ನೋ ಆಧರಿಸುತ್ತಾರೆ. ಇವು ಈ ಹಿಂದೆ ನಡೆದಿರಬಹುದಾದ ಚಾರಿತ್ರಿಕ ಘಟನೆಗಳನ್ನಾಗಲಿ ನಡೆದಿವೆಯೆಂದು ನಂಬುವ ಪೌರಾಣಿಕ ಅಂಶಗಳನ್ನಾಗಲಿ ನೆನಪಿಸಿಕೊಳ್ಳುತ್ತಾರೆ. ಪ್ರಾಕೃತಿಕ ವೈಚಿತ್ರ್ಯಗಳಿಗೆ ಸಂಬಂಧಿಸಿದಂತೆ ಸೀತೆಯ ಸೆರಗು, ಭೀಮನ ಬಂಡೆ, ರಾಮನು ಸ್ಥಾಪಿಸಿದ ಲಿಂಗ ಇತ್ಯಾದಿ ಐತಿಹ್ಯಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಇಲ್ಲೆಲ್ಲಾ ಪುರಾಣ ಘಟನೆಗಳ ಪ್ರಭಾವ ಕಂಡುಬರುತ್ತದೆ. ಪೌರಾಣಿಕ ವ್ಯಕ್ತಿಗಳ ಸಾಮರ್ಥ್ಯ, ಗುರಿ, ಸಾಧನೆ, ಕಟ್ಟುಪಾಡು, ಇಟ್ಟ ಹೆಜ್ಜೆ ಎಲ್ಲವೂ ಮುಖ್ಯವಾಗುತ್ತವೆ. ಇವು ಜನಪದರಿಗೆ ಮನಮಿಡಿಯುವ ಘಟನೆಗಳನ್ನು ವಿಶಿಷ್ಟವೆನಿಸುವ ಸ್ಥಳಕ್ಕೆ ಅನ್ವಯಿಸುತ್ತಾರೆ.

ಐತಿಹ್ಯವು ಜನಪದ ಕಥೆಗಿಂತ ಕಿರಿದಾದದ್ದು ನಿರ್ದಿಷ್ಠ ಸ್ಥಳಕ್ಕೆ ಸಂಬಂಧಿಸಿದ್ದೋ ವ್ಯಕ್ತಿ ಅಥವಾ ಘಟನೆಯನ್ನು ಕುರಿತದ್ದೋ ಆದ ಗದ್ಯಾತ್ಮಕ ನಿರೂಪಣೆಯಾಗಿರುತ್ತದೆ. ಇದರಲ್ಲಿ ವಿಶಿಷ್ಠ ಸ್ವರೂಪದ ಮನೋಜ್ಞವಾದ ಕಥಾನಕವಿರುತ್ತದೆ. ನಿರ್ದಿಷ್ಠ ಸ್ಥಳವೊಂದಕ್ಕೆ ಅಂಟಿಕೊಂಡದ್ದಾಗಿರ ಬಹುದು ಅಥವಾ ವ್ಯಕ್ತಿಗೆ ಇಲ್ಲವೇ ಘಟನೆಯೊಂದನ್ನು ಕುರಿತಾದಾಗಿರಬಹುದು. ಯಾವುದೇ ಆದರೂ ಸಂಪ್ರದಾಯಿಕ ಅಥವಾ ಪರಂಪರಾಗತವಾದ ಮೂಲ ವಸ್ತುವಿನಿಂದ ನಿರೂಪಣೆಯು ಸಂಬಂಧಿಸಿದ ಸಂಗತಿ ಸತ್ಯವೆಂದು ಸಾಬೀತು

ಮಾಡುವುದಾಗಿರುತ್ತದೆ. ಹಾಗೂ ನಂಜಿರುವಂಥ ನಿಜಾಂಶದ ಮೇಲೆ ಆಧರಿಸಲ್ಪಟ್ಟ ಕಥಾ ನಿರೂಪಣೆಯಿರುತ್ತದೆ. ವ್ಯಕ್ತಿಗಳಿಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಲಿಖಿತ ಚರಿತ್ರೆಯಲ್ಲಿ ದಾಖಲಾದ ವ್ಯಕ್ತಿಗಳೂ ಇರಬಹುದು. ಲಿಖಿತ ಚರಿತ್ರೆಯಲ್ಲಿ ದಾಖಲಾದ ವ್ಯಕ್ತಿಗಳ ಕುರಿತು ಸೃಷ್ಟಿಯಾದ ಜನಪದ ಐತಿಹ್ಯಗಳಲ್ಲಿ ವಾಸ್ತವಾಂಶದ ತಿರುಳಿನ ಸೂಕ್ಷ್ಮತೆಗಳನ್ನು ಗಮನಿಸಬಹುದು.

ಐತಿಹ್ಯವೆಂಬುದು ಮೌಖಿಕ ಪರಂಪರೆಯ ಒಂದು ಭಾಗ ಮಾತ್ರವಲ್ಲ, ಅದೊಂದು ಚರಿತ್ರೆ ಎನ್ನಬಹುದು. ಅದು ಸಂಸ್ಕೃತಿಯೂ ಹೌದು ಒಂದು ಸ್ಥಳದ ಬಗ್ಗೆ ಚರಿತ್ರೆ ಮತ್ತು ಸಂಸ್ಕೃತಿ ಇದೆ ಎಂದರೆ ಅಲ್ಲಿಯ ಜನ, ಸಂಸ್ಕೃತಿ ಕಾರಣ, ವ್ಯಕ್ತಿ, ಸ್ಥಳ, ಪ್ರಾಣಿ, ಗಿಡ, ಮರ, ಕಲ್ಲು, ದಿನ್ನೆ, ಪರ್ವತ ಕೋಟೆ ಯಾವುದು ಬೇಕಾದರೂ ಐತಿಹ್ಯವಾಗಬಹುದು. ಅವುಗಳು ಪುರಾಣ, ದಂತಕಥೆ, ಐತಿಹ್ಯಗಳನ್ನು ಹೊಂದಿರಬೇಕು. ಜನರ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಅವುಗಳಿಗೆ ಬಣ್ಣಕೊಟ್ಟು ಕತೆಯ ರೂಪದಲ್ಲಿ ಎಣೆಯುತ್ತಾ ಹೋಗುತ್ತಾರೆ.

ಜನಪದ ಐತಿಹ್ಯಗಳಲ್ಲಿ ಪುರಾಣ ಕಥೆಗಳು ಇವೆ. ದಂತಕಥೆಗಳು ಕಂಡುಬರುತ್ತವೆ. ಪುರಾಣಗಳು ದೈವಿಕ ಆವರಣದಲ್ಲಿ ದೇವತೆಗಳಲ್ಲಿ ಧರ್ಮಗಳಲ್ಲಿರುವ ನಂಬಿಕೆಗಳ ಹಿನ್ನೆಲೆಯಲ್ಲಿ ರಚಿತವಾಗಿರುತ್ತವೆ. ಇಂಥ ಆಶಯಗಳನ್ನು ಜೈವಿಕ ನೆಲೆಯ ಮೂಲಕ ಪುನರ್‌ಸ್ಥಾಪಿಸುವ ಪ್ರಯತ್ನವನ್ನು ಪೌರಾಣಿಕ ಐತಿಹ್ಯಗಳಲ್ಲಿ ಕಾಣಬಹುದು. ಸೃಷ್ಟಿಕಾರ್ಯ ಭೂಮಿ ರೂಪಗೊಂಡ ರೀತಿ, ಸಾಂಸ್ಕೃತಿಕ ವೀರರು ಇತ್ಯಾದಿ ವಿಷಯಗಳನ್ನು ಪುರಾಣಗಳು ಒಳಗೊಂಡಿರುತ್ತವೆ. ಇವು ಏಕಕಾಲಕ್ಕೆ ಐತಿಹ್ಯಗಳ ವಿಷಯಗಳಾಗಿರುತ್ತವೆ. ಜಗತ್ತಿನ ಸೃಷ್ಟಿ ಕುರಿತಂತೆ ಪುರಾಣದ ಆಯಾಮಗಳನ್ನು ಪಡೆದುಕಂಡ ಐತಿಹ್ಯಗಳ ಮೇಲೆ ಆಯಾ ಪ್ರಾದೇಶಿಕ ಧಾರ್ಮಿಕ ಪ್ರಭಾವ ದಟ್ಟವಾಗಿರುತ್ತದೆ. ಇಂದು ನಿರ್ದಿಷ್ಠ ಸ್ಥಳದ, ವಸ್ತುವಿನ ಇಲ್ಲವೇ ವ್ಯಕ್ತಿಯ ಅಥವಾ ಘಟನೆಯ ವೈಶಿಷ್ಠವನ್ನು ವಿವರಿಸುವುದೇ ಐತಿಹ್ಯದ ಉದ್ದೇಶವಾಗಿರುವುದರಿಂದ ವಿವರಣಾತ್ಮಕ ಕಥೆಯೊಂದಿಗೆ ಹೋಲಿಸಬಹುದು. ಮೇಲ್ನೋಟಕ್ಕೆ ಐತಿಹ್ಯ ಮತ್ತು ಕಥೆ ಒಂದೇ ಎಂಬಂತೆ ಕಂಡರೂ ಕಥೆಗಳಲ್ಲಿನ ವ್ಯಕ್ತಿ, ಸ್ಥಳ ಹಾಗೂ ವಸ್ತುಗಳಿಗೆ ನಿರ್ದಿಷ್ಟತೆ ಅಥವಾ ನಿಶ್ಚಿತತೆ ಇರುವುದಿಲ್ಲ. ಐತಿಹ್ಯಗಳಲ್ಲಿ ನಿರ್ದಿಷ್ಟತೆಯೇ ಮುಖ್ಯ ಗುಣ. ಐತಿಹ್ಯಗಳಲ್ಲಿನ ಕಥಾನಕವು ಸೊಗಸಾಗಿರಬಹುದು. ಆದರೆ ವಿವರಣೆ ಸಂಕ್ಷಿಪ್ತವಿರುತ್ತದೆ. ಆದರೆ ಕಥೆಗಳಲ್ಲಿ ಕಾರ್ಯಕರಣ ಸಂಬಂಧವನ್ನೂ ಅರ್ಥವನ್ನೂ ಒಳಗೊಂಡಂತೆ ವಿವರಣೆ ಹೆಚ್ಚುತ್ತಾ ಹೋಗುತ್ತದೆ.[೧]

ಐತಿಹ್ಯಗಳನ್ನು ದಂತಕಥೆಗಳೆನ್ನುತ್ತಾರೆ. ನಿರ್ದಿಷ್ಟ ಘಟನೆಗೆ ಸಂಬಂಧಿಸಿದ ಆಧಾರರಹಿತ ನಿರೂಪಣೆಯನ್ನು ದಂತಕಥೆಗಳೆನ್ನುತ್ತಾರೆ. ಇದರ ಅರ್ಥ ಪಲ್ಲಟಗಳು ಹೀಗಿವೆ. ದಂತಕಥೆ ಬಾಯಿಂದ ಬಾಯಿಗೆ ಹರಿದು ಬೆಳೆದು ಬಂದ ಕಥೆ ತಲೆಮಾರಿನಿಂದ ತಲೆಮಾರಿಗೆ ಬೆಳೆಯಲ್ಪಟ್ಟ

ಸಂಸ್ಕೃತದ 'ಉದಂತ' ಎಂದರೆ ಜಾಣ್ಮೆ ಒಳ್ಳೆಯದು ಎಂಬ ಅರ್ಥಗಳಿವೆ. ಅಲ್ಲದೆ ಸಮಾಚಾರ ಸುದ್ದಿ ಎಂಬ ಅರ್ಥಗಳೂ ಇವೆ. ಸಾಹಿತ್ಯದಲ್ಲಿ ಉದಂತವಾರ್ತಾ ಎಂಬ ಅರ್ಥಪ್ರಯೋಗ ವಾದಂತಿದೆ. ಜನ್ನನ ಅನಂತನಾಥ ಪುರಾಣದ ೧೨, ೧೨(ಪ್ರಾಣನಾಥಾ ಮರಣೋದಂತಾಭ್ರವಹ್ನಿ ಸ್ಫುಟಿತ ಹೃದಯನ್") ಎಂಬ ಉಲ್ಲೇಖ ಪ್ರಾಕೃತದಲ್ಲಿಯು ದಂತಕಥೆ ಎಂಬುದಕ್ಕ ಸಮಾಚಾರ, ವೃತ್ತಾಂತ ಎಂಬ ಅರ್ಥಗಳಿವೆ. ಉದಂತ ಎಂಬುದನ್ನು ಜನಪದರಲ್ಲಿ ಪ್ರಚಲಿತವಾದದ್ದು ಎಂದು ಅರ್ಥೈಸಿದರೆ, ಉದಂತ ಕಥಾ ಎಂಬುದೇ ದಂತಕಥೆಯಾಗಿ ಬಳಕೆಗೆ ಬಂದಂತೆ ತೋರುತ್ತದೆ. ಹೀಗೆ ದಂತಕಥಾ ಎಂಬುದು ಜನಶ್ರುತಿ, ಕಿಂವದಂತಿ, ಕಲ್ಪಿತ ಕಥೆ, ಬಾಯಿಂದ ಬಾಯಿಗೆ ಹರಿದು ಬಂದ ಕಥೆ ಎಂಬ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಈ ದಂತ ಕಥೆಯೆಂಬುದು ಜನರಿಂದ ಕಲ್ಪಿತವಾಗಿ ಬಾಯಿಂದ ಬಾಯಿಗೆ ಹರಿದುಬಂದ ಕೆಲವು ಸಾರಿ ಗ್ರಂಥಸ್ಥವಾಗಿರ ಬಹುದಾದ ಕತೆಯನ್ನು ಸೂಚಿಸುತ್ತದೆ. ದಂತಕಥೆಗಳಲ್ಲಿ ಕೆಲವು ಕಲ್ಪಿತಗಳಾಗಿರಬಹುದು ಅಥವಾ ಆ ವೇಷವನ್ನು ತೊಟ್ಟ ಇತಿಹಾಸವಾಗಿರಬಹುದು. ಒಂದು ವಿಸ್ಮಯಾತ್ಮಕ ಸಂಗತಿಯ ವಿವರಣಾ ರೂಪವಾಗಿ ಒಂದು ಕಥೆ ಹುಟ್ಟಬಹುದು. ಭೀಮನ ಕಲ್ಲು, ಸೀತೆಬಂಡೆ, ಅಕ್ಕ–ತಂಗಿಯರ ಕಲ್ಲು[೨] ಇತ್ಯಾದಿ.

ಇಂತಹ ಐತಿಹ್ಯಗಳು ದಾವಣಗೆರೆ ಜಿಲ್ಲೆಯ ಜನಪದರಲ್ಲಿ ಹೇಗೆ ಹುಟ್ಟಿವೆ ಎಂದು ಆರು ತಾಲೂಕುಗಳಾದ ದಾವಣಗೆರೆ, ಚನ್ನಗಿರಿ, ಹರಪನಹಳ್ಳಿ, ಹರಿಹರ, ಹೊನ್ನಾಳಿ, ಜಗಳೂರುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಅವುಗಳಲ್ಲಿ ಪುರಾಣ, ದಂತಕಥೆಗಳು, ಸ್ಥಳಗಳ ಬಗ್ಗೆ ವ್ಯಕ್ತಿನಾಮ ಗಳು ಇವೆಯೇ ಎಂದು ತಿಳಿಸಲಾಗಿದೆ.

೫.೧. ಚನ್ನಗಿರಿ ತಾಲೂಕಿಗೆ ಸಂಬಂಧಿಸಿದಂತೆ ಜನಪದ ಐತಿಹ್ಯಗಳು

ಸೂಳೆಕೆರೆ

ಚನ್ನಗಿರಿ ತಾಲೂಕಿನ ಅಸಂಖ್ಯಾತ ಜನರ ಜೀವನಾಡಿ, ಮನಮೋಹಕ ಸುಂದರ ತಾಣವಾಗಿರುವ ದಕ್ಷಿಣ ಭಾರತದ ಎರಡನೇ ಅತಿದೊಡ್ಡ ಕೆರೆ, ಕರ್ನಾಟಕದ ಬೃಹತ್‌ಕೆರೆ 'ಸೂಳೆಕೆರೆ' ಈ ಸೂಳೆಕೆರೆ ಇತಿಹಾಸದ ಬಗ್ಗೆ ಖಚಿತವಾದ ಐತಿಹಾಸಿಕ ದಾಖಲೆಗಳಿಗಿಂತ ಪುರಾಣಗಳು, ದಂತಕಥೆಗಳು, ಕಂತೆಯೇ ಹೆಚ್ಚು ಪ್ರಚತದಲ್ಲಿದೆ. ಹದಿನೇಳನೇ ಶತಮಾನದಲ್ಲಿಯೇ ಸೂಳೆಕೆರೆ ಸಾಂಗತ್ಯ ಮತ್ತು ಸೂಳಕೆರೆ ಸಿದ್ದೇಶ್ವರ ಚರಿತ್ರೆ, ಸಿದ್ದೇಶ್ವರ ಅಷ್ಟಕ ಎಂಬ ಕೃತಿಗಳು ಬರೆಯಲ್ಪಟ್ಟಿದ್ದು, ಜನರಲ್ ಮೆಕೆಂಝಿ ಸಂಗ್ರಹಿಸಿರುವ ಸೂಳೆಕೆರೆ ಕೈಫಿಯತ್ತಿನಿಂದಲೂ ಹಲವಾರು ವಿಚಾರಗಳು ಈ ಕೆರೆ ಬಗ್ಗೆ ನಮಗೆ ತಿಳಿದುಬರುತ್ತದೆ.

ಈಗ ಸೂಳೆಕೆರೆ ಇರುವ ಸ್ಥಳದಲ್ಲಿ ಸ್ವರ್ಗಾವತಿ ಎಂಬ ಪಟ್ಟಣವಿತ್ತು. ೧೧-೧೨ನೇ ಶತಮಾನದಲ್ಲಿ ರಾಜ ವಿಕ್ರಮರಾಯ ಎಂಬುವನು ಆಡಳಿತ ನಡೆಸುತ್ತಿದ್ದನು. ಅವನ ರಾಣಿ ನೂತನದೇವಿ. ಅವರಿಗೆ ಬಹಳ ದಿನಗಳಾದರೂ ಮಕ್ಕಳಾಗಲಿಲ್ಲ. ತನ್ನ ಆರಾಧ್ಯ ದೈವ ಸಿದ್ದೇಶ್ವರನನ್ನು ಕುರಿತು ತಪಸ್ಸು ಮಾಡಿದಾಗ ಅವರಿಗೆ ಒಂದು ಹೆಣ್ಣು ಮಗು ಕರುಣಿಸಿದನೆಂದು ಅವಳಿಗೆ ಶಾಂತವ್ವೆ ಎಂದು ನಾಮಕರಣ ಮಾಡಲಾಯಿತೆಂದೂ ಹೇಳಲಾಗಿದೆ. ಆಕೆಯನ್ನು ಶಾಂತಲಾ ಪರಮೇಶ್ವರ ಎಂದೂ ಕರೆಯುತ್ತಾರೆ. ಪ್ರೌಢ ವಯಸ್ಸಿಗೆ ಅವಳು ಬಂದಾಗ ತಂದೆ ಅವಳಿಗೆ ಮದುವೆ ಮಾಡಲು ಬಯಸಿದಾಗ ರಾಜ್ಯದಲ್ಲಿರುವ ರಾಜರನೆಲ್ಲಾ ನೋಡುತ್ತಾನೆ. ಈ ಶಾಂತವ್ವೆ ತನಗೆ ಗಂಡನಾದರೆ ಶಿವ ಸ್ವರೂಪಿಯಾದ ಸಿದ್ದೇಶ್ವರನೇ ಹೊರತು ಬೇರೆ ಯಾರೊಂದಿಗೂ ಮದುವೆ ಆಗುವುದಿಲ್ಲವೆಂದು ಹಠ ಹಿಡಿದು ರಾತ್ರಿ ಅಲ್ಲಿಯೇ ಇವರು ಸಿದ್ದೇಶ್ವರನ ಮಂದಿರದಲ್ಲಿ ಇರುತ್ತಿರಲಾಗಿ ಅವಳ ಭಕ್ತಿಗೆ ಪರಶಿವನು ಮೆಚ್ಚಿ, ಮನುಷ್ಯ ಜಾತಿಯಲ್ಲಿ ಬಂದು, ಆಕೆಯ ಸಂಗಡ ಹಗಲು ರಾತ್ರಿ ಕಾಲಕಳೆಯುತ್ತಿದ್ದನೆಂದೂ, ಹೋಗುವಾಗ ಬೊಂತೆ ಕೊಡವಿ ಹೋಗುತ್ತಿದ್ದ. ಆ ವರಹಗಳು ನಿತ್ಯ ಹಾಸಿಗೆಯಲ್ಲಿ ಬೀಳುತ್ತಿದ್ದವೆಂದೂ ಈ ವರಹಗಳನ್ನೆಲ್ಲ ಆಕೆ ಕೂಡಿ ಹಾಕಿ ಸ್ತ್ರೀ ಜನ್ಮ ಸ್ಥಿರವಲ್ಲ, ಮುಂದೆ ತನ್ನ ಹೆಸರುಗಳಿಯಬೇಕು ಎಂದು ಈ ಕೆರೆ ಕಟ್ಟಿಸಿದಳೆಂದು ಹೇಳಲಾಗುತ್ತದೆ. ಈ ಶಾಂತವ್ವೆ ಅಕ್ರಮವಾಗಿ ದೇವಪುರುಷನೊಂದಿಗೆ ಸಂಬಂಧ ಬೆಳೆಸಿ ಹಣಗಳಿಸಿದ್ದಕ್ಕಾಗಿ ಆಕೆಯ ತಂದೆಯೇ ಆಕೆಯನ್ನು 'ಸೂಳೆ' ಎಂದು ಕರೆದನೆಂದು ಆಕೆ ಕಟ್ಟಿಸಿದ ಕೆರೆಯೇ ಸೂಳೆಕೆರೆ ಎಂದಾಯಿತೆಂದೂ ತಿಳಿಯುತ್ತದೆ.[೩]

ಈ ರೀತಿ ಸಾಮಾನ್ಯ ಮನುಷ್ಯರ ಜೊತೆ ದೇವರು ಬಂದು ಅಕ್ರಮ ಸಂಬಂಧ ಹೊಂದಿರುತ್ತಾನೆಯೇ, ಆಕೆಯನ್ನು ಸೂಳೆ ಎಂದು ಪರಿಗಣಿಸಲಾಗುತ್ತದೆಯೇ, ಅದೇನೇ ಆದರೂ ಕೂಡಾ ಆಕೆಯ ಸಾಧನೆ ಮೆಚ್ಚಬೇಕಾಗುತ್ತದೆ. ಸೂಳೆಕೆರೆ ಎಂಬ ಹೆಸರು ಅಶ್ಲೀಲವಾಗಿದೆ ಎಂದು ಕೆಲವರ ಅಪಸ್ವರಗಳಿಂದ ಅದು ಬೇಡ 'ಶಾಂತಿಸಾಗರ' ಎಂದು ೮೦ರ ದಶಕದಲ್ಲಿ ನಾಮಕರಣ ಮಾಡಲಾಯಿತು. ಆದರೆ ಒಬ್ಬ ಸೂಳೆಯನ್ನು ಆಕೆಯ ಸ್ಥಾನದಿಂದ ಪರಿಗಣಿಸಿದೆ ಲೋಕಕಲ್ಯಾಣಕ್ಕಾಗಿ ಆಕೆ ಮಾಡಿದ ತ್ಯಾಗವನ್ನು ಸಾರುವ ಮೂಲ ಹೆಸರು ಐತಿಹಾಸಿಕವಾಗಿ ಉಳಿದಿರುವಾಗ ಅದನ್ನ ಬದಲಾಯಿಸುವುದು ತರವಲ್ಲ ಎಂದು ಖ್ಯಾತ ಸಂಶೋಧಕ ಡಾ.ಎಂ. ಚಿದಾನಂದಮೂರ್ತಿಯವರು ಮತ್ತೆ ಇದಕ್ಕೆ ಸೂಳೆಕೆರೆ ಎಂದು ಮರುನಾಮಕರಣ ಮಾಡಲಾಗಿತು. ಈ ಸೂಳೆಕೆರೆ ಇತಿಹಾಸದ ಬಗ್ಗೆ ನೂಲವತ್ತಕ್ಕೂ ಹೆಚ್ಚಿನ ದಂತಕಥೆಗಳಿದ್ದರೂ ನಮಗೆ ಅಧಿಕೃತ ದಾಖಲೆಗಳು ಹೆಚ್ಚಾಗಿ ಲಭ್ಯವಾಗಿಲ್ಲ. ಮೆಕೆಂಝಿಯವರ ಕೈಫಿಯತ್ತು ಮತ್ತೆ ಕೆಲವು ಲೇಖನಗಳಲ್ಲಿ ಈ ಸೂಳೆಕೆರೆ ಬಗ್ಗೆ ಮಾಹಿತಿ ನೀಡಲಾಗಿದ್ದು, ಈ ಕೆರೆಯು ಜನರ ಜೀವನಾಡಿ ಆಗಿದೆ. ಏನೇ

ಇರಲಿ ಓರ್ವ ಸೂಳೆ ನಿರ್ಮಿಸಿದ ಈ ಬೃಹತ್ ಕೆರೆ ರೈತರಿಗೆ, ಮೀನುಗಾರರಿಗೆ, ಪ್ರಾಣಿಪಕ್ಷಿ ಸಂಕುಲಕ್ಕೆ 'ಜೀವಧಾರೆ'ಯಾಗಿದೆ.

ದೇವರಹಳ್ಳಿ

ಚನ್ನಗಿರಿ ತಾಲೂಕು ಕೇಂದ್ರದಿಂದ ಈಶಾನ್ಯಕ್ಕೆ ೧೩ ಕಿ.ಮೀ ದೂರ ಹರಿದ್ರಾನದಿ ದಂಡೆ ಸಮೀಪ ಇರುವುದೇ ಉಡುಗಿರಿಕ್ಷೇತ್ರ ದೇವರಹಳ್ಳಿ ತಾಲೂಕಿನ ಅತಿದೊಡ್ಡ ಧಾರ್ಮಿಕ ಕ್ಷೇತ್ರವಾದ ಇದು ಪುರಾಣ ಪ್ರಸಿದ್ಧ ಕ್ಷೇತ್ರವಾಗಿದ್ದು ಅದರಂತೆ ಹಿಂದೆ ಉಲ್ಕಾಮುಖನೆಂಬ ರಾಕ್ಷಸ ಇಲ್ಲಿ ವಾಸವಾಗಿದ್ದು ದೇವರ ಭಕ್ತರನ್ನು ಪೀಡಿಸುತ್ತಿದ್ದನೆಂದು ಈ ಭಕ್ತರ ಪ್ರಾರ್ಥನೆ ಮೇಲೆ ಅವನನ್ನು ದೇವರು ಹರಿ–ಹರ ರೂಪದಿಂದ ಕೊಂಡು ಭಕ್ತರನ್ನು ರಕ್ಷಿಸಿದನೆಂದೂ ಹೇಳಲಾಗುತ್ತದೆ. ಉಡುರೂಪದಲ್ಲಿ ಮೊದಲು ಇಲ್ಲಿನ ಆದಿದೈವ ರಂಗನಾಥ ಸ್ವಾಮಿ ಇವನು ಚೈತ್ರ ಶುದ್ಧ ಹುಣ್ಣಿಮೆ ಕಾಣಿಸಿಕೊಂಡಿದ್ದು, ಅಂದು ಬಹು ವೈಭವದಿಂದ ಬ್ರಹ್ಮ ರಥೋತ್ಸವ ಜರುಗುತ್ತದೆ. ಈ ಸಾರಿ ಇದೇ ಮೂರ್ತ ೩೧ ರಂದು ಇಲ್ಲಿನ ರಥೋತ್ಸವ ನಡೆಯಿತು. ಇದರ ಅಂಗವಾಗಿ ರಾಮ ನವಮಿಯಿಂದ ಒಂದು ವಾರ ಕಾಲ ವಿಶೇಷ ಪೂಜೆ, ಭಜನೆ, ಸಂಗೀತ ಉತ್ಸವ ಕಾರ್ಯಕ್ರಮ ಜರುಗಿದವು. ಇದು ವಿಜಯನಗರ ಅರಸರ ಕಾಲದಲ್ಲಿ ಕಟ್ಟಲ್ಪಟ್ಟಿದ್ದು ನಂತರ ಸಂತೇಬೆನ್ನೂರು ಪಾಳೇಗಾರರು, ಕೆಳದಿನಾಯಕರು ಈ ದೇವಸ್ಥಾನ ಜೀರ್ಣೋದ್ಧಾರ ಮಾಡಿರುವುದಾಗಿ ದಾಖಲೆಗಳು ತಿಳಿಸುತ್ತವೆ. ಗಿರಿಯಮ್ಮ ಎಂಬಾಕೆ ನವರಂಗ ಮಂಟಪ ಕಟ್ಟಿಸಿದ್ದಾಗಿ ಇಲ್ಲಿನ ಒಂದು ಶಾಸನದಿಂದ ತಿಳಿದುಬರುತ್ತದೆ.

ಜನರಲ್ ಮೆಕೆಂಝಿ ಕೈಫಿಯತ್ತಿನಲ್ಲಿ ವಿಜಯನಗರದ ಅರಸು ಹರಿಹರ ಮಹಾದೇವ ಬೇಟೆಗಾಗಿ ಈ ಪ್ರಾಂತ್ಯಕ್ಕೆ ಒಮ್ಮೆ ಬಂದಾಗ ಆತನ ಸೈನಿಕರಿಗೆ ಒಮ್ಮೆ ದೊಡ್ಡ ಉಡವೊಂದು ಕಾಣಿಸಿತಂತೆ ಅದನ್ನು ಹಿಡಿಯಲು ಬೆನ್ನಟ್ಟಿದ್ದಾಗ ಅದು ಈಗಿನ ಮರಡಿ ಗ್ರಾಮದ ಬಳಿ ಸುಗಂಧದ ವಾಸನೆ ಹೊರ ಚೆಲ್ಲಿದ್ದರಿಂದ ಅದಕ್ಕೆ ಧೂಪ ಮರಡಿಯೆಂದಾಯಿತೆಂದೂ, ನಂತರ ಬೆಳ್ಳಿಗನೂಡು ಬಳಿ ಬೆಳ್ಳಿಯಂತೆಯೂ, ಚೆನ್ನಾಪುರ ಬಳಿ ಚಿನ್ನದಂತೆಯೂ, ಜಕಲಿ ಬಳಿ ಚಕ್ಕುಲಿ ಆಕಾರವಾಗಿಯೂ, ಹಿರೇ ಉಡಬಳಿ ದೊಡ್ಡ ಉಡವಾಗಿಯೂ, ಚಿಕ್ಕ ಉಡಬಳಿ ಚಿಕ್ಕದಾಗಿಯೂ, ಹಿರೇ ಉಡಬಳಿ ದೊಡ್ಡ ಉಡವಾಗಿಯೂ, ಚಿಕ್ಕ ಉಡ ಬಳಿಚಿಕ್ಕದಾಗಿಯೂ ಕಾಣಿಸಿಕೊಂಡು ಕಾಕನೂರು ಬಳಿ ಕಾಗೆ ಕೂಗಿದ ಆಗೆ, ಕೊಂಡದಹಳ್ಳಿ ಬಳಿ ಕೆಂಡಾಕಾರವಾಗಿಯೂ, ರಾಮಗೊಂಡನಹಳ್ಳಿ ಬಳಿ 'ರಾಮ ರಾಮ' ಎಂದು ಹೇಳಿತೆಂದೂ ನೀತಿಗೆರೆ ಬಳಿ ನೀತಿ ಹೇಳಿ ನನ್ನ ಹಿಂದೆ ಬರಬೇಡಿರೆಂದು ಹೇಳಿ ಕಡೆಗೆ ನುಗ್ಗಿಹಳ್ಳಿ ಬಳಿ ನುಗ್ಗಿಕೊಂಡು ಈಗಿನ ದೇವರಹಳ್ಳಿ ಗುಡ್ಡದ ಮೇಲಿನ ಒಂದು ಹುತ್ತದಲ್ಲಿ ಅದು ಹೋಯಿತಂತೆ,

ಅಗಲೂ ಸೈನಿಕರು ಬಿಡದೆ ಆ ಹುತ್ತವನ್ನು ಅಗೆದಾಗ ಉಡರೂಪಮಾಯವಾಗಿ ಲಿಂಗರೂಪವಾಗಿ ಪರಮಾತ್ಮ ಕಾಣಿಸಿಕೊಂಡನಂತೆ ಹೀಗೆ ಉಡರೂಪವಾಗಿ ಕಾಣಿಸಿದ್ದರಿಂದ ಉಡುಗಿರಿ ರಂಗನಾಥ ಸ್ವಾಮಿ ಎಂದು ಅಂದಿನಿಂದ ಪ್ರಸಿದ್ಧಿಗೆ ಬಂದಿದೆ ಸ್ವಾಮಿ ಉಡರೂಪವಾಗಿದ್ದರಿಂದ ಇಲ್ಲಿಯ ಬೆಟ್ಟದ ಮೇಲೆ ಈಗಲೂ ಅನೇಕ ದೊಡ್ಡ ಉಡ(ದೊಡ್ಡದಲ್ಲಿ) ಇದ್ದು ಇಲ್ಲಿಯ ಜನ ಅವುಗಳನ್ನು ಭೇಟೆಯಾಡುವುದಿಲ್ಲ.[೪] ಉಡಯಾನ ಯಾವ ರೀತಿ ಕಾಣಿಸಿ ಕೊಂಡಿತೋ ಆಯಾ ಗ್ರಾಮಗಳಿಗೆ ಇಂದೂ ಅದೇ ಹೆಸರು ಇದ್ದು ಅಲ್ಲಿನ ಗ್ರಾಮಸ್ಥರೆಲ್ಲಾ ಈ ದೇವರ ಭಕ್ತರಾಗಿದ್ದಾರೆ.

ಮತ್ತೊಂದು ರೀತಿಯಲ್ಲಿ ಹರಿಹರಿಬ್ಬರೂ ಭೂಸಂಚಾರವನ್ನು ಮಾಡಲಿಚ್ಛಿಸಿ ತಮ್ಮನ್ನು ಯಾರೂ ತಿಳಿಯಕೂಡದೆಂಬ ಉದ್ದೇಶದಿಂದ ಉಡದ(ಕಾಡುಹಲ್ಲಿ) ರೂಪವನ್ನು ತಾಳಿದರು. ದುಷ್ಟನಿಗ್ರಹ ಶಿಷ್ಠ ಪರಿಪಾಲನೆಯ ಉದ್ದೇಶದಿಂದ ಭೂಮಿಯ ಮೇಲೆ ಸಂಚರಿಸುತ್ತಿದ್ದಾಗ ವಿಸ್ಮಯಕಾರಿ ಘಟನೆಯೊಂದು ನಡೆಯಿತು, ವಿಜಯನಗರದ ಅರಸು ಇಮ್ಮಡಿ ಹರಿಹರ ದೇವನ ಆಳ್ವಿಕೆಯ ಕಾಲದಲ್ಲಿ (೧೩೭೭–೧೪೦೪) ಬೇಟೆಯಾಡುತ್ತಾ ಈ ಭಾಗದಲ್ಲಿ ಬಂದಿದ್ದಾಗ ಅವನ ಸಂಗಡ ಬಂದಿದ್ದ ಬೇಟೆಗಾರರ ತಂಡವು ಚನ್ನಗಿರಿ ತಾಲೂಕಿನ ತೋಪೆನಹಳ್ಳಿಯಿಂದ ಅನತಿ ದೂರದಲ್ಲಿರುವ 'ಧೂಪದ ಮರಡಿ' ಎಂಬ ಗುಡ್ಡವನ್ನು ಪ್ರವೇಶಿಸಿತು. ತಕ್ಷಣವೇ ಘಮಘಮಿಸುವ ಸುವಾಸನೆಯನ್ನು ಬೇಟೆಗಾರರು ಅಘ್ರಾಣಿಸತೊಡಗಿದರು. ಈ ಸುವಾಸನೆಗೆ ಕಾರಣವೇನೆಂದು ಯೋಚಿಸುತ್ತಿರುವಾಗ, ಬಲದಿಂದ ಒಂದು ಉಡವು ಹೊರಟಿತು, ಕೂಡಲೇ ಸುವಾಸನೆಯ ಪ್ರಮಾಣವು ಹೆಚ್ಚಾಯಿತು. ಇದರಿಂದ ಆಶ್ಚರ್ಯಗೊಂಡ ಬೇಟೆಗಾರರು ಸುವಾಸನೆಗೆ ಕಾರಣವಾದ ಆ ಉಡವನ್ನು ಹಿಡಿಯಲು ಮುಂದಾದರು.

ಆದರೆ ದೈವ ಸಂಭೂತವಾದ ಉಡವು ಅವರಿಗೆ ಸಿಕ್ಕದೆ ಬೇಟೆಗಾರರನ್ನು ಹಿಂಬಾಲಿಸಿ ಬರುವಂತೆ ಮಾಡಿ ಈಗ 'ಬೆಳ್ಳಿಗನೂಡು' ಎಂದು ಸ್ಥಳದಲ್ಲಿ ಆ ಬೇಟೆಗಾರರಿಗೆ ಬೆಳ್ಳಿಯ ಉಡವಾಗಿ ಕಾಣಿಸಿಕೊಂಡು ಈಗ 'ಚೆನ್ನಾಪುರ' ಎಂದು ಕರೆಯಲ್ಪಡುವಲ್ಲಿ ಚಿನ್ನದ ಉಡವಾಗಿ ಕಾಣಿಸಿಕೊಂಡಾಗ ಶಕ್ತಿ ಉದ್ಭವವಾಯಿತು. ಆ ಶಕ್ತಿಯೇ ಕರಿಯಮ್ಮ ಎಂಬ ದೇವತೆ (ಈಗಲೂ ಈ ದೇವಿ ಗುಡಿಯು ಇದೆ) ಈ ವಿಚಿತ್ರ ರೂಪದ ಪ್ರಾಣಿಯನ್ನು ಹೇಗಾದರೂ ಹಿಡಿಯಲೇ ಬೇಕೆಂದು ಹೊರಟ ಬೇಟೆಗಾರರಿಗೆ ಈಗ 'ಜಕ್ಕಲಿ' ಎಂದು ಕರೆಯಲ್ಪಡುವಲ್ಲಿ ಆ ಉಡವು ಚಕ್ಕುಲಿ ಆಕಾರದಲ್ಲಿ ಕಾಣಿಸಿತು. ಮುಂದೆ ಅವರನ್ನು ವಂಚಿಸುತ್ತಾ ನಡೆದು ದೊಡ್ಡ ಗಾತ್ರದ ಉಡವಾಗಿ ಕಾಣಿಸಿತು. ಆ ಸ್ಥಳದಲ್ಲಿ ಈಗ 'ಹಿರೇ ಉಡ' ಎಂಬ ಗ್ರಾಮವಿದೆ.

ಭಗವಂತನ ಅವತಾರಕ್ಕೆ ಬೇಟೆಗಾರರು ನೆಪ ಮಾತ್ರವೋ ಎಂಬಂತೆ ತಮ್ಮನ್ನು ಅಲೆದಾಡಿಸಿದ ಈ ಪ್ರಾಣಿಯನ್ನು ಹಿಡಿಯಲು ಹಟತೊಟ್ಟು ಹೊರಟ ಬೇಟೆಗಾರರೊಡನೆ 'ಕಗತೂರು' ಬಳಿ ಕಗ(ಮೋಸದ ಯುದ್ಧ ಮಾಡಿತಂತೆ) ಜಿಗಿಯುತ್ತಾ, ಕುಪ್ಪಳಿಸುತ್ತಾ ಮುಂದೆ ಸಾಗಿ ರಾಮಗೊಂಡನಹಳ್ಳಿ ಬಳಿ 'ರಾಮ ರಾಮ' ಎಂದು ಧ್ಯಾನ ಮಾಡಿ ಮುಂದೆ ಸಾಗಿ 'ಚಿಕ್ಕುಡ' ಬಳಿ ಚಿಕ್ಕ ಉಡವಾಗಿ ಕಾಣಿಸಿಕೊಂಡು 'ಕೊಂಡದಹಳ್ಳಿ'ಯ ಬಳಿ ಕುಂಡಲಾಕಾರದಲ್ಲಿ ಸುತ್ತಿಕೊಂಡು ಗೋಚರಿಸಿ ಪುನಃ ಅಲ್ಲಿಂದ ಜಿಗಿದು ಬೇಟೆಗಾರರಿಗೆ ಸಿಗದೆ ಮುಂದೆ ಸಾಗಿತು.

ಮಂತ್ರ ಮುಗ್ಧರಂತೆ ವಿಚಿತ್ರ ರೀತಿಯಲ್ಲಿ ಈ ಪ್ರಾಣಿಯನ್ನರಸಿ ಹೊರಟ ಬೇಟೆಗಾರರಿಗೆ 'ಕಾಕನೂರು' ಬಳಿ ಕೃಷ್ಣವರ್ಣದಿಂದ ಕೂಡಿ ಕಾಗೆಯ ಹಾಗೆ ಕೂಗಿತು. ಮುಂದೆ ಸಾಗಿದ ಆ ಪ್ರಾಣಿಯನ್ನು ಹಿಡಿಯಬೇಕೆಂದು ಹೊರಟ ಭಗವಂತನ ವಿವಿಧ ರೂಪಗಳನ್ನು ಅರ್ಥಮಾಡಿಕೊಳ್ಳದೆ ಆ ಮೂಢ ಬೇಟೆಗಾರರಿಗೆ ನೀತಿಗೆರೆಯ ಬಳಿ ನಿಂತು ಆ ಪ್ರಾಣಿಯು "ನಾನು ದೈವಾಂಶ ಸಂಭೂತನು. ನಿಮ್ಮ ಕ್ರೂರ ಮನೋಭಾವವನ್ನು ಬಿಟ್ಟು ಹೊರಟು ಹೋಗಿ" ಎಂದು ನೀತಿ ಹೇಳಿ ಅದನ್ನು ಅರ್ಥಮಾಡಿಕೊಳ್ಳದೆ ಕೊಲ್ಲಲು ಮುಂದಾದರು. ಅವರಿಂದ ತಪ್ಪಿಸಿಕೊಳ್ಳುತ್ತಾ ನುಗ್ಗಿಹಳ್ಳಿಯ ಬಳಿ ಬೇಟೆಗಾರರ ಕಾಲುಗಳಲ್ಲೇ ನುಗ್ಗಿ ಆಚೆಯಿಂದ ಈಚೆಗೆ, ಈಚೆಯಿಂದ ಆಚೆಗೆ ಓಡಾಡುತ್ತಾ ಅವರಿಗೆ ಮೋಸಪಡಿಸಿ ಮುಂದೆ ಸಾಗಿತು.

ಹೀಗೆ ಹೊರಟ ಶಕ್ತಿ ಸ್ವರೂಪವಾದ ಉಡವು ನಿಂಬಾಪುರ(ನಿಂತಾಪುರ)ದ ಬಳಿ ತನ್ನ ಹಿಂಭಾಗದ ಎರಡು ಕಾಲುಗಳ ಮೇಲೆ ದಕ್ಷಿಣಾಮುಖವಾಗಿ ನಿಂತು ದೇವರ ಗುಡ್ಡವನ್ನು ನೋಡಿತು. ಇನ್ನೇನು ಸಿಕ್ಕೇ ಬಿಟ್ಟಿತೆಂದು ಈಟಿಯಿಂದ ಕೊಲ್ಲಲು ಮುಂದಾದಾಗ ತಕ್ಷಣವೇ ಕುಪ್ಪಳಿಸಿ ಮುಂದೆ ಸಾಗಿ ಹರಿದ್ರಾ ನದಿಯನ್ನು(ಹಿರೇಹಳ್ಳ) ಒಂದೇ ಬಾರಿಗೆ ಕುಪ್ಪಳಿಸಿ ನಡೆದು ಬೇಟೆಗಾರರು ತನ್ನನ್ನು ಹಿಂಬಾಲಿಸಿ ಬರುವಂತೆ ವರ್ತಿಸುತ್ತಾ ಕ್ರೂರ ಮೃಗಗಳು ವಾಸವಾಗಿದ್ದ ದುರ್ಗಮ ಗುಡ್ಡವನ್ನು ಪ್ರವೇಶಿಸಿ ತುಟ್ಟ ತುದಿಯನ್ನೇರಿ ಒಂದು ಬಿಲದಲ್ಲಿ ಅಡಗಿಕೊಂಡಿತು.

ಈ ವೈವಿಧ್ಯಪೂರ್ಣ ಪ್ರಾಣಿಯನ್ನು ಹಿಡಿದು ತಿನ್ನಬೇಕೆಂಬ ಹಂಬಲದಿಂದ ಬೇಟೆ ನಾಯಿಗಳನ್ನು ಸುತ್ತ ಬಿಟ್ಟುಕೊಂಡು ತಮ್ಮಲ್ಲಿದ್ದ ಉಪಕರಣಗಳ ಸಹಾಯದಿಂದ ಆ ಬಿಲವನ್ನು ಅಗೆಯಲು ಪ್ರಾರಂಭಿಸಿದರು. ಏಳು ದಿವಸಗಳ ಪರ್ಯಂತ ಅಗೆಯಲಾಗಿ ಏಳನೆ ದಿವಸ ಬೇಟೆಗಾರನೊಬ್ಬನು ಭೂಮಿಗೆ ಹಾಕಿದ ಉಪಕರಣದಿಂದ 'ಡಣ್' ಎಂಬ ಶಬ್ದ ಬೇಟೆಗಾರರ ಕಿವಿಗೆ ಬೀಳುತ್ತಿದ್ದಂತೆಯೇ ಏಳು ಮಂದಿ ಬೇಟೆಗಾರರೂ ಮೂರ್ಛೆ ಬಿದ್ದರು.

ಮೂರ್ಛೆಯಿಂದ ತಿಳಿದೆದ್ದು ಆಶ್ಚರ್ಯದಿಂದ ಭಯಭೀತರಾಗಿ ಅಗೆದ ಸ್ಥಳದಲ್ಲಿ ಸೂಕ್ಷ್ಮವಾಗಿ ಪರೀಕ್ಷಿಸಲಾಗಿ ಅವರಿಗೆ ಒಂದು ಲಿಂಗುವಿನಾಕಾರದ ಉದ್ಭವ ಶಿಲೆಯು ಗೋಚರಿಸಿತು. ಚೈತ್ರ

[illegible]

ಶುದ್ಧ ಪೂರ್ಣಿಮ ಚಿತ್ತಾ ನಕ್ಷತ್ರದ ಆ ಶುಭ ದಿವಸದಂದು ಅವತರಿಸಿದ ಈ ಉದ್ಭವ ಮೂರ್ತಿಯ ಮುಂಭಾಗವು ಶ್ಯಾಮವರ್ಣದಿಂದ ಕೂಡಿದ್ದು ಹರಿಯ ರೂಪರೇಖೆಗಳನ್ನು ಹಿಂಭಾಗವು ಹವಳ ವರ್ಣದಿಂದ ಕೂಡಿದ್ದು ಹರನ ರೂಪರೇಖೆಗಳನ್ನು ಹೊಂದಿರುವುದನ್ನು ಗುರುತಿಸಲಾಗಿದೆ. ಭಕ್ತರೋದ್ಧಾರಕ್ಕಾಗಿ ಲಿಂಗರೂಪದಲ್ಲಿ ಅವತರಿಸಿದ ಹರಿಹರೇಶ್ವರರ ಮೇಲೆ ದೇವತೆಗಳು ಆಕಾಶದಿಂದ ಪುಷ್ಪ ವೃಷ್ಟಿಗೈದರು. ಆತನ ಮಹಿಮೆಯನ್ನು ಕೊಂಡಾಡಿದರು.[೫]

ಈ ರೀತಿಯಾಗಿ ಒಂದು ಪ್ರಾಣಿಯನ್ನು ಆಧಾರವಾಗಿಟ್ಟುಕೊಂಡು ಐತಿಹ್ಯವನ್ನು ಆ ಸ್ಥಳಕ್ಕೆ ಸೃಷ್ಟಿಸುತ್ತಾರೆ. ಆ ಪ್ರಾಣಿ ಎಲ್ಲಿಂದಲ್ಲೋ ಬಂದು ಕೊನೆಗೆ ಒಂದು ಸ್ಥಳದಲ್ಲಿ ಐಕ್ಯವಾಗುತ್ತದೆ. ಇದನ್ನು ಜನಪದರು ಬಣ್ಣ ಕಟ್ಟುವ ಮೂಲಕ ಅದನ್ನ ಕತೆಯ ರೂಪದಲ್ಲಿ ಈ ರೀತಿಯಾಗಿ ಎಣೆಯುತ್ತಾರೆ. ಹಾಗೆಯೇ ಹೇಳಿದರೆ ಚೆನ್ನಾಗಿರುವುದಿಲ್ಲವೆಂದು, ಊಟಕ್ಕೆ ಉಪ್ಪಿನಕಾಯಿ ತರಹ ಆ ಕತೆಗೆ ಒಂದಿಷ್ಟು ಮೆರಗು ಬರುವಂತೆ ಕತೆಯ ರೂಪ ಕೊಡುತ್ತಾ ಹೋಗುತ್ತಾರೆ. ಇದು ಐತಿಹ್ಯವೆಂದು ತಿಳಿಯಬಹುದು. ಈ ಸ್ಥಳದಲ್ಲಿ ಉಡಗಿರಿ ರಂಗನಾಥ ಸ್ಥಳವೆಂದು ಮತ್ತು ದೇವರಹಳ್ಳಿ ಎಂದು ಸಹ ಕರೆಯುತ್ತಾರೆ.

ಸಂತೇಬೆನ್ನೂರು

ಸಂತೇಬೆನ್ನೂರು ಕಾರಂಜಿ ನೂರು ಕಣ್ಣು ಸಾಲದು ಎನ್ನುವಂತೆ ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವ ಪ್ರಹಾರಕ್ಕೆ ಪುಷ್ಕರಣಿಯು ಕೈಬೀಸಿ ಕರೆದರೆ ನಡುವೆ ನಿಂತ ಕಾರಂಜಿ ಏಕಾಂಗಿ ಈ ಮಂಟಪವು ೩೨ ಅಡಿ ಉದ್ದ ೩೨ ಅಡಿ ಅಗಲವಿದೆ. ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲಾಗಿದೆ. ಕಾರಂಜಿ ಸುತ್ತಲೂ ಸಿಂಹ, ನವಿಲು ಹೂಬಳ್ಳಿಗಳು, ಕಲಾ ಕುಸುರಿಯ ಕುಸುಮ ಅರಳಿ ನಿಂತಿವೆ. ಕಾರಂಜಿ ಸುತ್ತಾ ಅಷ್ಟದಿಕ್ಪಾಲಕರಂತೆ ಇರುವ ಕಲ್ಲು ಮಂಟಪಗಳು ಕಾರಂಜಿ ಎದುರಿಗಿರುವ ಮೆಟ್ಟಲುಗಳ ಮೇಲೆ ಕೂತರೆ ದಿ.ಪುಟ್ಟಣ್ಣ ಕಣಗಾಲ ಉಪಾಸನೆ ಚಿತ್ರದ ನೆನಪು ತರುತ್ತದೆ. ಏಕೋ ಏನೋ ದೃಷ್ಟಿ ಈ ಕಡೆ ಹರಿದಿಲ್ಲ. ಕಲ್ಲರಳಿ ಹೂವಾಗಿಸುವ ಆಸೆ ಇನ್ನು ಕನಸಿನ ಕೂಸಾಗಿಯೇ ಉಳಿದಿದೆ. ಕಾರಂಜಿಯ ಸುತ್ತಾ ಇರುವ ಕಲ್ಲುಮಂಟಪಗಳು ಅವಸಾನ ತಲುಪುವ ಮುನ್ನ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆ ಜೀರ್ಣೋದ್ಧಾರದ ಕೆಲಸ ಕೈಗೊಳ್ಳಬಹುದೆ, ಇಂತಹ ಪುಷ್ಕರಣೆ ದಕ್ಷಿಣ ಭಾರತದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ ಎಂದು ಖ್ಯಾತ ಸಂಶೋಧಕ ಡಾ.ಎಂ.ಚಿದಾನಂದಮೂರ್ತಿ ಅಭಿಪ್ರಾಯ ಪಟ್ಟಿದ್ದಾರೆ. ಹೀಗೆಯೇ ಇರುವ ಸಂತೆಬೆನ್ನೂರು ಆಳುತ್ತಿದ್ದ ಹಿರೇ ಕೆಂಗಹನುಮಪ್ಪ ನಾಯಕರ ಕಡೆ ದಂಡು ಧಾವಿಸುತ್ತದೆ. ಹಿರೇ ಕೆಂಗಹನುಪ್ಪ ಹೊಂದಿಕೊಂಡಂತೆ ಇದರ ಗ್ರಾಮಗಳಲ್ಲಿನ ದೇವಾಲಯಗಳನ್ನ ಕೆಡವಿ ಮಸೀದಿಗಳನ್ನು ಪುಷ್ಕರಣಿಯ ಎದುರಿಗೆ ಇರುವ ರಾಮಚಂದ್ರ

ದೇವಾಲಯವನ್ನು ಕೆಡವಿ ಮಸೀದಿ ಕಟ್ಟಲು ಖಾನನಿಗೆ ಆಜ್ಞೆ ಮಾಡಿ, ಕೆಂಗಹನುಮಪ್ಪ ನಾಯಕನನ್ನು ಭಾವ ನಗರಕ್ಕೆ ಕೊಂಡೊಯ್ದನೆಂದು ತಿಳಿದುಬರುತ್ತದೆ. ಈಗಿರುವ ಮುಸಾಫೀರ ಖಾನೆಯನ್ನು ಒಂದೇ ರಾತ್ರಿ ಕಟ್ಟಿದರೆಂದು ಜನಪದ ಮಾತಿದೆ. ರಣದುಲ್ಲಾಖಾನನು ಹಿರೇ ಕೆಂಗಹನುಮಪ್ಪ ನಾಯಕರನ್ನು ಭಾವನಗರಕ್ಕೆ ಕೊಂಡೊಯ್ದನೆಂಬ ಸುದ್ಧಿ ತಿಳಿದುಬರುತ್ತದೆ. ಬಾಣವರದಲ್ಲಿದ್ದ ಚಿಕ್ಕ ಕೆಂಗಹನುಮಪ್ಪ ನಾಯಕರಿಗೆ ತಿಳಿಯುತ್ತದೆ. ಭಾವನಗರಕ್ಕೆ ಹೋಗಿ ಆದಿಲ್‌ಷಾಹಿಯ ವಿಶ್ವಾಸಕ್ಕೆ ಪಾತ್ರನಾಗುತ್ತಾನೆ. ಆದಿಲ್‌ಷಾಹಿಯು ಹುಲಿ ಕಾಳಗವನ್ನು ಏರ್ಪಡಿಸಿದಾಗ ಈ ಕಾಳಗದಲ್ಲಿ ಚಿಕ್ಕ ಕೆಂಗಹನುಮಪ್ಪ ನಾಯ್ಕ ವೀರಾವೇಶದಿಂದ ಹೋರಾಡಿದ ಪ್ರಯುಕ್ತ ಸರ್ಜಾ ಎಂಬ ಬಿರುದು ನೀಡಿದವರೆಂಬುದು ತಿಳಿದುಬರುತ್ತದೆ.

ಬಿಚ್ಚುಗತ್ತಿ ಭರಮಣ್ಣ ನಾಯ್ಕರ ಮಗ ಹಿರೇ ಮದಕರಿ ನಾಯಕ ರಾಜ್ಯವಾಳುತ್ತಿರುವ ಸಮಯದಲ್ಲಿ(೧೭೨೧ ರಿಂದ ೧೭೪೮)ರವರೆಗೆ ೬೦ ಸೀಮೆಗಳು ಮೇಲೆ ಅಧಿಪತ್ಯ ಸ್ಥಾಪಿಸಿದ್ದನೆಂದು ಇವುಗಳಲ್ಲಿ ಬಸವ ಪಟ್ಟಣ ಸಂತೇಬೆನ್ನೂರು ಸೀಮೆಗಳು ಸೇರಿದ್ದವೆಂದು ಐತಿಹ್ಯ ಇದೆ. ಹೀಗೆಯೇ ಚಿತ್ರದುರ್ಗದ ಭರಮಣ್ಣನಾಯ್ಕನು ಸಂತೇಬೆನ್ನೂರಿಗೆ ಮುತ್ತಿಗೆ ಹಾಕಿ ಸಂತೇಬೆನ್ನೂರು ಸೀಮೆಯನ್ನು ದುರ್ಗಕ್ಕೆ ಸೇರಿಸಿಕೊಂಡು ರಾಜ್ಯಭಾರ ಮಾಡಿಸಿದನೆಂದು ಐತಿಹ್ಯ ಇದೆ. ಪುನಃ ಹೈದರಾಲಿಖಾನರು ಚಿತ್ರದುರ್ಗ ಮದಕರಿ ನಾಯಕರನ್ನು ಕೂಡಿಕೊಂಡು ಸಂತೇಬೆನ್ನೂರಿಗೆ ಮುತ್ತಿಗೆ ಹಾಕಿದಾಗ ಸಂತೇಬೆನ್ನೂರು ಮದಕರಿ ನಾಯಕರಿಗೆ ಸೇರಿತ್ತೆಂದು ಕೈಫಿಯತ್ತುಗಳಿಂದ ತಿಳಿದುಬರುತ್ತದೆ.[೬]

ಹೀಗೆಯೇ ಸಂತೇಬೆನ್ನೂರನ್ನ ಚಿತ್ರದುರ್ಗ ಮದಕರಿ ನಾಯಕ ಆಳ್ವಿಕೆ ಮಾಡುತ್ತಿದ್ದ ಇದನ್ನ ವಶಪಡಿಸಿಕೊಳ್ಳಲು ಅವನ್ನ ಜೊತೆ ಅನೇಕ ಯುದ್ಧಗಳನ್ನ ಮಾಡಿದರು. ಈ ಸಂತೇಬೆನ್ನೂರು ಒಂದು ಐತಿಹಾಸಿಕ ಪ್ರೇಕ್ಷಣೀಯ ಸ್ಥಳವಾಗಿದೆ. ಈಗಲೂ ಇದೊಂದು ಸುಂದರ ಸ್ಥಳವಾಗಿದೆ ಎನ್ನಬಹುದು.

ಚನ್ನಗಿರಿ

ಕಲ್ಲು ಕಲ್ಲು ಕಥೆ ಹೇಳುತ್ತಿದೆ. ಕರುನಾಡು ಮಣ್ಣಿನ ಕಣಕಣದಲ್ಲಿ ಗತಿಸಿದ ಬದುಕಿನ ಸೆಲೆಯನ್ನು ಹುಡುಕುತ್ತಾ ಅಗೆದು ತೆಗೆಯುವ ಪ್ರಯತ್ನ ನಡೆದಿದೆ ನಡೆಯುತ್ತಲೇ ಇದೆ. ಊರು ಕೇರಿಯ ಬಗ್ಗೆ, ನಾಡು ನುಡಿಯ ಬಗೆ, ದಾನ, ದತ್ತಿ ನೀಡಿದ ಬಗ್ಗೆ, ಗುಡಿ–ಗುಂಡಾರಗಳು, ಬಸದಿಗಳು, ಬಳುವಳಿಗಳು, ಮಾಸ್ತಿ ಕಲ್ಲುಗಳೂ, ವೀರಗಲ್ಲುಗಳು, ಶಿಲಾಶಾಸನಗಳು, ತಾಮ್ರ ಪತ್ರಗಳು, ಓಲೆಗರಿಗಳು, ಕೋಟೆ ಕೊತ್ತಲಗಳು ಆಳಿದ ರಾಜ ಮನೆತನಗಳ ಬಗ್ಗೆ

ಇತಿಹಾಸಸದ ಪುಟಗಳು ಸಾರಿ ಸಾರಿ ಸಾಕ್ಷೀ ಭೂತಗೊಳಿಸಿವೆ. ಈ ಹಿನ್ನೆಲೆಯಲ್ಲಿ ಹಿಂದಿನ ಶಿವಮೊಗ್ಗ ಜಿಲ್ಲೆ ಇಂದಿನ ದಾವಣಗೆರೆ ಜಿಲ್ಲೆಗೆ ಸೇರಿದ ಚನ್ನಗಿರಿ ತಾಲೂಕಿನ ಈ ಕೆಳದಿ ಚೆನ್ನಮ್ಮಾಜಿ ಕಟ್ಟಿಸಿದ ಕೋಟೆಯ ಬಗ್ಗೆ ತಿಳಿಯಬಹುದು. ಈ ಚೆನ್ನಮ್ಮಾಜಿಯು ೧೭೮೨ರಲ್ಲಿ ಕೋಟೆ ಕಟ್ಟಿಸಿದಳೆಂದು ಐತಿಹ್ಯವಿದೆ. ಈಗಲೂ ಈ ಕೋಟೆ ಇದೆ. ಮೇಲಿಂದ ನೋಡಿದ ಎರಡು ಸುತ್ತಿನ ಕೋಟೆಯಿಂದ ಆವೃತಗೊಂಡಿದೆ. ಕೋಟೆ ಹತ್ತಿ ಪಶ್ಚಿಮದ ಕಡೆ ಇಳಿದರೆ ೨೮ ಮೆಟ್ಟಿಲು ಕೆಳಗೆ ಇಳಿದರೆ ನೀರಿನ ಕೊಳವಿದೆ. ಪೂಜೆಗಾಗಿ ಈ ನೀರನ್ನು ಬಳಸುತ್ತಿದ್ದರೆಂದು ಈ ಕೊಳದಲ್ಲಿ ಚಿನ್ನಾಭರಣವಿದೆ ಯೆಂದು ಜನರಲ್ಲಿ ಈಗಲೂ ಮಾತಿನ ಬಳ್ಳಿ ಹಬ್ಬುತ್ತಾ ಇದೆ.

ಕನ್ನಡ ನಾಡನ್ನು ಆಳಿದ ರಾಜಮಹಾರಾಜರು ತಮ್ಮ ನೆನಪಿಗಾಗಿ ನಗರ ಪಟ್ಟಣಗಳನ್ನು ಕಟ್ಟಿಸಿದ್ದಾರೆ. ಈ ವಿಚಾರದಲ್ಲಿ ಮಹಿಳೆಯರೂ ಹಿಂದೆ ಬಿದ್ದಿಲ್ಲ ಎಂಬುದಕ್ಕೆ ಹೀಗೆ ಮೂರು ಶತಮಾನಗಳ ಹಿಂದೆ ಕೆಳದಿಯ ಮಹಾರಾಣಿಯಾಗಿ ಆಳಿದ ಚೆನ್ನಮ್ಮಾಜಿಯೇ ಸಾಕ್ಷಿ. ಅವಳು ಹೀಗಿನ ಚನ್ನಗಿರಿಯಲ್ಲಿ ಒಂದು ಕೋಟೆ ಕಟ್ಟಿದಳು. ಆ ಸ್ಥಳಕ್ಕೆ ಹುಲಿಕೆರೆ ಎಂದೇ ಹೆಸರು ಹಿಂದೆ ಇನ್ನು ಮುಂದೆ ಆ ಭಾಗಕ್ಕೆ ತನ್ನ ಹೆಸರನ್ನೇ ಇಟ್ಟು ಚನ್ನಗಿರಿ ಎಂದು ಕರೆದಳೆಂದು ಲಿಂಗಣ್ಣ ಕವಿ ಬರೆದ ಕೆಳದಿ ನೃಪ ವಿಜಯದಿಂದ ತಿಳಿದುಬರುತ್ತದೆ.

ಈ ಗ್ರಾಮದ ಸುತ್ತಲೂ ಕೆರೆಗಳಿದ್ದು ಈ ಕೆರೆಗಳಿಗೆ ಹಿಂದೆ ಇದ್ದ ಕಾಡುಗಳಿಂದ ತಮ್ಮ ಬಾಯಾರಿಕೆಗಾಗಿ ನೀರು ಕುಡಿಯಲು ಹುಲಿಗಳು ಬರುತ್ತಿದ್ದವೆಂದು, ಆದ್ದರಿಂದ ಈ ಸ್ಥಳಕ್ಕೆ ಹುಲಿಕೆರೆ ಎಂದು ಹಿಂದೆ ಕರೆಯಲಾಗುತ್ತಿದೆ ಎಂದು ಊರಿನ ಹಿರಿಯರು ಹೇಳುತ್ತಾರೆ. ಈ ಹುಲಿಕೆರೆಯೇ ಮುಂದೆ ಜನಪದರ ಬಾಯಲ್ಲಿ 'ಹುಲಿಕೆರೆ' ಎಂದು ಕರೆಯಲ್ಪಟ್ಟಿತು. 'ಕೆಳದಿನೃಪ ವಿಜಯ'ದಲ್ಲಿ ಹೂಲಿ ಎಂಬ ಗಿಡಗಳ ಪ್ರಸ್ತಾಪವಿದೆ. ಹೂಲಿ ಎಂದರೆ ಒಂದು ರೀತಿಯ ಗಿಡ. ಒಂದು ರೀತಿಯ ಗದ್ದಲ ಮಾಡುವುದು ಎಂಬ ಅರ್ಥಗಳು ಇವೆ. ಈ ಪ್ರದೇಶದಲ್ಲಿ ಹೂಲಿ ಎಂಬ ಗಿಡಗಳು ಜಾಸ್ತಿಯಿರಬಹುದು ಈಗಲೂ ಕಾಣಬಹುದು. ಹುಲಿ ಮತ್ತಿತರ ಪ್ರಾಣಿಗಳನ್ನು ಬೇಟೆಯಾಡಲು ಗದ್ದಲ ಮಾಡುತ್ತಿದ್ದರಿಂದಲೂ ಇದಕ್ಕೆ ಹೂಲಿಕೆರೆ ಎಂದು ಕರೆಯುತ್ತಾ ಬಂದಿರಬೇಕು. ಪುರಾತನ ಕಾಲದಲ್ಲಿ ಈ ನಗರಕ್ಕೆ 'ಹರೀಕೆರೆ' ಎಂಬ ಹೆಸರು ಇತ್ತೆಂದು ಚನ್ನಗಿರಿ ದರ್ಶನ ಬರೆದ ಪ್ರೊ.ಇಕ್ಬಾಲ್ ಅಹ್ಮದ್ ಅಭಿಪ್ರಾಯಪಟ್ಟಿದ್ದಾರೆ.

ಚನ್ನಗಿರಿ ನಗರದ ಇತಿಹಾಸ ಪೂರ್ವದ ಶಾಸನಗಳಿಂದ ತಿಳಿದುಬರುವುದೆನೆಂದರೆ ಈ ಪ್ರದೇಶ ಮೊಟ್ಟ ಮೊದಲು ಗಂಗರ ಸ್ವಾಧೀನದಲ್ಲಿದ್ದು, ಆ ವಂಶದ ಅಂದಿನ ಕೇಂದ್ರ ಸ್ಥಾನವಾದ ಅಸಂದಿ ಕಡೂರು ಜಿಲ್ಲೆಯಲ್ಲಿತ್ತೆಂದು ಮತ್ತು ೧೧ನೇ ಶತಮಾನದಲ್ಲಿ ಈ ಪ್ರದೇಶವನ್ನು ಚಾಲುಕ್ಯರಾಳಿದರೆಂದು ಮತ್ತು ನೊಳಂಬವಾಡಿ ೩೨ ಸಾವಿರದವರು

ಸ್ವಾದೀನದಲ್ಲಿತ್ತೆಂದು ಹೇಳಲಾಗಿದೆ. ನಂತರ ಈ ಪ್ರದೇಶ ಉಚ್ಚಂಗಿ ಸಂಸ್ಥಾನಕ್ಕೆ ಸೇರಿರಬೇಕೆಂದು ತಿಳಿದುಬರುತ್ತದೆ. ೧೬ನೇ ಶತಮಾನದಲ್ಲಿ ಈ ಪ್ರದೇಶ ವಿಜಯನಗರದ ಅಧೀನಕ್ಕೆ ಬಸವಾಪಟ್ಟಣ ಸಂತೇಬೆನ್ನೂರು ಪಾಳೇಗಾರರ ಮೂಲಕ ಕೆಲಕಾಲ ಪಾಂಡ್ಯರ ಕದಂಬಳಿಗೆ ೧೦೦೦ ಸಂಸ್ಥಾನ ಆಳ್ವಿಕೆಗೂ ಒಳಪಟ್ಟಿತ್ತು. ಬಿದನೂರು ಸಂಸ್ಥಾನ್ಕಕೆ ಸೇರಿದ ಕೆಳದಿ ರಾಣಿ ಚೆನ್ನಮ್ಮಾಜಿ ಸಂತೇಬೆನ್ನೂರು ಪಾಳೇಗಾರ ಹನುಮಪ್ಪ ನಾಯಕನಿಂದ ಈ ನಗರವನ್ನು ತನ್ನ ಕೈವಶಪಡಿಸಿಕೊಂಡು ಇಲ್ಲಿ ಕೋಟೆ ಕಟ್ಟಿದಳೆಂದು ಐತಿಹ್ಯ ಇದೆ.[೭] ಹೀಗೆಯೇ ರಾಣಿಚೆನ್ನಮ್ಮಾಜಿ ಹೋರಾಡಿ ಹೆಣ್ಣು ಕೂಡಾ ಹಿಂದೆ ಬಿದ್ದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಇದ್ದಾಳೆ. ಈಕೆಯ ಸಾಧನೆ ಈಕೆ ಕಟ್ಟಿಸಿದ ಕೋಟೆಯಿಂದ ತಿಳಿಯಬಹುದು. ಅನೇಕ ರಾಜರ ವಿರುದ್ಧ ಹೋರಾಡಿ ಈ ಕೋಟೆ ಗೆದ್ದಳು. ಈಗಲೂ ಈ ಕೋಟೆ ಎರಡು ಸುತ್ತಿನ ಕೋಟೆ ಎಂದು ಕರೆಯುತ್ತಿದ್ದರು. ಇದೊಂದು ಅಕರ್ಷಣೆಯ ಕೇಂದ್ರ. ಇಲ್ಲಿ ಅನೇಕ ಶಾಸನಗಳು ಕೂಡ ಕಂಡುಬರುತ್ತವೆ.

ಕತ್ತಲಗೆರೆ

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಈಶಾನ್ಯಕ್ಕೆ ಇರುವ ಗಡಿ ಗ್ರಾಮ ಕತ್ತಲಗೆರೆ, ಈ ಕತ್ತಲಗೆರೆ ಗ್ರಾಮದ ಸ್ಥಳನಾಮ ಹೇಗೆ ಬಂದಿದೆ ಎಂಬುದು ಇನ್ನೂ ನಿಗೂಢವಾಗಿಯೇ ಇದೆ. ಅಲ್ಲಿನ ಕೆಲ ಹಿರಿ ತಲೆಮಾರಿನವರು ಹೇಳುವ ದಂತ ಕಥೆಯಂತೆ ಈ ಪ್ರದೇಶದಲ್ಲಿ ಕತ್ತಲರಾಯನೆಂಬ ರಾಜ ಆಳ್ವಿಕೆ ನಡೆಸುತ್ತಿದ್ದನೆಂತಲೂ ನಿತ್ಯ ಇಲ್ಲಿನ ದೇವಾಲಯಗಳಲ್ಲಿ ಲಕ್ಷದೀಪ ಉರಿಸಿ ಕತ್ತಲೆಯಲ್ಲೂ ಬೆಳಕಿನಗೆರೆ ಮೂಡಿಸುತ್ತಿದ್ದಾಗಿಯೂ, ಹಾಗಾಗಿ ಈ ಗ್ರಾಮಕ್ಕೆ ಕತ್ತಲಗೆರೆ ಎಂದು ಹೆಸರು ಬಂದಿದೆ. ಅವನೇ ಈ ಕತ್ತಲಗೆರೆ ಗ್ರಾಮದ ಸ್ಥಾಪಕನೆಂದು ಹೇಳುವ ಅವರು ಅವನಿಗೆ ಬಹಳ ದಿನಗಳವರೆಗೆ ಮಕ್ಕಳ ಭಾಗ್ಯ ದೊರೆಯಲಿಲ್ಲ. ಕೊನೆಗೆ ದೈವ ಪ್ರಾರ್ಥನೆಯಂತೆ ಕಾಳಿಂಗರಾಯ ಎಂಬ ಮಗ ಹುಟ್ಟಿದನೆಂತಲೂ ಅವನ ಜಾತಕದಂತೆ ಅಲ್ಪಾಯುಷಿಯಾಗಿ ೧೬ನೇ ವರ್ಷದಲ್ಲಿ ಅವನಿಗೆ ಹುಲಿಯಿಂದ ಮರಣ ಸಂಭವಿಸಲಿದೆ ಎಂಬ ಭವಿಷ್ಯವಾಣಿಯಂತೆ ಅವನನ್ನು ನೆಲಮಾಳಿಗೆಯಲ್ಲಿಟ್ಟು ಜೋಪಾನವಾಗಿ ಸಲಹುತ್ತಿದ್ದನೆಂದೂ ಹೊರ ಪ್ರಪಂಚದ ಅರಿವಿಲ್ಲದ ರಾಜಕುಮಾರ ಒಮ್ಮೆ ತಂದೆ ಇಲ್ಲದಿದ್ದಾಗ, ಮಂತ್ರಿ ಕುಮಾರನೊಂದಿಗೆ ಈ ಪ್ರಪಂಚಕ್ಕೆ ಕಾಲಿಟ್ಟು ಪ್ರಕೃತಿಯಿಂದ ಉತ್ತೇಜಿತನಾಗಿ ಕಾಡಿಗೆ ಅವನೊಂದಿಗೆ ಬೇಟೆಗೆ ತೆರಳಿದನೆಂದೂ, ಬೇಟೆ ಆಡಿ ದಣಿದಾಗ ಅಲ್ಲಿನ ಆಂಜನೇಯ ದೇವಾಲಯದಲ್ಲಿ ಮಲಗಿರಲು ಅಲ್ಲಿನ ಗೋಡೆಯ ಮೇಲಿನ ಹುಲಿಯ ಚಿತ್ರಕ್ಕೆ ದೈವ ಪ್ರೇರಣೆಯಂತೆ ಜೀವ ಬಂದು ಅವನನ್ನು ಕೊಂದಿತಂತೆ. ಇದನ್ನು ತಿಳಿದ ಅವನ ತಂದೆ-ತಾಯಿಗಳಿಗೆ ಆದ ದುಃಖ

ಅಪಾರ. ಮದುವೆ ಇಲ್ಲದ ರಾಜಕುಮಾರನ ಶವವನ್ನು ಮುಖ ಮಾಡಿ ಸಮಾಧಿ ಮಾಡಲು ಇಚ್ಛೆ ಪಡದೆ ಶವಕ್ಕೆ ಒಂದು ಕನ್ಯೆಯೊಂದಿಗೆ ಮದುವೆ ಮಾಡಿ ಸಂಸ್ಕಾರ ಮಾಡಲು ನಿಶ್ಚಯಿಸಿದ್ದನು.

ಅದರಂತೆ ಸತ್ತ ರಾಜಕುಮಾರನ ಕಳೇಬರಹದೊಂದಿಗೆ ಮದುವೆಯಾಗುವ ಕನ್ಯೆಗಾಗಿ ಡಂಗೂರ ಸಾರಿಸಲಾಯಿತು. ಯಾರೂ ಮುಂದೆ ಬರಲಿಲ್ಲ. ಕೊನೆಗೆ ಚೆನ್ನಮ್ಮಾನೆಂಬ ಸಾಧ್ವಿ ಬಡಬ್ರಾಹ್ಮಣ ಕನ್ಯೆ, ರಾಜಕುಮಾರನ ಶವದೊಂದಿಗೆ ಮದುವೆಯಾಗಲು ಒಪ್ಪಿಕೊಂಡಳು. ಮದುವೆಯಾದ ಮೇಲೆ ರಾಜಕುಮಾರನ ಶವ ಸಂಸ್ಕಾರ ಮಾಡುವಾಗ ತಾನೂ ಗಂಡನ ಚಿತೆಯೊಂದಿಗೆ ಸಹಗಮನ ಮಾಡಿದಳು. ಆದರೆ ಏನಾಶ್ಚರ್ಯ ಆಗ ಇದ್ದಕ್ಕಿದ್ದ ಹಾಗೆ ಜೋರಾಗಿ ಮಳೆ ಬಂದು ಚಿತೆಯ ಅಗ್ನಿ ನಂದಿಸಿ ಸಾಧ್ವಿ ಸಾಯಲಿಲ್ಲ. ಜೊತೆಗೆ ದೈವ ಕೃಪೆಯಿಂದ ಸತ್ತಿದ್ದ ರಾಜಕುಮಾರನಿಗೂ ಮರಳಿ ಜೀವ ಬಂದಿತು. ತಂದೆಯ ನಂತರ ಈ ಕಾಳಿಂಗರಾಯನೇ ಕತ್ತಲಗೆರೆಯ ಆಡಳಿತ ವಹಿಸಿಕೊಂಡು ಬಹುಕಾಲ ಆಳಿ ಜಗದ ಕತ್ತಲೆಯನ್ನು ತೊಲಗಿಸಿದನು. ಇವನ ಆಡಳಿತ ಕಾಲದಲ್ಲಿ ತಂದೆಯ ನೆನಪಿಗಾಗಿ ಇಲ್ಲಿ ಕೆರೆಯೊಂದು ನಿರ್ಮಿಸಿದನೆಂಥೂ ಕತ್ತಲರಾಯನ ಕೆರೆ ಕತ್ತಲಗೆರೆ ಎಂದೂ ಒಂದು ಐತಿಹ್ಯ ತಿಳಿದುಬರುತ್ತದೆ.[೮]

ಮೆದಿಕೆರೆ

ಸಂತೇಬೆನ್ನೂರಿನಿಂದ ಅತಿ ಸಮೀಪದಲ್ಲಿರುವ ಗ್ರಾಮ ಮೆದಿಕೆರೆ ನಾಯಕನ ಮೂಲ ಹೆಸರಿನ ಮೂಲ ಏನು? ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ಮೆದಿಕೆರೆ ಮತ್ತು ನಾಯಕ ಎಂದು ಎರಡು ಭಾಗಗಳಿರುವುದು ಸ್ಪಷ್ಟವಾಗಿದೆ. ಪೂರ್ವಭಾಗವಾದ ಮೆದಿಕೆರೆ ಒಂದು ಸ್ಥಳವಾಗಿದ್ದು, ಸೇಗಲ್(ಸೇಗಲ್ ಈಗಿನ ಶ್ಯಾಗಲೆ) ಮತ್ತಿ ಈ ಗ್ರಾಮಗಳು ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲೂಕಿನಲ್ಲಿದ್ದರೆ, ಮೆದಿಕೆರೆ ಅದೇ ಜಿಲ್ಲೆಯ ಚನ್ನಗಿರಿ ತಾಲೂಕಿನಲ್ಲಿದೆ. ಇವು ಮೂರು ಪರಸ್ಪರ ಅನತಿ ದೂರದಲ್ಲಿರುವ ಗ್ರಾಮಗಳು. ಕ್ರಿ.ಶ.೧೧ನೇ ಶತಮಾನಕ್ಕಾಗಲೇ ಈ ಗ್ರಾಮ ನೊಳಂಬ ಪಲ್ಲವ ವಂಶದ ನಾಡಪ್ರಭುಗಳ ಆಳ್ವಿಕೆಗೆ ಒಳಪಟ್ಟಿತ್ತು. ಆಗಲೂ ಇದರ ಹೆಸರು ಮೆದಿಕೆರೆ ಎಂದು ಇತ್ತು. ಹಿರೇಕೋಗಲೂರಲ್ಲಿ ಕ್ರಿ.ಶ.೧೦೪೯ರ ಶಿಲಾಶಾಸನದಿಂದ ತಿಳಿದುಬರುತ್ತದೆ.

ಈ ಊರಿನ ಉತ್ತರಕ್ಕೆ ಕಲ್ಲಮ್ಮ ದೇವಸ್ಥಾನ ಎಂಬ ಚಿಕ್ಕಗುಡಿ ಇದೆ. ಇದನ್ನು ನಿತ್ಯಪೂಜೆ ಮಾಡುವುದು ಕಾಣಬರುತ್ತದೆ. ಇದು ಸಹ ಒಂದು ಮಾಸ್ತಿಕಲ್ಲು ಕೈಯಲ್ಲಿ ಕತ್ತಿ ಹಿಡಿದ ಪುರುಷನ ಜೊತೆಗೆ ನಿಂಬೆಹಣ್ಣು ಹಿಡಿದ ಸುಂದರ ಸ್ತ್ರೀ ಜೊತೆಗೆ ಇಬ್ಬರ ನಡುವೆ ಒಬ್ಬ ಸ್ತ್ರೀ ಶಿಲ್ಪ ಬಿಡಿಸಲಾಗಿದೆ. ಇದಕ್ಕೊಂದು ದಂತಕಥೆ ಈ ಊರಿನ ಜನರ ಬಾಯಲ್ಲಿದೆ.

ಆದರಂತೆ ಆಲೂರಿಗೆ ಕೊಟ್ಟು ಮದುವೆ ಮಾಡಿದ ಬೆಟ್ಟದ ನಾಗೇಹಳ್ಳಿಯ ಹೆಂಗಸು ತೌರಿಗೆ ಹೋದಾಗ ಯುದ್ಧದಲ್ಲಿ ತನ್ನ ಗಂಡ ಮಡಿದ ವಾರ್ತೆ ತಿಳಿದು ತನ್ನ ಹುಟ್ಟಿದ ಮಗಳೊಂದಿಗೆ ಅಲ್ಲಿಗೆ ಬಂದಳೆಂದೂ ತುಂಬಾ ಬಾಯಾರಿಕೆಯಿಂದ ಅಲ್ಲೇ ಇದ್ದ ಮೆದೆ(ಹುಲ್ಲು)ಕಿತ್ತಳೆಂದು, ಆ ಜಾಗದಲ್ಲಿ ಜಲ ಉಕ್ಕಿ ಅವಳ ಬಾಯಾರಿಕೆ ನಿಗಿ, ನಂತರ ಅವಳು ತನ್ನ ಮಗುವಿನೊಂದಿಗೆ ಗಂಡನ ಚಿತೆಯಲ್ಲೇ ತಾನು ಸಹಗಮನ ಮಾಡಿಕೊಂಡಳೆಂದೂ ಹೇಳುತ್ತಾರೆ. ಅವಳ ಹೆಸರಿನಲ್ಲಿ ಮಾಸ್ತಿಗುಡಿ ಕಟ್ಟಿದ್ದು, ಅವಳ ನೆನಪಿಗಾಗಿ ಈ ಊರಿನ ಹೆಸರು ಮದಕರಿ ಇದ್ದದ್ದು ಮೆದಿಕೆರೆ ಎಂದಾಯಿತೆಂದು ಹೇಳುತ್ತಾರೆ.

ಹಿಂದೆ ವಿಜಯನಗರ ಅರಸು ಹರಿಹರ ಈ ಪ್ರಾಂತ್ಯ ಆಳುತ್ತಿದ್ದಾಗ ರಾಜ್ಯ ವಿಸ್ತರಣೆಗೆ ಇಲ್ಲಿಗೆ ಬಂದು ಬೀಡು ಬಿಟ್ಟಿದ್ದನೆಂದೂ ಆಗ ಕಾಡಿದ್ದ ಈ ಜಾಗದಲ್ಲಿ ತನ್ನ ಸ್ವಪ್ನದ ಅಣತಿಯಂತೆ ಮದಿಸಿದ ಆನೆಗಳನ್ನು ಹಿಡಿದು ಪಳಗಿಸಿದನಂತೆ ಅದಕ್ಕೆ ಈ ಸ್ಥಳಕ್ಕೆ ಮದಕರಿಯೆಂದು ಕರೆದನೆಂದು ಮೆಕೆಂಝಿ ಸಂಗ್ರಹಿಸಿದ ಸಂತೇಬೆನ್ನೂರು ಕೈಫಿಯತ್ತಿನಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ ಇಲ್ಲಿಗೆ ಸಮೀಪದ ಜಾಗದಲ್ಲಿ ಹರಿಹರ ರಾಯನಿಗೆ ಸ್ವಪ್ನವಾದ ಜಾದಲ್ಲಿ ರಂಗನಾಥ ಉದ್ಭವ ರೂಪದಿಂದ ಕಾಣಿಸಿಕೊಂಡಿದ್ದು ತೋಪಿನಹಳ್ಳಿ ರಂಗನಾಥ ದೇವಾಲಯವನ್ನು ಅವನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಇಲ್ಲಿ ಪ್ರತಿವರ್ಷ ಶಿವರಾತ್ರಿಯಾದ ಒಂಬತ್ತನೆಯ ದಿನ ಪುಷ್ಯ ನಕ್ಷತ್ರದಲ್ಲಿ ದೊಡ್ಡ ಜಾತ್ರೆ ರಥೋತ್ಸವ ಆಗುತ್ತದೆ.

ಮೆದಿಕೆರೆ ಕೆರೆಯನ್ನು ಸಂತೇಬೆನ್ನೂರು ಆಳುತ್ತಿದ್ದ ಪಾಳೇಗಾರ ಇಮ್ಮಡಿ ಕೆಂಗಾಹನುಮಪ್ಪ ನಾಯಕ ಕ್ರಿ.ಶ.೧೫೭೦ರಲ್ಲಿ ಕಟ್ಟಿಸಿದನೆಂದು ಕೈಫಿಯತ್ತಿನಿಂದ ತಿಳಿದುಬರುತ್ತದೆ. ಈ ಊರನ್ನ ಈಗಲೂ ಜನರು ಮೆದಿಕೆರೆ ಎಂದೇ ಕರೆಯುತ್ತಾರೆ.

ಬಸವಾಪಟ್ಟಣ

ಹೊನ್ನಿಗಾಗಿ, ಮಣ್ಣಿಗಾಗಿ, ಹೆಣ್ಣಿಗಾಗಿ ಹೋರಾಡಿ ಸಾಮ್ರಾಜ್ಯ ಕಟ್ಟಿ ಸಾಮ್ರಾಜ್ಯ ಆಳಿದ ನಿದರ್ಶನಗಳು ಅಚ್ಚಳಿಯದೇ ಉಳಿದಿದೆ. ಪ್ರೀತಿಗೆ ಕಣ್ಣಿಲ್ಲ, ಪ್ರೀತಿಗೆ ಜಾತಿ ಇಲ್ಲ ಎನ್ನುವುದಕ್ಕೆ ಬಸವಾಪಟ್ಟಣ ಐತಿಹ್ಯ ಪ್ರಸಂಗ ಹೊರತಾದುದಲ್ಲ. ಬೇಟೆಗೆ ಬಂದ 'ಧೂಮರಾಜ'ನಿಗೆ ಸುಂದರ ಸ್ಫೂರದ್ರೂಪಿಯಾದ ಜವ್ವನೆ ಕಣ್ಣಿಗೆ ಬೀಳುತ್ತಾಳೆ. ಅವಳಲ್ಲಿ ಅವನಿಗೆ ವ್ಯಾಮೋಹ ಉಂಟಾಗುತ್ತದೆ. ತನ್ನ ಮಗಳು ಧೂಮರಾಜನಿಗೆ ಮಾರು ಹೋಗಿದ್ದಾಳೆಂಬ ಸುದ್ದಿ ತಂದೆ ತಾಯಿಗಳಿಗೆ ತಿಳಿಯುತ್ತದೆ. ಮಗಳನ್ನು ಮದುವೆ ಮಾಡಿಕೊಡುವ ವಿಚಾರದಲ್ಲಿ ಜಾತಿ ಅಡ್ಡ

ಬರುತ್ತದೆ. ಇದರಿಂದ ಧೂಮರಾಜ ಕೆಚ್ಚೆದೆಯಿಂದ ಹೋರಾಡಿ ಸಾಮ್ರಾಜ್ಯ ಕಟ್ಟಿದನೆಂದು ಈ ಸ್ಥಳಕ್ಕೆ ಬಸವಾಪಟ್ಟಣವೆಂದು ನಂತರ ತಾನು ಪ್ರೀತಿಸಿದ ಹೆಣ್ಣನ್ನು ಮದುವೆ ಆದನೆಂದು ತಿಳಿದುಬರುತ್ತದೆ.

ಅದೇ ರೀತಿ ಇನ್ನೂ ಮುಂದೆ ಬಸವಾಪಟ್ಟಣ ಎನ್ನುವ ಹೆಸರು ಹೇಗೆ ಬಂತು ಎಂದು ಹುಡುಕುತ್ತಾ ಹೋದರೆ ಮೊದಲ ಹೆಸರು ಲಕ್ಷದೀಪವೆಂತಲೂ ೧೪೭೪ರಲ್ಲಿ ಕೆಂಗಣ್ಣ ಹನುಮಂತ ನಾಯಕರು ಕೋಟೆ ಕಟ್ಟಿ ರಾಜ್ಯಭಾರ ಮಾಡುತ್ತಿದ್ದನೆಂದು ಅವರ ರಾಜ್ಯ ಭಾರದಲ್ಲಿ ಗೂಳಿ ಬಸವಾ ಇದ್ದು ಬರಗಾಲ ಬಂದ ಸಮಯದಲ್ಲಿ ಫಕೀರರು ಇದನ್ನು ಕೊಂದು ತಿಂದಿದರೆಂದು ಕೇಳಿದಾಗ ಬರಗಾಲದ ಪ್ರಯುಕ್ತ ಹಸಿವು ತಲೆದೋರಿದ ಪ್ರಯುಕ್ತ ತಿನ್ನಬೇಕಾದ ಅನಿವಾರ್ಯತೆ ಬಂತೆಂದು ಫಕೀರರು ತಿಳಿಸಿದಾಗ, ಕೆಂಗಣ್ಣನಾಯಕನಿಗೆ ಬೇಸರವಾಗುತ್ತದೆ. 'ಛೇ' ಎಂದು ಗೂಳಿ ಬಸವ ನೆನಪಿಗಾಗಿ ಆ ಸ್ಥಳಕ್ಕೆ ಬಸವಾಪಟ್ಟಣ ಎಂದು ನಾಮಕರಣ ಮಾಡಿದನೆಂದು ಜಾನಪದ ಹಿನ್ನೆಲೆ ಇದೆ.[೧೦]

ಹಿರೇ ಕೋಗಲೂರು

ಹಿರೇಕೋಗಲೂರು ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲೂಕಿನ ಒಂದು ಪುಟ್ಟ ಗ್ರಾಮ. ಒಂದಾನೊಂದು ಕಾಲದಲ್ಲಿ ಇದು ವೈಭವದಿಂದ ಮೆರೆದ ಬೀಡಾಗಿತ್ತೆಂದು ಇಲ್ಲಿ ದೊರೆತಿರುವ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಕರ್ನಾಟಕ ಶಾಸನ ಸಂಪುಟವನ್ನು ಪ್ರಕಟಿಸಿದ ಬಿ.ಲೂಯಿಸ ರೈಸ ೧೯೦೨ಕ್ಕೂ ಮೊದಲೇ ಈ ಗ್ರಾಮದ ಆರು ಶಾಸನಗಳನ್ನು ಗುರುತಿಸಿದ್ದರು. ಈಚೆಗೆ ಇನ್ನೂ ಆರು ಶಾಸನ ಇಲ್ಲಿ ದೊರೆತಿವೆ.

ಕೋಗಲೂರು ಎಂಬ ಊರನ್ನು 'ಕೋಲುರಾಜ' ಎಂಬುವವನು ಆಳುತ್ತಿದ್ದ ಎಂಬ ಐತಿಹ್ಯವನ್ನೇ ನೋಡಬಹುದು. ಅಂತಹ ಒಬ್ಬ ರಾಜ ಇದ್ದನೆಂಬುದಕ್ಕೆ ಯಾವುದೇ ಆಧಾರವೂ ಇಲ್ಲ. 'ಕೋಗಲೂರು' ಹೆಸರಿನ ಆಧಾರದ ಮೇಲೆ ಕೋಲುರಾಜ ಸೃಷ್ಟಿಯಾಗಿದ್ದರೂ ಜನ 'ಕೋಲುರಾಜ' ಆಳುತ್ತಿದ್ದುದರಿಂದ ಕೋಗಲೂರು ಹೆಸರು ಬಂದಿತೆಂದು ವಿವರಿಸುತ್ತಾರೆ.[೧೧] ಚಿತ್ರದುರ್ಗದ 'ಓಬವ್ವನ ಕಿಂಡಿ'ಯನ್ನು ಕುರಿತಾದ ಐತಿಹ್ಯದ ಹಿಂದೆ ಸ್ವಲ್ಪ ವಾಸ್ತವಾಂಶವಿರಬಹುದು. ಅಂತಹ ಘಟನೆಯೊಂದು ನಡೆದಿದೆಯೆಂಬುದಕ್ಕೆ ಸನ್ನದುಗಳ ಆಧಾರಗಳಿವೆ. ಹೀಗಿರುವಾಗ ಐತಿಹ್ಯಗಳನ್ನು ಇತಿಹಾಸದ ಪುನಾರಚನೆಯಲ್ಲಿ ಎಚ್ಚರಿಕೆಯಿಂದ ಬಳಸುವುದು ವಿವೇಕದ ಮಾತೇ ಹೊರತು ತಿರಸ್ಕರಿಸುವುದು ದಡ್ಡತನವಾಗುತ್ತದೆ.[೧೨] ಈ ಕೋಗಲೂರು ಎಂಬ ಹೆಸರು ಕೋಲುರಾಜನಿಂದ ಬಂದಿತೆಂದು ಜನಪದರು ಹೇಳುತ್ತಾರೆ. ಈಗಲೂ ಈ ಊರು ಇದೆ.

೫.೨. ದಾವಣಗೆರೆ ತಾಲೂಕಿನ ಜನಪದ ಐತಿಹ್ಯಗಳು

ನೀರ್ಥಡಿ

ದಾವಣಗೆರೆ ತಾಲೂಕಿಗೆ ಸೇರಿದ ಒಂದು ಗಡಿ ಗ್ರಾಮ ನೀರ್ಥಡಿ. ದಾವಣಗೆರೆಯಿಂದ ಚಿತ್ರದುರ್ಗಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ೪ರಲ್ಲಿರುವ ಲಕ್ಕೇಮುಕ್ತನಹಳ್ಳಿಯ ದಕ್ಷಿಣ ೨ ಕಿ.ಮೀ ದೂರದಲ್ಲಿ ಈ ಪುಟ್ಟ ಗ್ರಾಮವಿದೆ. ಈ ಗ್ರಾಮದ ಸಮೀಪ ಇರುವ ಬೆಟ್ಟದ ತಪ್ಪಲಿನಲ್ಲಿ ಗಾರ್ಗ್ಯ ಮಹರ್ಷಿಗಳು ಹಿಂದೆ ವಾಸವಾಗಿದ್ದು, ಅಲ್ಲಿ ತಪಸ್ಸನ್ನು ಮಾಡುತ್ತಿದ್ದರಂತೆ. ಒಮ್ಮೆ ಧಾರಾಕಾರವಾಗಿ ಸುರಿದ ಮಳೆಯಿಂದ ಅವರ ಮೇಲೆ ನೀರು ಹರಿದು ಬಂದು ಮುನ್ನುಗ್ಗ ತೊಡಗಿದಂತೆ ಆಗ ಅದನ್ನು ತಡೆಯಲು ಅವರು 'ನೀರು+ತಡಿ' ಎಂದು ಹೇಳಿದರಂತೆ, ಅವರ ತಪಸ್ಸಿನ ಮಹಿಮೆ ಪ್ರಭಾವದಿಂದ ಆ ನೀರು ಅಲ್ಲಿಯೇ ಮಡುವಾಗಿ ನಿಂತಿತಂತೆ. ಆ ಕಾರಣ ಈ ಗ್ರಾಮಕ್ಕೆ ನೀರ್ಥಡಿ ಎಂದು ಹೆಸರು ಬಂತು ಎಂದು ಪೌರಾಣಿಕ ಕತೆ ಪ್ರಚಲಿತದಲ್ಲಿದೆ.[೧೩] ಇದು ವಿಜಯನಗರ ಕಾಲದ ಸ್ಥಳ ದೇವಾಲಯ ಮತ್ತು ಶಿಲ್ಪಗಳು ಹೆಚ್ಚಾಗಿ ದೊರೆತಿವೆ.

ತೋಳಹುಣಸೆ

ದಾವಣಗೆರೆಯಿಂದ ೧೦ ಕಿ.ಮೀ ದೂರವಿರುವ ಊರು ತೋಳಹುಣಸೆ. ಈ ಸ್ಥಳದ ಅಧಿಕ ಸಂಖ್ಯೆ ಹುಣಸೆ ಮರಗಳು ಬೆಳೆದಿದ್ದವು. ಅವುಗಳ ನೆರಳಿಗೆ ತೋಳಗಳು ವಿಶ್ರಾಂತಿ ತೆಗೆದುಕೊಳ್ಳಲು ಬರುತ್ತಿದ್ದವು. ಈ ಕಾರಣದಿಂದಾಗಿ ಈ ಸ್ಥಳಕ್ಕೆ ತೋಣ ಹುಣಸೆ ಎಂಬ ಹೆಸರು ಬಂದಿತು ಎಂದು ಐತಿಹ್ಯದ ವಿವರ. ಇದು ಯಾವುದೇ ಶಾಸನದಲ್ಲಿ ಇದುವರೆಗೂ ಈ ಸ್ಥಳದ ಬಗ್ಗೆ ಕಂಡುಬಂದಿಲ್ಲ. ಈ ಸ್ಥಳ ಹಿಂದೆ ಬೌದ್ಧ ವಿಹಾರವಾಗಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಈ ಸ್ಥಳದ ಬಗ್ಗೆ ಅಧ್ಯಯನ ನಡೆಯಬೇಕಾಗಿದೆ.

ತೋಳ+ಹುಣಸೆ=ತೊಳ ಹುಣಸೆ. ತೋಳ ಎಂದರೆ ಇದೊಂದು ಪ್ರಾಣಿ ಜಾತಿ ಎನ್ನಬಹುದು.

ದಾವಣಗೆರೆ

ಕರ್ನಾಟಕವನ್ನಾಳಿದ ಎಲ್ಲಾ ಪ್ರಮುಖ ರಾಜವಂಶಗಳವರ ಶಾಸನಗಳೂ ಈ ಜಿಲ್ಲೆಯಲ್ಲಿ ದೊರೆತಿದ್ದು, ಅದರಿಂದ ಅವರೆಲ್ಲರೂ ಈ ಜಿಲ್ಲೆಯಲ್ಲಿ ಆಡಳಿತ ನಡೆಸಿರುವುದು ತಿಳಿಯ ಬಹುದಾಗಿದೆ. ಈವರೆಗೆ ದೊರೆತ ಶಾಸನಗಳು ಕ್ರಿ.ಶ.ಏಳನೇ ಶತಮಾನದಿಂದ ಹಿಡಿದು ಹತ್ತೊಂಬತ್ತನೆಯ ಶತಮಾನದವರೆಗೂ ಬರೆಸಲ್ಪಟ್ಟವಾಗಿದ್ದು, ಹೆಚ್ಚಿನ ಶಾಸನಗಳು ಕನ್ನಡ

ಭಾಷೆ ಮತ್ತು ಲಿಪಿಯಲ್ಲಿಯೇ ಇವೆ. ಕೆಲವು ನಾಗರಿ ಲಿಪಿಯಲ್ಲಿ ಮತ್ತು ಸಂಸ್ಕೃತ ಭಾಷೆಯ ಶಾಸನಗಳೂ ದೊರೆತಿವೆ. ಹಾಗೆಯೇ ಜನಪದ ಐತಿಹ್ಯಗಳು ಕೂಡಾ ಹೆಚ್ಚಾಗಿವೆ.

ಇಲ್ಲಿ ಹಿಂದೆ ಒಂದು ದೊಡ್ಡ ಕೆರೆ ಇತ್ತು. ಅದರ ಬದಿಯ ಮಾರ್ಗದಲ್ಲಿ ಸಂಚರಿಸುತ್ತಿದ್ದ ಜನರು, ದನ-ಕರು, ಎತ್ತು, ಕುದುರೆ ಮುಂತಾದ ಪ್ರಾಣಿಗಳಿಗೆ ಇಲ್ಲಿ ನೀರು ಕುಡಿಸಿ ದಾವಣಿಯಿಂದ ಕಟ್ಟಿ ಸ್ವಲ್ಪ ಕಾಲ ನಿಲ್ಲಿಸಿ ತಾವೂ ವಿಶ್ರಮಿಸಿಕೊಳ್ಳುತ್ತಿದ್ದರು. ಇದರಿಂದ ಈ ಸ್ಥಳಕ್ಕೆ ದಾವಣಿಕೆರೆ ಎಂಬ ಹೆಸರು ಬಂತು. ಮುಂದೆ ದಾವಣಗೆರೆಯಾಯಿತು. ಈ ಕೆರೆಯ ಬದಿಯಲ್ಲಿ ದನಕರು ಮೊದಲಾದವನ್ನು ದಾವಣಿಯಿಂದ ಕಟ್ಟಿ ನಿಲ್ಲಿಸುತ್ತಿದ್ದರಷ್ಟೆ, ಆ ದಾವಣಿಯು ಹಿಂದೆ ಹಗ್ಗದಲ್ಲಿ ಕಟ್ಟುತ್ತಿದ್ದ ದಾವಣಿಯಾಗಿದಿತ್ತು. ಈ ವಿಶಿಷ್ಟ ರಚನೆ ದವಣಿಕಟ್ಟು ಎಂಬ ಹೆಸರು ಇತ್ತೆಂದೂ ಇದರಿಂದಲೇ ದವಣಿಕಟ್ಟು ಪ್ರಾಣಿಗಳನ್ನು ನಿಲ್ಲಿಸುವ ಕೆರೆ ದಾವಣಕೆರೆ ಆಯಿತೆಂದು ಹೇಳುತ್ತಾರೆ. ಈ ಸ್ಥಳದಲ್ಲಿ ಹಿಂದೆ ಅನೇಕ ದಾನಿಗಳಿದ್ದರು, ಅದರಿಂದ ಈ ಊರು ದಾನಿಗಳ ಕೇರಿ ಎನಿಸಿ ಮುಂದೆ ಅದೇ ದಾವಣಗೆರೆ ಆಯಿತು ಎನ್ನುತ್ತಾರೆ. ಈ ಸ್ಥಳನಾಮ ದಾವನ ಮತ್ತು ಕೇರಿ ಎಂಬ ಪದಗಳ ಕಂಡಿಕೆ ಎಂಬಂತೆ ಅವರು ರೂಪಿಸುತ್ತಿದ್ದರು. ಹೀಗೆಂದರೆ ದಾವ ಎಂಬುವನ ಕೇರಿ(ಬ್ರಾಹ್ಮಣರ ಬೀದಿ ಇದ್ದಂತೆ) ಎಂದು ವಿವರಿಸುತ್ತಾರೆ. ದೇವನಕೆರೆ, ದ್ಯಾವನಕೆರೆ, ದ್ಯಾವನಗೆರೆ, ದ್ಯಾವಣಗೆರೆ ನಂತರ ದಾವಣಗೆರೆ ಎಂದು ಹೆಸರಾಗಿದೆ.

ಬಿ.ರಾಜಶೇಖರಪ್ಪ ಈ ದಾವಣೆಗೆರೆ ನಾಮ ನಿಷ್ಪತ್ತಿ ಬಗ್ಗೆ ದಾವಣಿ ಮತ್ತು ಕೆರೆ ಎಂಬ ಎರಡು ಭಾಗಗಳು ಇರುವುದು ಸ್ಪಷ್ಟ. ದಾವಣಿ ಅರ್ಥದ ಶಬ್ದವಾಗಿಲ್ಲ. ಒಂದು ವ್ಯಕ್ತಿಯ ನಾಮವಾಗಿದೆ. ದಾವಣನ ಹೆಸರಿನ ದಾವಣಗೆರೆ ೧೨ನೇ ಶತಮಾನದ ವೇಳೆಗೆ ಷಷ್ಠಿ ವಿಭಕ್ತಿ ಲೋಪಗೊಂಡು ದಾವಣಗೆರೆ ಆಗಿದೆ. ೧೨ನೇ ಶತಮಾನದ ಮಂಡ್ಯ ಜಿಲ್ಲೆಯ ನಾಗಮಂಗಲದ ಶಾಸನದಲ್ಲಿ ದಾವಣಕೇರಿ ಎಂಬ ಒಂದು ಕೆರೆಯ ಹೆಸರಿದೆ, ಆದ್ದರಿಂದ ದಾವಣ ಎನ್ನುವ ವ್ಯಕ್ತಿಯ ಹೆಸರಿನ ಊರಾಗಿರಬೇಕು ಎಂದು ತಿಳಿಯಬಹುದು. ಆದರೆ ದಾವಣ ಯಾರು? ಆತನ ಕಾಲಮಾನದ ಬಗ್ಗೆ ಇನ್ನು ಸಂಶೋಧನೆಯಾಗಬೇಕು ಎಂದಿದ್ದಾರೆ. ಗಿರಿಜಾರವರ ಹೇಳಿಕೆಯಂತೆ ಬ್ರಿಟಿಷರ ದವಣಕೆರೆಯನ್ನು ಅಪಭ್ರಾಂಶಗೊಳಿಸಿ ದಾವಣಗೆರೆ ಎಂದು ಮಾಡಿರಲು ಸಾಧ್ಯ ಎಂದಿದ್ದಾರೆ.[೧೪] ಈಗಲೂ ಈ ಸ್ಥಳಕ್ಕೆ ಜನರು ದಾವಣಗೆರೆ ಅಥವಾ ದಾವಣಗೆರೆ ಎಂದು ಕರೆಯುತ್ತಾರೆ.

೫.೩. ಹರಪನಹಳ್ಳಿ ತಾಲೂಕಿನ ಜನಪದ ಐತಿಹ್ಯಗಳು

ಈ ಮುಂಚೆ ಹರಪನಹಳ್ಳಿಯು ಬಳ್ಳಾರಿ ಜಿಲ್ಲೆಯಲ್ಲಿತ್ತು. ನಂತರ ನೂತನವಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾಗಿದ್ದು, ದಾವಣೆಗೆರೆಯಿಂದ ಉತ್ತರಕ್ಕೆ ೫೦ ಕಿ.ಮೀ ದೂರದಲ್ಲಿದೆ. ದಾವಣಗೆರೆ ಜಿಲ್ಲೆಯು ಒಂದು ತಾಲೂಕು ಕೇಂದ್ರ.

ಉಚ್ಚಂಗಿದುರ್ಗ

ಅವಿಭಜಿತ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗದ ಒಂದು ಶಾಸನವು ಚಾಳೂಕ್ಯದೊರೆ ಆಹವಮಲ್ಲದೇವ ಮತ್ತು ಆತನ ಮಗ ವೆಂಗಿಮಂಡಳೇಶ್ವರ ವಿಷ್ಣುವರ್ಧನ ಮಹಾರಾಜ ವಿಜಯಾದಿತ್ಯದೇವ ನೊಳಂಬವಾಡಿ ೩೨ನ್ನು ಆಳುತ್ತಿದ್ದುದಾಗಿ ಹೇಳುತ್ತದೆ. ಶಾಸನದ ಕಾಲ ಕ್ರಿ.ಶ.೧೦೬೪, ಏಪ್ರಿಲ್ ೪ ಭಾನುವಾರ, ಉಚ್ಚಂಗಿ ದುರ್ಗವು ತಾಲೂಕಿನ ದಕ್ಷಿಣ ಭಾಗದಲ್ಲಿರುವ ಒಂದು ಗ್ರಾಮವಾಗಿದ್ದು, ಇಲ್ಲಿಯ ಜನಸಂಖ್ಯೆ ಸುಮಾರು ಐದು ಸಾವಿರ ಇಲ್ಲಿ ಇತಿಹಾಸ ಪ್ರಸಿದ್ಧವಾದ ಒಂದು ಬೆಟ್ಟವಿದೆ. ಈ ಬೆಟ್ಟದ ಮೇಲೆ ಉಚ್ಚಂಗೆಮ್ಮ ದೇವತೆಯಿರುವುದರಿಂದ ಈ ಸ್ಥಳಕ್ಕೆ ಉಚ್ಚಂಗಿಯೆಂದು ಹೆಸರು ಬಂದಿತೆಂದು ಹೇಳಲಾಗಿದೆ. ಈ ಸ್ಥಳನಾಮ ಬರಲು ಕಾರಣವಾದ ಸಂಗತಿಯನ್ನು ಅತಿಶಯ ಬಣ್ಣನೆಯೊಡನೆ ಕಥೆಯಾಗಿ ಹೇಳಲಾಗಿದೆ. ಈ ಶಾಸನವು ಉಚ್ಚಂಗಿದುರ್ಗದ ಕೋಟೆ ಮತ್ತು ಕಲಿದೇವರ ಬಗೆಗಿನ ದಂತಕಥೆ ಹೇಳುತ್ತದೆ.

ಕದಂಬವಾಡಿ ನಾಡಿನ ಮಧ್ಯದಲ್ಲಿ ಮೇರುಪರ್ವತದಂತೆ ಕಾಣುತ್ತಿರುವ ಉಚ್ಚಂಗಿಯ ಪರ್ವತಕ್ಕೆ ನಾಲ್ಕು ಹೆಸರುಗಳಿವೆ. ಕೃತಯುಗದಲ್ಲಿ ಮೇಘನಾದನೆಂಬ ರಾಕ್ಷಸನ ನಿವಾಸವಾಗಿದ್ದುದ ರಿಂದ ಅದಕ್ಕೆ ಮೇಘನಾದನೆಂದೂ, ತ್ರೇತಾಯುಗದಲ್ಲಿ ಹಿರಣ್ಯಕನೆಂಬುವನು ನಿವಾಸವಾಗಿದ್ದು ಆತನನ್ನು ನಾರಾಯಣನು ವಧೆ ಮಾಡಿ ಸುವರ್ಣ ವೃಷ್ಟಿಗರೆದ್ದುದರಿಂದಾಗಿ ಉತ್ತುಂಗ ಪರ್ವತ ಎಂದೂ, ಕಲಿಯುಗದಲ್ಲಿ ಉಚ್ಚಂಗಿಯಮ್ಮ ಎಂಬುವವಳು ಮೊದಲಾಗಿ ಮೂವರು ಬ್ರಾಹ್ಮಣ ಕನ್ನಿಕೆಯರು ಈಶ್ವರನನ್ನು ಕುರಿತು ತಪಸ್ಸನ್ನಾಚರಿಸಿ ದೇವತ್ವವನ್ನು ಪಡೆದರು. ಅದರಿಂದಾಗಿ ಉಚ್ಚಂಗಿಪರ್ವತ ಎಂದೂ ಹೆಸರಾಯಿತು.

ಇಲ್ಲಿ ಒಂದು ಪ್ರಶ್ನೆ ಮತ್ತು ಕುತೂಹಲದ ವಿಷಯವೆಂದರೆ ಶಾಸನಗಳಲ್ಲಿ ಕಂಡರಿಸುವ ಮಾಮೂಲೀ ಸಂಗತಿಗಳನ್ನು ಹೇಳ ಹೊರಟ ಶಾಸನಕಾರನು ಒಟ್ಟು ಶಾಸನದ ಮೂವತ್ತೆಂಟು ಸಾಲುಗಳ ಪೂರ್ವಾರ್ಧದಲ್ಲಿ ಸಾಮಾನ್ಯ ಸಂಗತಿಗಳನ್ನು ನಿರೂಪಿಸಿ ಉತ್ತರಾರ್ಧದ ಏಳು ಸಾಲುಗಳಲ್ಲಿ ಅಚ್ಚರಿ ತರುವ ವಿಷಯವನ್ನು ಹೇಳಿದ್ದಾನೆ. ಉಚ್ಚಂಗಿ ದುರ್ಗದ ಮಹತ್ವತೆ ಶ್ರೇಷ್ಠತೆ ಮತ್ತು ಪಾರಮ್ಯತೆಗಳನ್ನು ಲೋಕಪ್ರಚುರ ಪಡಿಸುವ ಉದ್ದೇಶ ಅವನಿಗಿರುವಂತೆ ಕಾಣುತ್ತದೆ. ಶಾಸನಕಾರರು ಪ್ರಾಕೃತಿಕವಾದ ಸಂಗತಿಯೊಂದನ್ನು ಐತಿಹಾಸಿಕ ಮತ್ತು ಪೌರಾಣಿಕ ಸಂಗತಿಯ ನ್ನಾಗಿಸಲು ಹೊರಟಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ವಾಸ್ತವ ಏನೆಂದರೆ ಉಚ್ಚಂಗಿ ಶಬ್ದ ನಿಷ್ಪತ್ತಿ ಉಚ್ಚಶೃಂಗಿ ಎಂದು ಅತ್ಯಂತ ಎತ್ತರವಾದ ಶಿಖರವುಳ್ಳದ್ದು ಎಂಬುದು ಅದರರ್ಥ. ಕಾಲಕ್ರಮೇಣ ಉಚ್ಚಾರಣೆಯಲ್ಲಿ ಆ ಪದ ಹೀಗೆ ಬದಲಾವಣೆ ಹೊಂದಿದೆ ಎಂದು

ಭಾವಿಸಲು ಏನೂ ಅಡ್ಡಿಯಿಲ್ಲ.[೧೫] ಈಗಲೂ ಜನರು ಇದನ್ನ ಉಚ್ಚಂಗಿ, ಉಚ್ಚಂಗಿದುರ್ಗ ಎಂದು ಕರೆಯುತ್ತಾರೆ. ಇದಲ್ಲದೇ ಅನೇಕ ಶಾಸನಗಳಲ್ಲಿ ಕೂಡಾ ಉಚ್ಚಂಗಿದುರ್ಗ ಎಂದು ಮತ್ತೆ ಉಚ್ಚಂಗೆಮ್ಮನ ಬಗ್ಗೆ ಶಾಸನೋಕ್ತವಾಗಿ ಈ ಶಾಸನದಲ್ಲಿ ತಿಳಿಸಲಾಗಿದೆ.

ಜನಪದೀಯ ಅಂಶಗಳಲ್ಲಿ ಉಚ್ಚಂಗೆಮ್ಮ

ಮೊದಲನೆಯದಾಗಿ ಶಿವಮೊಗ್ಗ ಜಿಲ್ಲೆಯ ಹಿರೇಮಾವುರಿನಿಂದ ಬಂದ ಈ ದೇವತೆ ಮ್ಯಾಗಳಗೇರಿಯಲ್ಲಿ ವಾಸ್ತವ್ಯ ಮಾಡಿದಳಂತೆ ತನ್ನ ಮನಸ್ಸಿನ ಇಚ್ಛೆಯಂತೆ ಮ್ಯಾಗಳಗೇರಿಯಿಂಥ ಪೂರ್ವಕ್ಕೆ ಪ್ರಯಾಣ ಬೆಳೆಸಿದಳು. ಬೇಸಿಗೆ ಕಾಲವಾದ್ದರಿಂದ ದಣಿವಾರಿಸಿಕೊಳ್ಳಲು ಇಂದಿನ ಉಚ್ಚಂಗಿದುರ್ಗದ ಪಶ್ಚಿಮಕ್ಕಿರುವ ಮರದ ತೋಪಿನಲ್ಲಿ ಕುಳಿತುಕೊಳ್ಳಲು ಮತ್ತು ಬಾಯಾರಿಕೆಯಾದ್ದರಿಂದ ನೀರಿಗಾಗಿ ಹಂಬಲಿಸಿದಳು. ಆಗ ಅಲ್ಲೇ ಇದ್ದ ಕುರುಬರು ತಮ್ಮ ಬಳಿಯೂ ನೀರಿಲ್ಲದರಿಂದ ಕುರಿಯ ಹಾಲನ್ನೇ ಕೊಟ್ಟರಂತೆ. ಅದನ್ನೇ ಕುಡಿದು ಬಾಯಾರಿಕೆ ಕಳೆದುಕೊಂಡು ಇವಳು ಇಲ್ಲಿಗೆ ಬರುವ ಜನರಿಗೆಲ್ಲ ಹಾಲಿನಂತ ನೀರು ಸಿಗಲೆಂದು ಹರಸಿದಳಂತೆ, ಅಲ್ಲಿಂದ ಮುಂದುವರೆದು ಅವಳು ಎತ್ತರವಾದ ಬೆಟ್ಟದ ಮೇಲೆ ನೆಲೆಸಿದ್ದಳೆಂದು ಈ ಹಿಂದೆ ಈ ಸ್ತ್ರೀ ದಣಿವಾರಿಸಿಕೊಳ್ಳಲು ಕುಳಿತುಕೊಂಡ ಪ್ರದೇಶದಲ್ಲಿ ಕುರುಬರು ಬಾವಿ ತೆರೆಯಲಾಗಿ ಅಲ್ಲಿ ಹಾಲಿನಂತ ನೀರು ಕಂಡು ಬಂದಿತಂತೆ, ಹಾಗಾಗಿ ಈ ಸ್ತ್ರೀ ಹರಸಿದ ಹರಕೆ ನೆನಪಾಗಿ ಇವಳನ್ನು ಹುಡುಕಿಕೊಂಡು ಬಂದರಂತೆ. ಹೀಗೆ ಸುತ್ತಲಿನ ಜನತೆಗೆ ದೇವಿಯಾಗಿ ಮಾರ್ಪಾಡಾದಳೆಂದು, ಆಕೆ ನೆಲಸಿದ ಪರ್ವತ ಉಚ್ಚ ಎತ್ತರವಾದ್ದರಿಂದ ಉಚ್ಚಂಗಿ ದೇವಿಯಾದಳೂ. ಈ ಸ್ಥಳಕ್ಕೆ ಉಚ್ಚಂಗಿ ಎಂದು ಅಲ್ಲಿಯ ಅರ್ಚಕರಾನೇಕರು ಅಭಿಪ್ರಾಯಪಡುತ್ತಾರೆ.[೧೬] ಮತ್ತು ಉಚ್ಚಂಗೆಮ್ಮ ಕುಳಿತುಕೊಂಡಿದ್ದ ತೋಪಿಗೆ ಹಾಲಮ್ಮನ ತೋಪು, ಆಕೆ ನೆಲಸಿದ್ದ ಮ್ಯಾಗಳಕೇರಿಯಲ್ಲಿ ಆಕೆಯ ಗುಡಿಯಿರುವುದರಿಂದ ಇದನ್ನು ಅವರು ಸಮರ್ಥಿಸಿಕೊಳ್ಳುತ್ತಾರೆ.

ಮತ್ತೊಂದು ರೀತಿ ಜನಪದರ ನಂಬಿಕೆಯಂತೆ ಹಿಂದೆ ಉಚ್ಚಂಗಿ ಬೆಟ್ಟದ ಮೇಲೆ ಸಿದ್ಧರು ವಾಸಿಸುತ್ತಿದ್ದರು. ಅವರು ಸುತ್ತಮುತ್ತಲಿನ ಗ್ರಾಮಗಳಿಂದ ಭಿಕ್ಷೆ ಬೇಡಿಕೊಂಡು ಬರುತ್ತಿದ್ದರು. ಮಾಯ, ಮಾಟ, ಮಂತ್ರ ಮಾಡಿ ಜನರನ್ನು ಭೀತಿಗ್ರಸ್ಥರನ್ನಾಗಿ ಮಾಡಿದ್ದರು. ಇದರಿಂದ ಉಚ್ಚಂಗಿಯ ಮತ್ತು ಸುತ್ತಲಿನ ಜನತೆ ತುಂಬಾ ಭೀತರಾಗಿದ್ದರು. ಈ ಸಂದರ್ಭದಲ್ಲಿ ದೇವತಾ ಸ್ತ್ರೀಯೊಬ್ಬಳು ಈ ಬೆಟ್ಟದ ಮೇಲೆ ವಾಸಿಸಲು ಇಚ್ಛೆಸಿದಳು. ಆಕೆಗೆ ಸಿದ್ಧರ ವಿರೋಧವಿತ್ತು. ಹೇಗೋ ಅವರನ್ನು ಒಪ್ಪಿಸಿ ಇವರ ಜೊತೆಗೆ ಇದ್ದಳು. ಅವರಿಗೆ ಅಡುಗೆ ಮಾಡಿ ನೀಡುತ್ತಿದ್ದಳು. ಒಂದು ಸಲ ಅಡುಗೆಯಲ್ಲಿ ಭಂಗಿಯ ಪುಡಿಯನ್ನು ಬೆರಸಿ ಕುಡಿಸಿದಳು. ಭಂಗಿಯನ್ನು

ಕುಡಿದ ಸಿದ್ಧರು ಇವಳನ್ನು ಮೋಹಿಸಲು ಹೋದರು. ಆಗ ಸಿಟ್ಟಿಗೆದ್ದ ಈ ಸ್ತ್ರೀ ಬೆಟ್ಟದ ಮೇಲೆ ಉಚ್ಚೆಯನ್ನು ಮಾಡಿದಳು. ಈ ಉಚ್ಚೆಯ ರಭಸದಲ್ಲಿ ಸಿದ್ಧರು ತೇಲಿ ಕೆಲವರು ಹತರಾದರು. ಮತ್ತೆ ಕೆಲವರು ಕೆಳಗೆ ಬಿದ್ದು ಓಡಿ ಹೋದರೆಂದು, ಹೀಗೆ ಉಚ್ಚೆಯಿಂದಲೇ ಗುರುತಿಸಿ ಉಚ್ಚಮ್ಮ, ಉಚ್ಚಂಗಿ ಎಂದು ಹೆಸರು ಬಂದಿತೆಂದು ಅಲ್ಲಿನ ಸ್ಥಳೀಯರ ಅಭಿಪ್ರಾಯವಿದೆ.[೧೭]

ಈ ರೀತಿಯಾಗಿ ಉಚ್ಚಂಗಿದುರ್ಗದ ಉಚ್ಚಂಗಮ್ಮನ ಬಗ್ಗೆ ಶಾಸನದಲ್ಲಿ ದಂತಕಥೆ ಹೇಳಲಾಗಿದೆ. ಪೌರಾಣಿಕ ಮತ್ತು ಜನಪದೀಯ ಅಂಶಗಳು ಕೂಡಾ ಈ ರೀತಿ ಕಂಡುಬಂದಿದ್ದು, ಆಕೆಯ ಸ್ಥಳನಾಮದ ಹಿನ್ನೆಲೆಯಲ್ಲಿ ಗುರುತಿಸುತ್ತಾ ಹೋಗುತ್ತೇವೆ. ಇದರಿಂದ ನಾವು ಐತಿಹ್ಯವನ್ನು ತಿಳಿಯಬಹುದು.

ಹರಪನಹಳ್ಳಿ

ಈ ಮುಂಚೆ ಹರಪನಹಳ್ಳಿಯು ಬಳ್ಳಾರಿ ಜಿಲ್ಲೆಯಲ್ಲಿತ್ತು. ನಂತರ ನೂತನವಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾಗಿದ್ದು, ದಾವಣಗೆರೆಯಿಂದ ಉತ್ತರಕ್ಕೆ ೫೦ ಕಿ.ಮೀ ದೂರದಲ್ಲಿದೆ. ದಾವಣಗೆರೆ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ. ಈ ಹರಪನಹಳ್ಳಿಯು ಈ ಹಿಂದೆ ಒಂದು ಅಗ್ರಹಾರವಾಗಿದ್ದಿರಬೇಕು. ಅದರ ಮೂಲ ಹೆಸರು ಬ್ರಹ್ಮಪುರಿ, ಹೊನ್ನಮ್ಮನಹಳ್ಳಿ, ಹರಿಯಣ್ಣ, ಹರಿಯಪ್ಪ, ಪೆರ್ಗಡೆಯ ಹೆಸರಿನಲ್ಲಿ ಬದಲಾವಣೆ ಹೊಂದಿ 'ಹರಪನಹಳ್ಳಿ' ಎಂದಾಯಿತು. ಕೊಟ್ಟೂರಿನ ಉಡುಕೇಶ್ವರ ದೇವಾಲಯದ ಶಾಸನದಲ್ಲಿ ಈ ಹರಿಯಪ್ಪನ ಪ್ರಸ್ತಾಪವಿದೆ. ಪ್ರಾಚೀನ ಕಾಲದ ಗ್ರಾಮಗಳ ಸ್ಥಳನಾಮಗಳು ಹೆಚ್ಚಾಗಿ ಆಳುವ ಅರಸರ ಇಲ್ಲವೇ ದೇವ ದೇವತೆಗಳ ಹೆಸರುಗಳಿಂದ ಉಂಟಾಗಿರುವುವು. ಮುತ್ತಿಗೆ ಗ್ರಾಮದಲ್ಲಿ ದೊರೆತ ದಾಖಲೆಯಂತೆ ಮುತ್ತಿಗೆ ಗ್ರಾಮದ ಕಟ್ಟೆಮನೆಗೆ ಸಂಬಂಧಿಸಿದಂತೆ ಒಂದು ವಿವಾದವನ್ನು ಈ ಹರಿಯಪ್ಪ ಪೆರ್ಗಡೆ ವಂಶಕ್ಕೆ ಸೇರಿದವರು ವಿಚಾರಿಸಿ ತೀರ್ಮಾನ ಕೊಟ್ಟಿದ್ದು ಕಂಡುಬಂದಿದೆ. ಅದು ಈಗಲೂ ಮುತ್ತಿಗೆ ಗ್ರಾಮದಲ್ಲಿ ದೊರಕುವುದು. ಮುತ್ತಿಗೆ ಶಾನಭೋಗರು ಹರಪನಹಳ್ಳಿ ಪಟ್ಟಣದವರೇ ಆಗಿರುವರು, ಹದಿಮೂರನೇ ಶತಮಾನದಲ್ಲಿ ಹರಪನಹಳ್ಳಿ, ಮೂವತ್ತರ ಮುತ್ತಿಗೆ ರಾಜ್ಯದಿಂಥ ಬಾಗಳಿ ರಾಜ್ಯಕ್ಕೆ ಸೇರಿದ್ದು ಎಂದು ಒಂದು ಕಂಚಿನ ಪತ್ರದಿಂದ ತಿಳಿಯುತ್ತದೆ. 'ಹರಿಯಪ್ಪನಹಳ್ಳಿ' ಶ್ರೀಸಾಮಾನ್ಯರ ಆಡು ಮಾತಿನಲ್ಲಿ ಹರಿಯಾತನಹಳ್ಳಿ ಕಾಲಾಂತರದಲ್ಲಿ ಹರಪನಹಳ್ಳಿ ಎಂದು ಕರೆಸಿಕೊಂಡಿದೆ ಎಂಬ ವಿಷಯವನ್ನು ಕು.ಬಾ.ಸದಾಶಿವಪ್ಪ ತಿಳಿಸಿದ್ದಾರೆ.[೧೮] ಡಾ.ಎಂ.ಎಂ.ಕಲಬುರ್ಗಿ ಯವರು ಪ್ರಕಟಿಸಿದ ಬಳ್ಳಾರಿ ಜಿಲ್ಲೆಯ ಕೈಫಿಯತ್ತಿನಲ್ಲಿ 'ಹಾರಪ್ನಹಳ್ಳಿ' 'ಹುರಪ್ನಹಳ್ಳಿ' 'ಹರುಪನಹಳ್ಳಿ' ಸೀಮೆ ಎಂದು ಕರೆದಿದ್ದಾರೆ.

ಆದರೆ ಯಾವುದೇ ಶಾಸನದಲ್ಲಿಯೂ ಕೂಡಾ ಹರಪನಹಳ್ಳಿ ಬಗ್ಗೆ ಕಂಡುಬಂದಿಲ್ಲ. ಜನಸಾಮಾನ್ಯರು ವಿದ್ವಾಂಸರು ಈ ರೀತಿ ತಿಳಿಸಿದ್ದಾರೆ. ಮುತ್ತಿಗೆಯ ಕುಮಾರಸ್ವಾಮಿ ಗುಡಿ ಮುಂದೆ ಒಂದು ಶಾಸನವಿದೆ. ಅದರ ಪ್ರಕಾರ ಕ್ರಿ.ಶ.೧೨೧೪ರಲ್ಲಿ ಹೊಯ್ಸಳರ ಅರಸ ವೀರಬಲ್ಲಾಳನ ಕಾಲದಲ್ಲಿ ಮುತ್ತಿಗೆ ಮೂವತ್ತರ ಮುಖ್ಯ ಪಟ್ಟಣ. ಕೋಗಳಿಯ ಉಪವಿಭಾಗದ್ದಿತು. ಬ್ರಾಹ್ಮಣ ವಿಷ್ಣು ನಾಯಕನ ಪುತ್ರ ಹರಿಯಣ್ಣನ ಹೆಸರಿನಲ್ಲಿ ಸ್ಥಾಪನೆಯಾದಂತೆ ಕಂಡುಬರುತ್ತದೆ. ಹರಿಯಣ್ಣ-ಹರಿಯಪ್ಪನ ಹೆಸರಿನಲ್ಲಿ ಸ್ಥಾಪನೆಯಾದ ಚಿಕ್ಕಹಳ್ಳಿ ಹರಿಯಪ್ಪನ ಹಳ್ಳಿಯಾಗಿ ಮುಂದೆ ಬಾಗಳಿಗೆ ಸೇರಿದೆ. ಈ ಹೆಸರು ಒಬ್ಬ ವ್ಯಕ್ತಿಯ ಹೆಸರನ್ನು ಸಹ ಸೂಚಿಸುತ್ತದೆ. ಹರಿಯಪ್ಪ ಎಂಬ ವ್ಯಕ್ತಿ ಇದ್ದುದರಿಂದ ಹರಪನಹಳ್ಳಿಯಾಗಿತ್ತು ಎನ್ನಬಹುದು.

೫.೪. ಹರಿಹರ ತಾಲೂಕಿನ ಜನಪದ ಐತಿಹ್ಯಗಳು

ಕೂಡಲು(ಲಿ) ಸಂಗಮೇಶ್ವರ-ಹರಿಹರ

ಕೃಷ್ಣಾ ಮಲಪ್ರಭ ನದಿಗಳ ಸಂಗನ ಸ್ಥಾನವಾದ ಕೂಡಲ ಸಂಗಮವು ಪ್ರಸಿದ್ಧ ಪ್ರಾಚೀನ ಪುಣ್ಯಕ್ಷೇತ್ರ, ಎರಡು ನದಿಗಳು ಸೇರುವ ಜಾಗವಾದ್ದರಿಂದ ಅದು 'ಕೂಡಲು' ಹೌದು, 'ಸಂಗಮ'ವೂ ಹೌದು, ಅಲ್ಲಿಯ ದೇವಾಲಯದ ಹೆಸರು ಸಂಗಮೇಶ್ವರ ಬಸವಣ್ಣನವರ ವಚನಾಂಕಿತ 'ಕೂಡಲ ಸಂಗಮದೇವ' ಇದಕ್ಕೆ ಯಾವುದೇ ವಿವರಣೆ ಬೇಕಿಲ್ಲ. 'ಕೂಡಲು' ಅಚ್ಚಗನ್ನಡವಾದರೆ 'ಸಂಗಮ' ಅಚ್ಚ ಸಂಸ್ಕೃತ ಪದ.

ಉತ್ತರ ಕರ್ನಾಟಕದಲ್ಲಿ ಎರಡು ನದಿಗಳು ಸೇರುವ ಹಲವು ಕೂಡಲ ಸಂಗಮಗಳಿವೆ. ಅಲ್ಲೆಲ್ಲ ಸಂಗಮೇಶ್ವರ ದೇವಾಲಯವೂ ಉಂಟು. ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾ ತುಂಗಾಭದ್ರ ನದಿಗಳು ಸೇರುವ ಜಾಗವೇ ಕೂಡಲಿ ಊರು. ಬಳ್ಳಾರಿ ಜಿಲ್ಲೆಯ ಕೂಡಲಿ ಸಮೀಪ ಎರಡು ದೊಡ್ಡ ಹಳ್ಳಗಳು ಸೇರುತ್ತವೆ. ಅಲ್ಲಿ ಹಿಂದೆ ಮಂಟಪ, ಬಸವ ವಿಗ್ರಹ ಇವು ಇದ್ದು, ಅವು ಈಗ ಸುಸ್ಥಿತಿಯಲ್ಲಿಲ್ಲ. ದಾವಣಗೆರೆ ಜಿಲ್ಲೆಯ ಹರಿಹರ ನಗರವೂ ತುಂಗಾಭದ್ರದಡದ ಪ್ರಸಿದ್ಧ ಊರು ಮತ್ತು ಹರಿಹರೇಶ್ವರ ದೇವಾಲಯವಿರುವ ಕ್ಷೇತ್ರ. ಆದರೆ ಅದರ ಹಿಂದಿನ ಹೆಸರು ಕೂಡಲೂರು ಎಂಬುದು ಬಹಳ ಜನಕ್ಕೆ ತಿಳಿಯದು. ೧೨, ೧೩, ೧೪, ೧೫, ೧೬ನೇ ಶತಮಾನಗಳ ಶಾಸನಗಳಲ್ಲಿ ಆ ಊರನ್ನು ಕೂಡಲೂರು ಎಂದೇ ಕರೆದಿದೆ. ಅದಕ್ಕೆ ಕಾರಣ ತುಂಗಾಭದ್ರ ನದಿಗೆ ಹರಿದ್ರಾ ಎಂಬ ಹೊಳೆ(ಸೂಳೆಕೆರೆ ಹಳ್ಳ, ಶಾಗಲೆಹಳ್ಳ ಇತ್ಯಾದಿ ಹಳ್ಳಗಳು ಸೇರುವ ದೊಡ್ಡ ಹೊಳೆ) ಬಂದು ಸೇರುತ್ತದೆ. ಅವೆರಡರ ಸಂಗಮಸ್ಥಾನದಲ್ಲಿ ಸಂಗಮೇಶ್ವರ ದೇವಾಲಯವಿದೆ. ಕೂಡಲೂರು ಹಿಂದೆ ನೂರನಾಲ್ಕು ಬ್ರಾಹ್ಮಣರಿದ್ದ ಅಗ್ರಹಾರವಾಗಿದ್ದು,

ದೊಡ್ಡ ವಿದ್ಯಾಕೇಂದ್ರವು ಆಗಿದ್ದಿತು. ಅಲ್ಲಿ ಹನ್ನೆರಡನೇ ಶತಮಾನಕ್ಕೆ ಮೊದಲೇ ಈಗಿನ ಹರಿಹರೇಶ್ವರ ದೇವಾಲಯ ನಿರ್ಮಾಣವಾಗಿತ್ತು. ಇದು ಸಂಗಮೇಶ್ವರ ದೇವಾಲಯದಿಂದ ಬೇರೆ. ಅದನ್ನು ಶಂಕರ ನಾರಾಯಣ, ಹರಿಶಂಕರ ಎಂಬ ಹೆಸರುಗಳಿಂದಲೂ ಶಾಸನಗಳಲ್ಲಿ ಕರೆದಿದೆ. ಆ ದೇವರ ಹೆಸರಲ್ಲಿ ಶಿವ, ವಿಷ್ಣು, ಇಬ್ಬರ ಹೆಸರೂ ಇವೆ. ಆ ದೇವರ ಶಿಲ್ಪವು ಶಿವ, ವಿಷ್ಣು ಮೂರ್ತಿಗಳ ಎರಡು ಲಕ್ಷಣಗಳನ್ನು ಹೊಂದಿದೆ(ವಿಗ್ರಹವು ತಲೆಯಿಂದ ಮೊಳಕಾಲೀನವರೆಗೆ ಮಾತ್ರ ಇದೆ. ವಿವರಗಳಿಗೆ ನೋಡಿ: ಎಂ.ಚಿದಾನಂದಮೂರ್ತಿ, ಹರಿಹರ ಕ್ಷೇತ್ರ ಮತ್ತು ಹರಿಹರ ಕವಿಯ ಕಾಲ, ಸಂಶೋಧನ ತರಂಗ, ಸಂಪುಟ ೩).

ಅಲ್ಲಿನ ಮೂಲ ಹರಿಹರೇಶ್ವರ ದೇವಾಲಯದ ನಿರ್ಮಾಣ ಕಾಲ ತಿಳಿಯದು.ಅದು ಹನ್ನೆರಡನೆಯ ಶತಮಾನಕ್ಕಿಂತ ಹಿಂದಿನದು ಎಂಬಲ್ಲಿ ಅನುಮಾನವಿಲ್ಲ. ಅದು ತುಂಗಾಭದ್ರ ಹರಿದ್ರಾಗಳು ಸೇರುವ ಸಂಗಮದ ಜಾಗದಿಂದ ಒಂದೆರಡು ಕಿಲೋ ಮೀಟರ್ ದೂರದಲ್ಲಿದೆ. ಅಲ್ಲಿ ಹರಿ ಮತ್ತು ಹರರು ಸಂಗಮಿಸಿದ ದೈವವನ್ನು ಸ್ಥಾಪಿಸಲು ಅದೊಂದು ನದಿಗಳ ಸಂಗಮ ಸ್ಥಾನವೂ, ಕೂಡಲೂ ಆಗಿದ್ದುದು ಕಾರಣ. ಅಲ್ಲಿ ಆ ದೇವಾಲಯ ನಿರ್ಮಿಸುವ ವ್ಯಕ್ತಿಗೆ ಸೂಚನೆ ಬರಲು ಅದು ಎರಡು ಹೊಳೆಗಳು ಸೇರುವ ಜಾಗ ಆಗಿದ್ದುದು ಎಂಬಲ್ಲಿ ಅನುಮಾನವಿಲ್ಲ. ಕ್ರಿ.ಶ.೧೨೨೪ರ ಪೋಲಾಳ್ವ ದಂಡನಾಯಕನ ಹರಿಹರದ ಶಾಸನವು ಹರಿ, ಹರ ಅಭೇದವನ್ನ ಮಾರ್ಮಿಕವಾಗಿ ಹೀಗೆ ವರ್ಣಿಸುತ್ತದೆ.

ಹರಿಯಿಂದಂ ಬಿಟ್ಟು ದೈವಂ ಧರಣಿ ತಳದೊಳಿಲ್ಲೆಂದು ಪೇಳ್ವರ ಕೆಲಬರ್
ಹರನಿಂದಂ ಬಿಟ್ಟು ದೈವಂ ಧರಣಿ ತಳದೊಳಿಲ್ಲೆಂದು ಪೇಳ್ವರ ಕೆಲಬರ್
ನರರಾ ಸಂದೇಹಮಂ ಪಿಂಗಿಸಲತಿ ಶಯದಿಂ ಕೂಡಲೂರಲ್ಲಿ ಶೋಭಾ
ಕರಮಪ್ಪಂ ತೊಂದೆ ರೂಪಂ ತಳೆದ ಹರಿಹರು ಕೂರ್ತು ರಕ್ಷಿಕ್ಕೆ ನಮ್ಮಂ[೧೯]

ಹರಿಯನ್ನು ಬಿಟ್ಟರೆ ಲೋಕದಲ್ಲಿ ಬೇರೆ ದೈವ ಇಲ್ಲ ಎಂದು ಕೆಲವರು ಹರನನ್ನು ಬಿಟ್ಟರೆ ಬೇರೆ ದೈವ ಇಲ್ಲ ಎಂದು ಕೆಲವರು ವಾದಿಸುತ್ತಾರೆ. ಆ ನರರ ಸಂದೇಹವನ್ನು ಹೋಗಲಾಡಿಸಲು ಹರಿಹರನು ಒಂದೇ ರೂಪದಲ್ಲಿ ತಳೆದು ಅವತರಿಸಿದನು. ಕೂಡಲೂರಿನ 'ಹರಿಹರೇಶ್ವರ'ನು ಒಂದು ರೀತಿಯಲ್ಲಿ ಸಂಗಮೇಶ್ವರನೂ ಹೌದು.

ಪೌರಾಣಿಕವಾಗಿ ಹರಿಹರ: ಹರಿಹರ ದೇವರಿಗೆ ಸ್ವಯಂಭುಶಂಕರ ನಾರಾಯಣ, ಹರಿಹರರು ಹಾಗೂ ತುಂಗೆ-ಭದ್ರೆಯರು ಕೂಡಿರುವುದರಿಂದ ಪೂರ್ವದಲ್ಲಿ ಇದರ ಹೆಸರು ಕೂಡಲೂರೆಂದು ಪುರಾತನ ಈ ಪುಣ್ಯಕ್ಷೇತ್ರ ಕಾಶಿಗಿಂತಲೂ ಮಿಗಿಲಾದುದೆಂದು ಸ್ಕಂದ ಪುರಾಣದಲ್ಲಿ ಉಲ್ಲೇಖಗೊಂಡಿದೆ. ಈ ಪ್ರದೇಶ ದಂಡಕಾರಣ್ಯವೆಂದು ಗುಹಾಸುರ ನೆಲೆಸಿದ್ದರಿಂದ ಗುಹಾರಣ್ಯ

ಕ್ಷೇತ್ರವೆಂದೂ ಉಲ್ಲೇಖಿಸಿದೆ. ಗುಹ ಒಬ್ಬ ಋಷಿಕುಮಾರ. ಇಡೀ ವಿಶ್ವವನ್ನೇ ಜಯಿಸಬೇಕೆನ್ನುವ ಮಹತ್ವಾಕಾಂಕ್ಷಿಯಿಂದ ತುಂಗಾಭದ್ರ ನದಿ ತೀರದಲ್ಲಿ ಉಗ್ರ ತಪಸ್ಸು ಮಾಡಿ, ತನಗೆ ಯಾರಿಂದಲೂ ಮರಣ ಬರ ಕೂಡದೆಂದು ಬ್ರಹ್ಮನಿಂದ ವರಪಡೆದು ಅಹಂಕಾರದಿಂದ ಕಂಟಕ ಪ್ರಾಯನಾಗಿ ಎಲ್ಲರನ್ನು ಕಾಡತೊಡಗಿದಾಗ ಈ ಜಗತ್ತಿನ ರಕ್ಷಣೆ ಮಾಡುವಂತೆ ತ್ರಿಮೂರ್ತಿಗಳಲ್ಲಿ ದೇವಾನು ದೇವತೆಗಳು ಮೊರೆಯಿಟ್ಟಾಗ ಹರಿ-ಹರರು ಭಕ್ತರಿಗೆ ಅಭಯ ಹಸ್ತನೀಡಿ ಗುಹಾಸುರನನ್ನು ಸಂಹರಿಸಿ ಆತನ ಕೋರಿಕೆಯಂತೆ ಹರಿ-ಹರರು ಒಂದುಗೂಡಿ ಹರಿಹರೇಶ್ವರರಾಗಿ ಈ ಕ್ಷೇತ್ರದಲ್ಲಿ ನೆಲೆಸಿದ್ದರಿಂದ ಹರಿಹರ ದೇವರಪುರ ಎಂದು ಉಲ್ಲೇಖಗೊಂಡಿದೆ. ಈ ಹರಿದ್ರಾ ನದಿಗೆ ಇಂದು ಸೊಪ್ಪಿನ ಹಳ್ಳ, ಹಿರೇಹಳ್ಳ, ಮಾವಿನಹೊಳೆ ಹಳ್ಳ, ಸೂಳೆಕೆರೆಹಳ್ಳ, ಕರ್ಲಹಳ್ಳಿ, ಶ್ಯಾಗಲೆಹಳ್ಳ ಎಂಬಿತ್ಯಾದಿ ಹೆಸರಿನಿಂದ ಜನ ಕರೆಯುತ್ತಿದ್ದು, ಶಾಸನೋಕ್ತವಾಗಿ ಅದಕ್ಕೆ 'ಹರಿದ್ರಾ ನದಿ' ಎಂದು ಹೆಸರಿರುವುದು ಬಹು ಜನಕ್ಕೆ ತಿಳಿದೇ ಇಲ್ಲ.[೨೦]

೫.೫. ಹೊನ್ನಾಳಿ ತಾಲೂಕಿನ ಜನಪದ ಐತಿಹ್ಯಗಳು

ದಾವಣಗೆರೆ ಜಿಲ್ಲೆಯ ರಚನೆಯೊಂದಿಗೆ ಅನೇಕ ಧಾರ್ಮಿಕ, ಪೌರಾಣಿಕ, ಐತಿಹಾಸಿಕ ಕ್ಷೇತ್ರಗಳು ಹೊಸದಾಗಿ ಸಂಗಮವಾಗಿ ಈ ಜಿಲ್ಲೆಗೆ ತನ್ನದೇ ಆದ ಹೊಸ ಮೆರಗನ್ನು ನೀಡಿವೆ. ಅಂತಹ ಒಂದು ನೆಲೆ ದಕ್ಷಿಣ ಕಾಶಿಯೆಂದು ಹೆಸರು ಮಾಡಿದ ಹೊನ್ನಾಳಿ ತಾಲೂಕಿನ ಸುಕ್ಷೇತ್ರ ತೀರ್ಥರಾಮೇಶ್ವರ, ಬೆಳಗುತ್ತಿಯಿಂದ ೨ ಕಿ.ಮೀ ದೂರದಲ್ಲಿ ಶ್ರೀ ತೀರ್ಥರಾಮೇಶ್ವರ ಕ್ಷೇತ್ರವಿದೆಯೆಂದು ಬೆಳಗುತ್ತಿಯಲ್ಲೇ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಹು ಸುಂದರ ಮಹಾದ್ವಾರ ನಿರ್ಮಿಸಿದ್ದಾರೆ.

ತೀರ್ಥರಾಮೇಶ್ವರ ಕ್ಷೇತ್ರ

ಹಿಂದೆ ಹೇಳಿದಂತೆ ದೇವಸ್ಥಾನ ಬೆಟ್ಟದ ಮೇಲಿದ್ದು, ಅದನ್ನು ಏರಲು ೨೭೦ ಮೆಟ್ಟಿಲುಗಳಿವೆ. ಮೆಟ್ಟಲೇರುವ ಮುನ್ನ ಕೆಳಗಡೆ ಒಂದು ಬೃಹತ್ ನಂದಿವಿಗ್ರಹವನ್ನು ಈಚೆಗೆ ಸ್ಥಾಪಿಸಲಾಗಿದೆ. ಮೆಟ್ಟಲೇರಿದ ತಕ್ಷಣ ನೇರವಾಗಿ ದೇವಸ್ಥಾನದ ಒಳಗೆ ಹೋಗುವಂತಿಲ್ಲ. ದೇವಾಲಯದ ಎಡಗಡೆ ಇರುವ ಕಾಶೀ ತೀರ್ಥದಲ್ಲಿ ನೀರು ಪಡೆದು ಕೈಕಾಲು ತೊಳೆದುಕೊಂಡು ದೇವಾಲಯ ಪ್ರವೇಶಿಸಬೇಕು. ಇಲ್ಲಿ ಕಾಶಿ ತೀರ್ಥ ಉದ್ಭವವಾಗಿರುವ ಬಗ್ಗೆ ಮತ್ತು ಈ ದೇವಸ್ಥಾನಕ್ಕೆ ತೀರ್ಥರಾಮೇಶ್ವರ ದೇವಸ್ಥಾನ ಎಂದು ಹೆಸರಿಸುವ ಬಗ್ಗೆ ಸ್ಥಳೀಯವಾಗಿ ಒಂದು ಕಥೆ ಪ್ರಚಾರದಲ್ಲಿದೆ.

ತ್ರೇತಾಯುಗದಲ್ಲಿ ಶ್ರೀರಾಮಚಂದ್ರ ತನ್ನ ತಂದೆಯು, ತನ್ನ ಚಿಕ್ಕಮ್ಮ ಕೈಕೆಗೆ ಕೊಟ್ಟ ವಚನ ಪಾಲಿಸಲು ೧೪ ವರ್ಷ ವನವಾಸ ಕೈಗೊಂಡಾಗ, ಈ ಕ್ಷೇತ್ರಕ್ಕೆ ಪತ್ನಿ ಸೀತಾದೇವಿ,

ಸಹೋದರ ಲಕ್ಷ್ಮಣ ಒಡಗೂಡಿ ಬಂದಿದ್ದನಂತೆ. ಆ ವೇಳೆಗೆ ಸೀತಾಮಾತೆ ಮೈಲಿಗೆಗೆ ಒಳಗಾಗಿ ಸ್ನಾನಕ್ಕಾಗಿ ನೀರು ಬೇಡಿದಳೆಂದು, ಅಣ್ಣ-ತಮ್ಮಂದಿರಿಬ್ಬರೂ ಎಷ್ಟು ಹುಡುಕಿದರೂ ಆ ಪ್ರಾಂತ್ಯದಲ್ಲಿ ನೀರು ಸಿಗದಿದ್ದಾಗ, ಶ್ರೀರಾಮ ಗಂಗೆಯನ್ನು ಧ್ಯಾನಿಸಿ ಬಾಣ ಹೂಡಿ ಭೂಮಿಗೆ ಬಿಟ್ಟಾಗ, ಕಾಶಿಯಲ್ಲಿ ಹರಿಯುತ್ತಿದ್ದ ಗಂಗೆ ಇಲ್ಲಿ ಪ್ರತ್ಯಕ್ಷಳಾದಳೆಂದು ಆ ನೀರಿನಲ್ಲಿ ಸೀತಾ ಮಾತೆ ಪದ್ಧತಿಯಂತೆ ಮಣ್ಣಿನಲ್ಲಿ ಶಿವಲಿಂಗ ಮಾಡಿ ಕಾಡಿನಲ್ಲಿ ದೊರೆತ ಹೂವು ಮತ್ತು ಹೊಸದಾಗಿ ಸಿಕ್ಕ ಗಂಗೋದಕದಿಂದ ಅಭಿಷೇಕ ಪೂಜಾದಿಗಳನ್ನು ಮಾಡಿದನೆಂದೂ, ಮುಂದೆ ಆ ಶಿವಲಿಂಗವೇ ಕಲ್ಲಾಗಿ ತೀರ್ಥರಾಮೇಶ್ವರ ಎಂದು ಪ್ರಸಿದ್ಧಿ ಪಡೆಯಿತೆಂದೂ ಕಥೆ ಇದೆ.[೨೧] ಈ ಕಥೆಯ ಸತ್ಯಾಸತ್ಯತೆ ಏನೇ ಇರಲಿ, ಈಗಲೂ ಈ ಸಣ್ಣ ಕೊಳದಲ್ಲಿ ಎಲ್ಲಿಂದಲೋ ನಿರಂತರ ನೀರು ಹರಿದು ಬರುತ್ತಿರುವುದು ಸತ್ಯ ಸಂಗತಿ. ಈ ನೀರಿನ ಮೂಲ ಇಂದಿಗೂ ನಿಗೂಢವಾಗಿದ್ದು, ನದಿ ಮೂಲ, ಋಷಿ ಮೂಲ ಹುಡುಕಬಾರದೆಂಬ ಆಯೋಕ್ತಿಯಂತೆ ಇದನ್ನು ಯಾರೂ ಈವರೆಗೆ ಪರೀಕ್ಷಿಸಿಲ್ಲ, ಬಹುಶಃ ಬೆಟ್ಟ ಒಳಗಿನ ಯಾವುದೋ ನೀರಿನ ಸೆಲೆ ಇಲ್ಲಿ ನಿರಂತರ ಹರಿದು ಬರುತ್ತಿದ್ದು, ಅದಕ್ಕೆ ದೈವತ್ವದ ಮೆರಗು ಕೊಡಲಾಗಿದೆ. ಇನ್ನೊಬ್ಬರ ಹೇಳಿಕೆಯಂತೆ ಕಾಶಿಯಲ್ಲಿ ಕಾಣೆಯಾಗಿದ್ದ ಸಾಧು ಓರ್ವರ ದಂಡ ಈ ಕೊಳದಲ್ಲಿ ಕಂಡಿತಂತೆ ಕಾಶಿಯಿಂದ ನೀರಿನಲ್ಲಿ ಹರಿದು ತನ್ನ ದಂಡ ಇಲ್ಲಿಗೆ ಬಂದಿತೆಂಬ ಆ ಸಾಧುವಿನ ಹೇಳಿಕೆಯಂತೆ ಇದಕ್ಕೆ ಕಾಶಿ ತೀರ್ಥ ಎಂದು ಕರೆಯುತ್ತಾರೆ. ಈ ತೀರ್ಥ ಮಾನವನ ಪಾಪಕರ್ಮ ತೊಳೆಯುವ ತೀರ್ಥ ಶ್ರೀರಾಮನ ಸ್ಪರ್ಶ ಪಡೆದ ತೀರ್ಥ, ಜಗತ್‌ರಕ್ಷಕರಾದ ತ್ರಿಮೂರ್ತಿಗಳ ಸಾನಿಧ್ಯ ಕ್ಷೇತ್ರ ಎಂದು ಹೆಸರಾಗಿ ಇದು ತೀರ್ಥರಾಮೇಶ್ವರ ಎಂದಾಗಿದೆ.

ಹೊನ್ನಾಳಿ ಸ್ಥಳನಾಮದ ಬಗ್ಗೆ

ಶ್ರೀಶೈಲ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಒಡೆಯ ಶಂಕರ ಶಿವಾಚಾರ್ಯ ಮಹಾಸ್ವಾಮಿಗಳವರು ಘನಕಾರ್ಯ ನಿಮಿತ್ತ ಶ್ರೀಮದ್ ರಂಭಾಪುರಿಗೆ ಆಗಮಿಸಿದ್ದಾಗ(ಈಗಿನ ಹೊನ್ನಾಳಿ) ತುಂಗಾಭದ್ರಾ ನದಿಯನ್ನು ದಾಟಬೇಕಿತ್ತು. ಆದರೆ ಹೊಳೆಯಲ್ಲಿ ಏರುಪ್ರವಾಹ ಇದ್ದುದರಿಂದ ಅಂಬಿಗರು ಹೊಳೆ ಇಳಿಯುವವರೆಗೆ ಸ್ವಲ್ಪ ಕಾಯಬೇಕೆಂದಾಗ ಶ್ರೀಗಳು ಹೊಳೆಯ ನೀರಿನ ಮೇಲೆ ಕಂಬಳಿ ಹಾಸಿ ಕುಳಿತು ಯೋಗ ದಂಡದಿಂದ ಹುಟ್ಟು ಹಾಕುತ್ತ ನದಿದಾಟಿ ಆಚೆದಂಡೆಯಲ್ಲಿದ್ದ ಹಳ್ಳ ತಲುಪಿ ಒಣಗಿದ್ದ ಒಂದು ಅರಳಿ ಮರದಡಿಗೆ ಸ್ವಲ್ಪ ವಿಶ್ರಾಂತಿಗೆ ಕುಳಿತಾಗ ಇದನ್ನು ಕಣ್ಣಾರೆ ಕಂಡ ಅಂಬಿಗರು ಇವರ ಮಹಿಮೆಯನ್ನು ಕೊಂಡಾಡುತ್ತಿದ್ದಾಗ ಹಳ್ಳಿಯ ಕೆಲ ಕಿಡಿಗೇಡಿಗಳು ಸ್ವಾಮಿಗಳ ಬಳಿಗೆ ಬಂದು ಸ್ವಾಮಿಗಳೇ ಅಂಬಿಗರ ಮಾತು ನಿಜವಾಗಿದ್ದರೆ ನೀವು ಕುಳಿತಿರುವ ಈ ಒಣಗಿದ ಮರವನ್ನು

ಚಿಗುರೊಡೆಯುವಂತೆ ಮಾಡಬೇಕು ಎಂದಾಗ ಸ್ವಾಮಿಗಳು ಪಟ್ಟ ಮಹೋತ್ಸವವನ್ನು ಮುಗಿಸಿಕೊಂಡು ಬಂದ ಮೇಲೆ ನಿಮ್ಮ ಮಾತಿನಂತೆ ನಡೆಸುತ್ತೇನೆ ಎಂದು ಹೇಳಿದರು. ಅದರಂತೆ ಅವರು ಹಿಂತಿರುಗಿ ಬಂದಾಗ ನೆರೆದ ಭಕ್ತರೆದುರು ಸ್ವಾಮಿಗಳು ತಮ್ಮ ಪೂಜಾದಿಗಳನ್ನು ಮುಗಿಸಿ ತಮ್ಮ ಯೋಗದಂಡ ಹಿಡಿದು ಒಣಗಿದ ಅರಳಿ ಮರದ ಮಂತ್ರಾಕ್ಷತೆಯನ್ನು ಮರಕ್ಕೆ ಹಾಕದರು. ಜನ ನೋಡುತ್ತಿರುವಂತೆಯೇ ಒಣಗಿದ ಅರಳಿ ಮರ ಚಿಗುರೊಡೆದು ಹೊನ್ನಿನ ಮಳೆ ಸುರಿಯಿತಂತೆ. ಆಗ ಪರೀಕ್ಷಕರು ಸ್ವಾಮಿಗಳ ಮಹಿಮೆಯನ್ನು ಕೊಂಡಾಡಿದರಂತೆ. ಅಂದಿನಿಂದ ಬಿದಿರಹಳ್ಳಿಗೆ ಹೊನ್ನರಳಿ ಎಂದು ಕ್ರಮೇಣ ಹೊನ್ನಾಳಿ ಎಂದು ಹೆಸರಾಯಿತಂತೆ.[೨೨]

ಇನ್ನೊಂದು ಹೇಳಿಕೆಯಂತೆ ಒಬ್ಬ ಪಾಳೆಯಗಾರ ಜಿಂಕೆಯನ್ನು ಬೇಟೆಯಾಡುತ್ತಾ ಅಟ್ಟಿಸಿಕೊಂಡು ಬಂದಾಗ ಜಿಂಕೆ(ಎರಳೆ) ನೆಲ ಕೆರೆದು ಓಡಿ ಹೋಯಿತಂತೆ ಇದ್ಯಾಕೆ ಹೀಗೆ ನೆಲ ಕೆರೆಯಿತು ಎಂದು ಪಾಳೆಯಗಾರ ಎರಳೆ ಕೆರೆದ ನೆಲವನ್ನು ಅಗೆದಾಗ ಅಲ್ಲಿ ಪುರಾತನವಾದ ಶ್ರೀ ಮಲ್ಲಿಕಾರ್ಜುನ ದೇವಾಲಯ ತೋರಿ ಬಂದಿತಂತೆ. ಆ ಪಾಳೆಯಗಾರ ಈ ಪ್ರದೇಶದಲ್ಲಿ ಕಂದಕ ತೋಡಿಸಿ, ಕೋಟೆ ಕಟ್ಟಿಸಿ ಹೊನ್ನ ಎರಳೆ ಎಂದು ಹೆಸರಿಟ್ಟನಂತೆ ಮುಂದೆ ಹೊನ್ನಾಳಿ ಎಂದಾಯಿತಂತೆ. ಈ ಹೊನ್ನಾಳಿಗೆ ಹತ್ತಿರದಲ್ಲಿ ಚಿನ್ನವೂ ದೊರೆಯುತ್ತಿದ್ದುದರಿಂದ ಹೊನ್ನಹಳ್ಳಿ, ಹೊನ್ನುಹಳ್ಳಿ, ಹೊನ್ನಿನಹಳ್ಳಿ, ಹೊನ್ನಾಳಿ ಈ ಎಲ್ಲಾ ಐತಿಹ್ಯ ದಂತಕಥೆ ಪವಾಡಗಳಿಂದ ಬಿದಿರಿ, ಬಿದಿರಹಳ್ಳಿ, ಹೊನ್ನರಳಿ, ಹೊನ್ನಹಳ್ಳೀ, ಹೊನ್ನಾಳಿಯಾಗಿದೆ.

೫.೬. ಜಗಳೂರು ತಾಲೂಕಿನ ಜನಪದ ಐತಿಹ್ಯಗಳು

ಚಿತ್ರದುರ್ಗ ಜಿಲ್ಲೆಯ ಒಂಬತ್ತು ತಾಲೂಕುಗಳಲ್ಲಿ ಜಗಳೂರು ತಾಲೂಕು ಒಂದಾಗಿದೆ. ಕ್ರಿ.ಶ.೧೮೮೨ರವರೆಗೆ ಕಣಕುಪ್ಪೆ ತಾಲೂಕಿಗೆ ಒಳಪಟ್ಟಿದ್ದು, ಕ್ರಿ.ಶ.೧೮೮೬ರಲ್ಲಿ ಸ್ವತಂತ್ರ ತಾಲೂಕು ಕೇಂದ್ರವಾಯಿತೆಂದು ಸಿಬಗೂರು ಶಾಸನ ತಿಳಿಸುತ್ತದೆ. ಇತ್ತೀಚೆಗೆ ದಾವಣಗೆರೆ ಜಿಲ್ಲೆಗೆ ಸೇರಿದ ತಾಲೂಕಾಗಿದೆ.

ಕಲ್ಲೇದೇವರಪುರ

ಜಗಲೂರಿಗೆ ಹದಿನೈದು ಕಿ.ಮೀ. ದೂರದಲ್ಲಿರುವ ಕಲ್ಲೇದೇವರಪುರ ಜಿಲ್ಲೆಯ ಪುಣ್ಯಕ್ಷೇತ್ರಗಳಲ್ಲಿ ಅತ್ಯಂತ ಮಹತ್ವದ ಸ್ಥಳವೆನಿಸಿದೆ. ಇಲ್ಲಿಯ ಕಲ್ಲೇಶ್ವರ ದೇವಸ್ಥಾನ ಬಹಳ ಪ್ರಸಿದ್ಧವಾದದ್ದು. ಕಲ್ಲೇಶ್ವರ ಸ್ವಾಮಿ ಸ್ವಯಂಭೂ ಕಲ್ಲಿನಾಥನೆಂದು ಉದ್ಭವನಾಗಿದ್ದಾನೆ. ಹಿಂದೆ ಈ ಗ್ರಾಮಕ್ಕೆ ಏನು ಹೆಸರಿದ್ದಿತೋ ತಿಳಿಯದು ಆದರೆ ಕಲ್ಲೇಶ್ವರ ಸ್ವಾಮಿಯಿಂದ ಈ ಊರಿಗೆ ಕಲ್ಲೇದೇವರ ಪುರವೆಂದು ಹೆಸರಾಗಿದೆ.

ಹಿಂದೆ ದೇವಾಲಯದ ಪ್ರದೇಶವೆಲ್ಲ ಕಾಡುಪೆಳೆಯಿಂದ ಕೂಡಿದ್ದು ಪಕ್ಕದ ಬಯಲಿನಲ್ಲಿ ಮಲ್ಲಸೆಟ್ಟಿಯೆಂಬ ವ್ಯಾಪಾರಿಯೊಬ್ಬ ಪೆಳೆಯಿಂದ ಕಟ್ಟಿಗೆ ತಂದು, ನೆಲದಲ್ಲಿ ಹೂತಿದ್ದ ಲಿಂಗದಂತಹ ಕಲ್ಲಿನ ಪಕ್ಕಕ್ಕೆ ಇನ್ನೆರಡು ಕಲ್ಲುಗಳನ್ನಿಟ್ಟು ಒಲೆಹೂಡಿ ಅಡಿಗೆ ಮಾಡಿಕೊಳ್ಳಲು ಪ್ರಯತ್ನಿಸಿದಾಗ, ಅನ್ನದ ಮಡಿಕೆಯಲ್ಲಿ ಕುದಿಯುವ ಅನ್ನ, ಅರಿಷಿಣ, ಕುಂಕುಮ ರಕ್ತದಂತೆ ಕಾಣಲು ವ್ಯಾಪಾರಿ ಗಾಬರಿಯಿಂದ ದೇವರೇ ಎಂದು ದೇವರನ್ನು ನೆನಸಿದರಂತೆ, ಆಗ ದೇವರು ಚಿಕ್ಕ ಹುಡುಗನೊಬ್ಬನಲ್ಲಿ ಮೈದುಂಬಿ ಅಪ್ಪಣೆ ಕೊಡಿಸಿದನಂತೆ. "ನೀನು ಒಲೆ ಗುಂಡೆಂದು ಭಾವಿಸಿದ ನಾನು ಒಲೆ ಗುಂಡಲ್ಲ, ನಾನು ಕಲ್ಲಿನಾಥ ಕಲ್ಲೇಶ್ವರ ಉದ್ಭವನಾಗಿದ್ದೇನೆ" ಎಂದಾಗ ವ್ಯಾಪಾರಿ ಅನನ್ಯ ಭಕ್ತಿಭಾವದಿಂದ ಜಾಲಿ ಪೆಳೆಯಿಂದ ನಾಲ್ಕು ಪೆಳೆ ತಂದು ಗುಂಡಿಕಟ್ಟಿ ಪೂಜಿಸಿ "ದೇವ ನನ್ನನ್ನು ಕ್ಷಮಿಸು ಅನುಗ್ರಹಿಸು" ಎಂದು ಬೇಡಿದಾಗ ಒಡಮೂಡಿದ ಕಲ್ಲಿನ ಶಿವಲಿಂಗದಿಂದ ಒಂದು ಚಕ್ಕದ ತುಡೊಂದು ಸಿಡಿದು ದೇವರು ಹೇಳಿದನಂತೆ, "ನೀನು ಮಾಡುವ ವ್ಯಾಪಾರದಲ್ಲಿ ಈ ಕಲ್ಲಿನಿಂದಲೇ ತೂಗಿ ಕೊಡು ಮಂಗಳವಾಗುತ್ತದೆ ಎಂದು. ವ್ಯಾಪರಿಗೆ ಮಂಗಳವಾಗಿ ಆತ ಗುಡಿ ಕಟ್ಟಿಸಿದನೆಂದು, ಅಂದಿನಿಂದ ಕಲ್ಲೇದೇವಪುರ ಎಂದು ಹೆಸರಾಯಿತೆಂದು ದಂತಕಥೆ ಈ ಸ್ಥಳಕ್ಕೆ ಇದೆ ಎಂದು ಹೇಳುತ್ತಾರೆ.[೨೩]

ಜಗಲೂರು

ಜಗಲೂರು ಎಂದು ಹೆಸರು ಬರಲು ಕಾರಣ ಜಗಪ್ರಕಾಶ, ಹೊಳಪು, ಲೋಕ, ಜಗಳ=ಕಲಹಮಾಡು, ಜಗಳ=ಕಂಚಿನ ತಾಳ, ಕಂಸಾಳೆ ಎಂದೆಲ್ಲ ಅರ್ಥ, ಜಗಳ ಅಥವಾ ಕಲಹ ಮಾಡಲಿಕ್ಕೆ ಆಯಕಟ್ಟಿನ ಸ್ಥಳವಾಗಿತ್ತೇ? ಇಲ್ಲಿ ಸುಮಾರು ಇನ್ನೂರುವರ್ಷಗಳ ಹಿಂದೆ ಕಟ್ಟಿಸಿದ 'ಜೋಗಪ್ಪ' ಎನ್ನುವ ಜೋಗಿ ದೇವರ ದೇವಾಲಯವಿದೆ. ಅದಕ್ಕೆ ಸಂಬಂಧಿಸಿದ ಶಾಸನವಿದೆ. ಈ ಜೋಗಪ್ಪ ಒಬ್ಬ ಋಷಿಯಾಗಿದ್ದನಂತೆ. ತ್ರಿಶೂಲ, ಕಮಂಡಲ, ಡಮರುಗಳನ್ನು ಹಿಡಿದಿರುವ ಮೂರೂವರೆ ಅಡಿ ಎತ್ತರದ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಈ ಜೋಗಪ್ಪನಿಂದ ಜಗಳೂರು ಎಂದು ಹೆಸರು ಬರಲು ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಆದರೆ ಈ ಸ್ಥಳಕ್ಕೆ ಈಗಲೂ ಕೂಡಾ ಜಗಳೂರು ಜಗಲೂರು ಎಂದು ಕರೆಯುತ್ತಾರೆ.[೨೪]

ಡಾ.ಎಸ್.ವೈ.ಸೋಮಶೇಖರ ಅವರು ಈ ಜಗಲೂರು ಪದ ಹೇಗೆ ಬಂದಿತು ಎಂಬುದನ್ನು ತಿಳಿಸಿದ್ದಾರೆ. ಇದು ತಾಲೂಕಿನ ಕೇಂದ್ರಪಟ್ಟಣ. ೧೮೮೬ರಲ್ಲಿ ಜಗಲೂರು ಸ್ವತಂತ್ರ ತಾಲೂಕಾಗಿ ರೂಪಗೊಂಡಿತು. ಕ್ರಿ.ಶ.೧೫೨೬ರ ನಿಬಗೂರು ಶಾಸನದಲ್ಲಿ 'ಜಗಲೂರು ಸೀಮೆ' ಎಂದು ಹಾಗೂ ಜಗಲೂರಿನ ಜೋಗಿದೇವರ ದೇವಸ್ಥಾನದ ಭಾವಣಿ ಕಲ್ಲಿನ ಮೇಲೆ 'ಜಗಲೂರ

ನಾಡು' ಎಂಬ ಉಲ್ಲೇಖ ದೊರೆಯುತ್ತದೆ. ಈ ಸ್ಥಳನಾಮ ನಿಷ್ಪತ್ತಿಯನ್ನು ಕೆಲವು ಜನಪದೀಯ ಅಂಶಗಳ ಹಿನ್ನೆಲೆಯಲ್ಲಿ ತಿಳಿಯಬಹುದು.

ಜಗಳ+ಊರು–ಜಗ–ಪ್ರಕಾಶ, ಹೊಳಪು, ಲೋಕ, ಜಗಳ–ಕಲಹ ಮಾಡು, ಕಿತ್ತಾಡು ಎಂಬರ್ಥಗಳಿವೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಚಿತ್ರದುರ್ಗ ಪಾಳೆಯಗಾರರಿಗೂ ಮತ್ತು ಹರನಪನಹಳ್ಳಿ ಪಾಳೆಯಗಾರರಿಗೂ ಯುದ್ಧ ಮಾಡಲಿಕ್ಕೆ ಜಗಲೂರು ಸಮೀಪದ ಸ್ಥಳವಾದ್ದರಿಂದ ಹಾಗೂ ಜಗಳ ಅಥವಾ ಕಲಹ ಮಾಡಲು ಆಯಕಟ್ಟಿನ ಸ್ಥಳವಾದ್ದರಿಂದ ಜಗಳದ+ಊರು= ಜಗಲೂರು ಎಂದು ಪರಿವರ್ತನೆಯಾಯಿತೆಂಬ ಒಂದು ಐತಿಹ್ಯವಿದೆ.

ಮತ್ತೊಂದು ಅಭಿಪ್ರಾಯದ ಪ್ರಕಾರ ಇಲ್ಲಿ ಜೋಗಪ್ಪ ಎನ್ನುವ ಜೋಗಿ ದೇವರ ದೇವಾಲಯವು ಸಂತೆ ಮೈದಾನದ ರಸ್ತೆಯ ಪಕ್ಕದಲ್ಲಿದೆ. ಈ ದೇವಾಲಯವನ್ನು ಸುಮಾರು ಎರಡು ನೂರು ವರ್ಷಗಳ ಹಿಂದೆ ನಾಡಕುಲಕರ್ಣಿ ಪಟ್ಟೆಯಲ್ಲಪ್ಪ ರಚಿಸಿದ್ದರ ಬಗ್ಗೆ ದೇವಾಲಯದ ಛಾವಣಿ ಶಿಲಾಶಾಸನ ತಿಳಿಸುತ್ತದೆ. ಈ ಜೋಗಪ್ಪನಿಂದ ಈ ಜಗಲೂರು ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಇನ್ನೊಂದು ಅಭಿಪ್ರಾಯದ ಪ್ರಕಾರ ಜಗಳೂರಜ್ಜ ಎಂಬ ಹೆಸರಿನ ಪಾಪೆ ದೇವರ ಗುಡಿ ಜಗಲೂರಿನ ಹೊರ ಕೆರೆಯಲ್ಲಿದೆ. ಜಗಳೂರಜ್ಜನಿಂದ ಈ ಹೆಸರು ಬಂದಿರಬಹುದೆಂದು ಅಭಿಪ್ರಾಯವಿದೆ. ಈ ಎಲ್ಲಾ ಜನಪದ ಹೇಳಿಕೆಗಳಿಗೂ ಜಗಲೂರು ಸ್ಥಳ ಹೆಸರಿಗೂ ಸ್ಪಷ್ಟವಾಗಿ ವಿವರಣೆಯಲ್ಲವೆನಿಸುತ್ತದೆ. ಕಾರಣವೆಂದರೆ ಕ್ರಿ.ಶ.೧೫೨೮ರ ನಿಬಗೂರು ಶಾಸನದಲ್ಲಿ 'ಜಗಲೂರು ಸೀಮೆ' ಎಂದು ಉಲ್ಲೇಖಗೊಂಡಿದ್ದು, ಈ ಮೇಲಿನ ಅಭಿಪ್ರಾಯಗಳೆಲ್ಲವು ಈ ಶಾಸನ ಕಾಲಾವಧಿಯ ನಂತರ ಬಂಧಿರುವುದರಿಂದ ಈ ಜೋಗಪ್ಪ ದೇವರಿಂದ, ಜಗಳೂರಜ್ಜನಿಂದ ಹಾಗೂ ಜಗಳವಾಡಲು ಯೋಗ್ಯವಾದ ಸ್ಥಳ ಎಂದು ಹೇಳಿರುವುದು ಜಗಲೂರು ಹೆಸರಿನ ನಿಷ್ಪತ್ತಿ ಬಗೆಗಿರುವ ಉಲ್ಲೇಖಗಳು ಸತ್ಯಕ್ಕೆ ದೂರವಾಗಿವೆ ಎಂದು ಹೇಳಬಹುದು. ಒಂದು ಸ್ಥಳನಾಮ ಸಾಮಾನ್ಯವಾಗಿ ಪ್ರದೇಶಿಕ ಲಕ್ಷಣದ ಮುಖಾಂತರ ಹೆಸರು ಪಡೆದಿರುತ್ತದೆ. ಆದುದರಿಂದ ಜಗಲೂರಿನ ಹಳೆ ಊರಿನಲ್ಲಿ ಪ್ರತಿ ಮನೆಯ ಮುಂದೆ ಜಗಲಿ ಇರುವುದು ಹಾಗೂ ಜಗಲಿಯಂತಿರುವ ಎತ್ತರದ ಸ್ಥಳದಲ್ಲಿ ಅಂದರೆ ದಿಬ್ಬದ ಮೇಲೆ ಜಗಲೂರು ನಿರ್ಮಾಣವಾಗಿರುವುದನ್ನ ಕಾಣಬಹುದು. ಈ ಜಗಲಿಯಿಂದ ಜಗಲಿಯ ಊರು>ಜಗಲೂರು. ಜಗಲೂರು ಎಂಬ ಹೆಸರು ಬಂದಿರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಆಸಗೋಡು

ಜಗಲೂರು ತಾಲೂಕಿನ ಬಿಳಿಚೋಡು ಹೋಬಳಿಗೆ ಸೇರಿದ ಐತಿಹಾಸಿಕ ಮಹತ್ವವುಳ್ಳ ಸ್ಥಳ, ಚಾರಿತ್ರಿಕ ಹಿನ್ನೆಲೆಯಲ್ಲಿ 'ಅಸಗ' ಎಂದರೆ ಪಾಳಿಭಾಷೆಯಲ್ಲಿ ಅಶೋಕ ಎಂದು 'ಗೋಡು'

ಎಂದರೆ ಪಟ್ಟಣ ಎಂದು ಅರ್ಥ. ಆಸಗೋಡು ಅಶೋಕಪಟ್ಟಣ. ಅಂದರೆ ಅಶೋಕನ ಹೆಸರಿನಲ್ಲಿ ಕಟ್ಟಿದ ಊರು ಎಂದು ಹೇಳುತ್ತಾರೆ. ಬಿಳಿಜೋಡಿನ ಒಂದು ಕೈಬರಹದಲ್ಲಿ ಅಶೋಕ ಚಕ್ರವರ್ತಿ ಕೆಲಕಾಲ ಈ ಪ್ರದೇಶದಲ್ಲಿ ತಂಗಿದ್ದನೆಂದು, ಅವನಿಂದ ಈ ಹೆಸರು ಬಂದಿತೆಂದು ಹುಲ್ಲೂರು ಶ್ರೀನಿವಾಸ ಜೋಯಿಸರು ಉಲ್ಲೇಖಿಸಿದ್ದಾರೆ. ಇದು ಪ್ರಾಚೀನ ಪುಣ್ಯಕ್ಷೇತ್ರ, ಶಿವಪುರ, ವೀರಭೂಮಿ, ಐತಿಹಾಸಿಕ ಸ್ಥಳ, ಅಗ್ರಹಾರ, ಅಥವಾ ವಿದ್ಯಾಕೇಂದ್ರವಾಗಿತೆಂದು ಐತಿಹ್ಯವಿದೆ.

ಜನಪದ ಹಿನ್ನೆಲೆಯಲ್ಲಿ ಗಮನಿಸಿದಾಗ ಈ ಗ್ರಾಮದ ಪೂರ್ವ ದಿಕ್ಕಿನಲ್ಲಿ ಪುರಾತನ ಕಾಲಕ್ಕೆ ಸೇರಿದ ಸ್ವಯಂಭು ಶಂಭುಲಿಂಗೇಶ್ವರ ದೇವಾಲಯವಿದೆ. ಹಿಂದೊಮ್ಮೆ ವ್ಯಾಪಾರಸ್ಥರು ತಮ್ಮ ಎತ್ತುಗಳ ಮೇಲೆ ಮಾಲನ್ನು ಏರಿಕೊಂಡು ಒಂದು ಈ ಊರಿನಲ್ಲಿ ತಂಗಿ ಸ್ವಯಂಭು ಉದ್ಭವ ಮೂರ್ತಿಯನ್ನೆ ಒಲೆಗುಂಡನ್ನಾಗಿ ಮಾಡಿಕೊಂಡು ಅಡುಗೆ ಮಾಡಿದರು. ಇದರಿಂದ ಅವರ ಎತ್ತುಗಳ ಕೋಡುಗಳು ಉದುರಿ ಹೋಗಿ ವ್ಯಾಪಾರಸ್ಥರು ತಮ್ಮ ತಪ್ಪನ್ನು ಒಪ್ಪಿಕೊಂಡು ಶಂಭುಲಿಂಗವನ್ನು ಪೂಜಿಸಲು ತಮ್ಮ ಎತ್ತುಗಳಿಗೆ ಯಥಾಪ್ರಕಾರವಾಗಿ ಹೊಸಕೋಡುಗಳು ಬಂದವು. ಈ ಕಾರಣದಿಂದ ಈ ಗ್ರಾಮಕ್ಕೆ ಹೊಸಕೋಡು ಎಂದು ಹೆಸರು ಬಂದು ಕಾಲಕ್ರಮೇಣ ಹೊಸಕೋಡು>ಅಸಗೋಡು ಆಯಿತೆಂದು ಐತಿಹ್ಯವಿದೆ.

ಇದೇ ಊರಿನ ಶಂಭುಲಿಂಗ ದೇವಾಲಯದ ಬಳಿ ಇರುವ ಕ್ರಿ.ಶ.೧೧೧೩ರ ಶಾಸನದಲ್ಲಿ ‘ಅಸಗೋಡು’ ಎಂಬ ಉಲ್ಲೇಖವಾಗಿದೆ.[೨೬] ಅಸಗ+ಗೋಡು>ಅಸಗೋಡು, ಅಸಗ ಎಂಬ ಅಕ್ಷರ ಪಲ್ಲಟದಿಂದ ಅಸಗರೂಪ ಪಡೆದಿದೆ. ಅಸಗ ಎಂಬುದು ಒಂದು ಜಾತಿವಾಚಪದ, ಗೋಡು ಎಂದರೆ ಮಣ್ಣು, ಕೆರೆ ಫಲವತ್ತಾದ ಜೇಡಿಮಣ್ಣು ಎಂದರ್ಥಗಳಿವೆ. ಈ ಊರಿನ ಸುತ್ತಮುತ್ತಲಿನ ಪ್ರದೇಶವನ್ನು ಗಮನಿಸಿದಾಗ ಈ ಊರು ಕೆರೆ ಪಕ್ಕದಲ್ಲಿದ್ದು ಹಾಗೂ ಅಲ್ಲಿನ ಭೂಮಿ ಕಪ್ಪು ಮಣ್ಣಿನಿಂದ ಕೂಡಿದ್ದು ಇದರ ಪ್ರಭಾವದಿಂದ ಗೋಡು ಎಂಬ ಹೆಸರು ಪಡೆದು ಇದಕ್ಕೆ ಅಸಗ ಎಂಬ ಜಾತಿವಾಚಿ ಪದ ವಿಶೇಷಣವಾಗಿ ಸೇರಿ ಅಗಸಗೋಡು>ಅಸಗಗೋಡು>ಅಸಗೋಡು ಎಂಬ ಹೆಸರನ್ನು ಪಡೆದಿರಬಹುದು.

ಕಣಕುಪ್ಪೆ

ಜಗಲೂರು ತಾಲೂಕಿನ ಕಣಕುಪ್ಪೆ ಇಂದು ಸಾಧಾರಣ ಗ್ರಾಮವಾದರೂ ಹಿಂದೆ ಇದು ಐತಿಹಾಸಿಕ ಮಹತ್ವವನ್ನು ಪಡೆದ ಸ್ಥಳ. ೧೮೮೩ ರವರೆಗೆ ಕಣಕುಪ್ಪೆ ತಾಲೂಕು ಕೇಂದ್ರವಾಗಿತ್ತೆಂದು ನಿಬಗೂರ ಶಾಸನ ತಿಳಿಸುತ್ತದೆ. ಜಗಲೂರು ತಾಲೂಕಿನ ಕ್ರಿ.ಶ.೧೬೦೪ರ ಸೊಕ್ಕೆ ಹೋಬಳಿ ಮದಕರಿಪುರ ಗ್ರಾಮದ ಆಂಜನೇಯ ದೇವಾಲಯದಲ್ಲಿರುವ ಶಾಸನದಲ್ಲಿ ‘ಕಣಕುಪೆ’ ಎಂಬ ಉಲ್ಲೇಖ ದೊರೆಯುತ್ತದೆ.[೨೭]

ಕಣಕುಪ್ಪೆ ಚಿತ್ರದುರ್ಗ ಪಾಳೇಗಾರರ ಕಾಲದಲ್ಲಿ ಒಂದು ಸೀಮೆಯಾಗಿದ್ದು, ಚಿಕ್ಕನಾಯಕ ಈ ಭಾಗವನ್ನು ಆಳುತ್ತಿದ್ದಾಗ ಕೊಮರಪ್ಪನಾಯಕರಿಗೆ ಜಗಲೂರು ಸೀಮೆಯ ಕಣಕುಪ್ಪೆ ಗುಡ್ಡದಲ್ಲಿ ಬೇಡಗಳ್ಳರು ಗಂಡುಬಿದ್ದು ಅಲ್ಲಿನ ಜನರಿಗೆ ಉಪಟಳ ನೀಡುತ್ತಿದ್ದಾರೆಂದು ಸುದ್ದಿಬಂತು. ನಂತರ ಕೊಮರಪ್ಪ ನಾಯಕ ಈ ಹಿನ್ನೆಲೆಯಲ್ಲಿ ನಾನೂರು ಸೈನಿಕರಿಂದ ಬೇಡಗಳ್ಳರನ್ನು ಹತ್ತಿಕ್ಕಿದನು. ಆಗ ಈ ಕಣಕುಪ್ಪೆಯ ಗುಡ್ಡಗಳಲ್ಲಿ ವಿಸ್ತಾರವಾದ ಬಯಲು ಗವಿಗಳು, ಹೊಂಡಗಳು ಇರುವುದನ್ನು ಕಂಡು ಇದೊಂದು ಆಯಕಟ್ಟಿನ ಸ್ಥಳವೆಂದು ಭಾವಿಸಿ ಕೊಮರಪ್ಪ ಕೋಟೆ ನಿರ್ಮಿಸಲು ಪ್ರಾರಂಭಿಸಿದನು. ಹೊಂಡದ ತಳಭಾಗದಲ್ಲಿ ಮಣ್ಣು ತೆಗೆಯುವಾಗ ದೊಡ್ಡ ಶಂಖವೊಂದು ಸಿಕ್ಕಿತು. ಈ ಶಂಖವನ್ನು ಕೊಮರಪ್ಪನಾಯಕ ತಿಮ್ಮಾಜೋಯಿಸರಿಗೆ ತೋರಿಸಿದಾಗ ಇದು ಹಿಂದೆ ಕಣ್ವ ಋಷಿಗಳು ನೆಲೆಸಿದ್ದ ಸ್ಥಳ. ಈ ಶಂಖ ಆ ಋಷಿಗಳದ್ದೆ ಎಂದು ಹೇಳಿದ್ದರಿಂದ ಈ ಕೋಟೆಗೆ ಕಣ್ವರ ಕುಪ್ಪೆ ಎಂದೆ ಹೆಸರಿಟ್ಟರು. ಕ್ರಮೇಣ ಅದು ಜನರ ಬಾಯಲ್ಲಿ ಕಣಕುಪ್ಪೆ ಯಾಯಿತೆಂದು ಐತಿಹ್ಯವಿದೆ.

ಇಲ್ಲಿನ ಸ್ಥಳೀಯರ ಅಭಿಪ್ರಾಯದ ಪ್ರಕಾರ ಕಣ್ವರಿಗೆ ಮೈಮೇಲೆಲ್ಲಾ ಕುಪ್ಪೆಯೋಪಾದಿಯಾಗಿ ಗುಳ್ಳೆ ಇದ್ದುದರಿಂದ ಅದಕ್ಕಾಗಿ ಕಣಕುಪ್ಪೆ ಎಂಬ ಹೆಸರು ಬಂದಿತೆಂದು ಸ್ಥಳೀಯರು ಹೇಳುತ್ತಾರೆ.

ಕಣ+ಕುಪ್ಪೆ>ಕಣಕುಪ್ಪೆ. ಕಣ ಎಂದರೆ ಆಯಕಟ್ಟಿನ ಸ್ಥಳ. ಕಾಳಗದ ಸ್ಥಳ, ರಣರಂಗ, ಕುಪ್ಪೆ ಎಂದರೆ ಎತ್ತರವಾದ ಸ್ಥಳ, ರಾಶಿ, ಗುಂಪು ಎಂದರ್ಥಗಳಿವೆ. ಒಂದರ್ಥದಲ್ಲಿ ಈ ಎರಡು ಪದಗಳನ್ನು ಗಮನಿಸಿದಾಗ ಎರಡು ಗುಂಪುಗಳ ಮಧ್ಯೆ ಯುದ್ಧ ನಡೆಯಲು ಯೋಗ್ಯವಾದ ಸ್ಥಳವಾದ್ದರಿಂದ ಇದಕ್ಕೆ ಕಣಕುಪ್ಪೆ ಎಂಬ ಹೆಸರು ಬಂದಿರಬಹುದು. ಮತ್ತೊಂದು ಅಭಿಪ್ರಾಯದಲ್ಲಿ ಭೌಗೋಳಿಕವಾಗಿ ಈ ಪ್ರದೇಶವು ಎತ್ತರವಾಗಿದ್ದು, ಸಣ್ಣ-ಸಣ್ಣ ಕಲ್ಲಿನ ಕಣಶಿಲೆಯ ಕುಪ್ಪೆಗಳು ಗುಡ್ಡದೋಪಾದಿಯಲ್ಲಿ ಕಾಣುವುದರಿಂದ ಕಣಕುಪ್ಪೆ ಎಂಬ ಹೆಸರು ಬಂದಿರಬಹುದು.

ಪಲ್ಲಾಗಟ್ಟೆ

ಪಲ್ಲಾ+ಕಟ್ಟೆ>ಪಲ್ಲಾಗಟ್ಟೆ. ಪಲ್ಲ<ಪರ್ಲ/ಪರ್‍ರ ಎಂಬ ರೂಪಗಳಿಂದ ಬಂದಿದೆ. ಪರ್‍ರ ಎಂದರೆ ಉಪ್ಪು ನೆಲ, ಚೌಳು ಭೂಮಿ, ಎಂಬರ್ಥಗಳಿವೆ.[೨೮] ಪ್ರಾದೇಶಿಕವಾಗಿ ಇಲ್ಲಿನ ಸ್ಥಳ ಚೌಳು ಭೂಮಿಯಿಂದ ಕೂಡಿದ ಉಪ್ಪು ನೆಲವಾಗಿದೆ. ಈ ಪ್ರದೇಶ ಉಪ್ಪು ಭೂಮಿಯಿಂದ ಕೂಡಿದ್ದರಿಂದ ಉಪ್ಪಾರ ಜನಾಂಗವು ಕಟ್ಟೆಗಳನ್ನು ಕಟ್ಟಿ ಉಪ್ಪು ತಯಾರಿಸಿ ತಮ್ಮ ತಮ್ಮ ವೃತ್ತಿಯಿಂದ ಜೀವನ ಸಾಗಿಸುತ್ತಿರಬಹುದು. ಇದರಿಂದ ಇಲ್ಲಿನ ಪ್ರದೇಶವನ್ನು ಪರ್ಲಕಟ್ಟೆ>ಪರಲ್ಲಗಟ್ಟೆ>ಪಲ್ಲಗಟ್ಟೆ>ಪಲ್ಲಾಗಟ್ಟೆ ಎಂಬ ಹೆಸರಿನಿಂದ ಕರೆದಿರಬಹುದು.

ಒಟ್ಟಿನಲ್ಲಿ ಸ್ಥಳನಾಮಗಳಲ್ಲಿ ಐತಿಹ್ಯ, ದಂತಕಥೆಗಳು ಅವು ಆಯಾ ಪ್ರದೇಶದ ಭೌಗೋಳಿಕ, ಐತಿಹಾಸಿಕ ಹಾಗೂ ಸಾಮಾಜಿಕ ವಿಷಯಗಳನ್ನೊಳಗೊಂಡ ಜೀವಂತ ಪಳೆಯುಳಿಕೆಗಳು ಸಾಂಸ್ಕೃತಿಕ ಘಟಕಗಳು ಎಂಬುದನ್ನು ಸ್ಥಳನಾಮಗಳ ಅಧ್ಯಯನ ಮೂಲಕ ತಿಳಿಯಬಹುದು. ಇದು ಊರುಗಳ ಹೆಸರುಗಳಲ್ಲಿ ಅಲ್ಲಿ ಅಡಗಿರುವ ವಿಷಯಗಳು ಆ ಊರು ಹೇಗೆ ಹುಟ್ಟಿಕೊಂಡಿತ್ತು ಎಂಬುದೇ ಐತಿಹ್ಯ.

ಅಡಿಟಿಪ್ಪಣಿಗಳು

೧. ಲಕ್ಷ್ಮೀದೇವಿ ಎಲ್, **ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು,** ಪು.೩೫

೨. ಅದೇ, ಪು.೩೩

೩. ಸುಮತೀಂದ್ರನಾಡಿಗ್, **ದಾವಣಗೆರೆ ಜಿಲ್ಲೆಯ ಇತಿಹಾಸದ ಕೆಲವು ಹೆಜ್ಜೆಗಳು,** ಪು.೧೨೫

೪. ಅದೇ, ಪು.೧೧೦–೧೧೧

೫. ನೀಲಪ್ಪ ಹೆಚ್., **ಶ್ರೀರಂಗಧಾಮ ಉಡುಗಿರಿ ಕ್ಷೇತ್ರ, ದೇವರಹಳ್ಳಿ,** ಪು.೧೫–೧೮

೬. ಬಸವರಾಜ್ ಜಿ.ಬಿ., **ಕಾಕನೂರು: ಚನ್ನಗಿರಿ ತಾಲೂಕಿನ ಐತಿಹಾಸಿಕ ಹಿನ್ನೆಲೆ ಎಂಬ ಪುಸ್ತಕ ಜೀವಧಾರೆ,** ಪು.೧೫

೭. ಸುಮತೀಂದ್ರನಾಡಿಗ್, **ದಾವಣಗೆರೆ ಜಿಲ್ಲೆಯ ಇತಿಹಾಸದ ಕೆಲವು ಹೆಜ್ಜೆಗಳು,** ಪು.೯೬–೯೭

೮. ಅದೇ, ಪು.೧೨೭–೧೨೮

೯. ಅದೇ, ಪು.೧೨೨

೧೦. ಬಸವರಾಜ್ ಜಿ.ಬಿ. **ಪೂರ್ವೋಕ್ತ,** ಪು.೧೬

೧೧. ಚಿದಾನಂದಮೂರ್ತಿ ಎಂ., **ಜನ–ಜನಪದ–ಜಾನಪದ,** ಪು.೬೭

೧೨. ಅದೇ, ಪು.೬೭

೧೩. ಸುಮತೀಂದ್ರನಾಡಿಗ್, **ಪೂರ್ವೋಕ್ತ,** ಪು.೫೧

೧೪. ಗಿರಿಜಾ ಟಿ., **ಇದು ನಮ್ಮ ದಾವಣಗೆರೆ ಜಿಲ್ಲೆ,** ಪು.೨೯–೩೦

೧೫. ಗಣೇಶ ಕೆ.ಆರ್.(ಪ್ರಸಂ.), **ಗುಣಮಧುರ**(ದೇವರಕೊಂಡಾರೆಡ್ಡಿ ಅಭಿನಂದನ ಗ್ರಂಥ), ಪು.೪೨೪

೧೬. ಕೊಟ್ರೇಶ್ ಎಂ., **ಉಚ್ಚಂಗಿದುರ್ಗ(ಐತಿಹಾಸಿಕ ಸಾಂಸ್ಕೃತಿಕ ಅಧ್ಯಯನ),** ಪು.೪೦

೧೭. ಅದೇ, ಪು.೪೦–೪೧

೧೮. ಕೊಟ್ರೇಶ್ ಎಂ., **ಪೂರ್ವೋಕ್ತ,** ಪು.೧–೨

೧೯. ಚಿದಾನಂದ ಮೂರ್ತಿ ಎಂ., **ಹೊಸತು–ಹೊಸತು,** ಪು.೭೩೩–೭೩೪

೨೦. ಸುಮತೀಂದ್ರನಾಡಿಗ್, **ಪೂರ್ವೋಕ್ತ,** ಪು.೬೦

೨೧. ಅದೇ, ಪು.೧೮೮–೧೮೯

೨೨. ಗಿರಿಜಾ ಟಿ., **ಇದು ನಮ್ಮ ದಾವಣಗೆರೆ ಜಿಲ್ಲೆ,** ಪು.೫೫೦

೨೩. ಅದೇ, ಪು.೬೨೬

೨೪. ಸಿದ್ದಪ್ಪ ಜಿ., **ಜಗಲೂರು ತಾಲೂಕಿನ ಐತಿಹಾಸಿಕ ಹಿನ್ನೆಲೆ ಎಂಬ ಲೇಖನದಲ್ಲಿ,** ಪು.೫೩

೨೫. ಸೋಮಶೇಖರ್ ಎಸ್.ವೈ., **ಜಗಲೂರು,** ಪು.೨೩–೨೪

೨೬. **ಎಫಿಗ್ರಾಫಿಯಾ ಕರ್ನಾಟಕ(ಸ.೧೧),** ಪು.೨೨೪

೨೭. ಅದೇ, ಪು.೨೩೧

೨೮. ಗೋಪಾಲಕೃಷ್ಣ ವಿ., **ಸ್ಥಳನಾಮ ಅಧ್ಯಯನಗಳು,** ಪು.೪೩

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಕರ್ನಾಟಕ ಕೇಂದ್ರ ಬಿಂದುವಾಗಿರುವ ದಾವಣಗೆರೆ ಜಿಲ್ಲೆ ಕಾಲಗರ್ಭದಲ್ಲಿ ಹುದುಗಿ ಕೊಂಡಿದ್ದ ಘಟನಾವಳಿಗಳನ್ನು ಬಿಚ್ಚಿ ಹರಡಿಕೊಳ್ಳುತ್ತಾ, ಕೆದಕಿದಷ್ಟೂ ಆಳಕ್ಕಿಳಿಯುತ್ತಾ ಹುಡುಕಿದಷ್ಟೂ ಎತ್ತರಕ್ಕೇರುತ್ತಾ, ಪ್ರತಿ ಹೆಜ್ಜೆಗೂ ಹುಡುಕಾಟಕ್ಕೆ ಹಚ್ಚುತ್ತದೆ. ಹುಡುಕುತ್ತಾ ಹೊರಟಾಗ ಇಲ್ಲಿಯ ಭೌಗೋಳಿಕ ಹಿನ್ನೆಲೆ, ಇಲ್ಲಿಯ ಇತಿಹಾಸ ಈ ನೆಲದಲ್ಲಿ ಆಳಿ ಬಾಳಿದವರ ಬದುಕಿನ ರಮಣೀಯತೆಯತ್ತಾ ಕೊಂಡೊಯ್ಯುತ್ತದೆ. ಈ ಜಿಲ್ಲೆಯ ಉದ್ದಗಲಕ್ಕೂ ಹಬ್ಬಿರುವ ಬೆಟ್ಟಗುಡ್ಡಗಳ ಸಾಲು ಕಣಿವೆ ಕೊಳ್ಳಗಳು, ಇಲ್ಲಿರುವ ಕೋಟೆ ಕೊತ್ತಲಗಳು, ಸಾವಿರಾರು ಗುಡಿ–ಗುಂಡಾರಗಳು, ಮಠಮಾನ್ಯಗಳು, ವಾಸ್ತು ಶಿಲ್ಪ ಕಲೆ, ಇಲ್ಲಿಯ ಶಾಸನ ಸಂಪತ್ತು, ದಾಖಲಾತಿಗಳು, ಸ್ಮಾರಕಗಳು, ಪ್ರಾಚೀನ ಆರ್ವಾಚೀನ ಸಂಸ್ಕೃತಿಗಳ ಭವ್ಯಪರಂಪರೆಯನ್ನು ತೆರೆದಿಡುತ್ತಾ ಸಾಮಾನ್ಯರಿಂದ ಮೊದಲಾಗಿ ಸಂಶೋಧಕರವರೆಗೂ ಮೂಕ ವಿಸ್ಮಿತರನ್ನಾಗಿ ಮಾಡುತ್ತದೆ. ಈ ಜಿಲ್ಲೆಯ ೬ ತಾಲೂಕುಗಳಲ್ಲಿ ಕಂಡುಬರುವ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳ ಬಗ್ಗೆ ತಿಳಿಯುತ್ತಾ ಹೋದಂತೆ ಇನ್ನು ಹೆಚ್ಚಿನ ಮಾಹಿತಿಗಳು ಈ ಜಿಲ್ಲೆಯಲ್ಲಿ ಇವೆ. ಪ್ರತಿ ದಿನ ಸಾಮಾಜಿಕ ಪರಿಸರದಲ್ಲಿ ಕಂಡುಂಡ ಅನುಭವಗಳೇ ಸಾಹಿತ್ಯವಾಗಿ ಒಡಮೂಡುತ್ತವೆ. ಇವುಗಳು ಪ್ರತಿ ಜಿಲ್ಲೆಯಲ್ಲಿ, ಪ್ರತಿ ತಾಲೂಕಿನಲ್ಲೂ ಅನುಭವದ ಮೇರೆಯಲ್ಲಿ ನಡೆಯುವಂತಹ ಅಂಶಗಳು, ಈ ಜಿಲ್ಲೆಯಲ್ಲಿ ಇಂತಹ ಅಂಶಗಳು ಯಾವ ರೀತಿ ಐತಿಹ್ಯಗಳಾಗಿ, ಪುರಾಣಗಳಾಗಿ, ದಂತಕಥೆಗಳಾಗಿ, ವ್ಯಕ್ತಿ ಬಗ್ಗೆ, ಸ್ಥಳದ ಬಗ್ಗೆ ಮತ್ತು ಪ್ರಾಣಿಗಳ ಬಗ್ಗೆ ಇವೆ ಎಂಬುದನ್ನು ತಿಳಿಸುತ್ತಾ ಹೋಗಲಾಗಿದೆ.

ಐತಿಹ್ಯವೆಂಬುದು ಮೌಖಿಕ ಪರಂಪರೆಯ ಒಂದು ಭಾಗ ಮಾತ್ರವಲ್ಲ, ಅದೊಂದು ಚರಿತ್ರೆ ಎನ್ನಬಹುದು. ಅದು ಸಂಸ್ಕೃತಿಯೂ ಹೌದು, ಒಂದು ಸ್ಥಳದ ಬಗ್ಗೆ ಚರಿತ್ರೆ ಮತ್ತು ಸಂಸ್ಕೃತಿ ಇದೆ ಎಂದರೆ ಅಲ್ಲಿಯ ಜನ, ಸಂಸ್ಕೃತಿ, ಅಲ್ಲಿಯ ಜನಾಂಗ, ಗಿಡ, ಮರ, ಕಲ್ಲು,

[illegible]

[illegible]

[illegible]

[illegible]

ದಿನ್ನೆ, ಪರ್ವತ, ಕೋಟೆ ಈ ಎಲ್ಲಾ ನೆಪದಲ್ಲಿ ಇತಿಹಾಸ ರಚನೆಗೊಂಡು ಪ್ರಾಚೀನದಲ್ಲಿ ನಡೆದಿರುವ ಘಟನೆಗಳನ್ನು ಅವುಗಳಿಗೆ ಬಣ್ಣಕೊಟ್ಟು ಜನರು ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಮೌಖಿಕ ಪರಂಪರೆಯಲ್ಲಿ ಬೆಳೆಸುತ್ತಾ ಹೋಗುತ್ತಾರೆ. ಅವುಗಳು ಐತಿಹ್ಯಗಳಾಗಿರಬಹುದು. ಇಂತವುಗಳನ್ನ ಒಂದು ಕಡೆಯಾಗಿ ಎಣೆಯುತ್ತಾ ಹೋಗಿ ಎಲ್ಲೋ ಒಂದು ಕಡೆ ಆ ವಿಷಯ ಐಕ್ಯವಾಗಿ ನೆಲೆಯೂರುತ್ತದೆ. ಅದು ಐತಿಹ್ಯ ಎಂದು ಹೇಳಬಹುದು. ಈ ಐತಿಹ್ಯವು ಸಂಸ್ಕೃತಿಯೊಂದರ ಪ್ರತಿನಿಧಿಯಾಗಿ ತನ್ನೊಳಗೆ ನಂಬಿಕೆ, ಆಚರಣೆ, ಪುರಾಣ, ವ್ಯಕ್ತಿ, ಘಟನೆ ಹೀಗೆ ಹಲವಾರು ವಸ್ತು ವಿಷಯಗಳನ್ನು ಒಳಗೊಂಡಿರುತ್ತದೆ. ಇಂತಹ ಐತಿಹ್ಯಗಳಿಗೆ ಕಾಲದ ನಿರ್ದಿಷ್ಟತೆಯಾಗಲಿ ಅಥವಾ ದಾಖಲೆಗಳಾಗಲಿ ಇರುವುದಿಲ್ಲ. ಅವುಗಳು ಬೆಳವಣಿಗೆ ಹೊಂದುತ್ತಾ ಹೋಗುತ್ತವೆ.

ಐತಿಹ್ಯಗಳು ಸ್ಥಳ ಪುರಾಣ, ಮಹಾತ್ಮೆಗಳನ್ನು ತಿಳಿಸುತ್ತವೆ. ಪುರಾಣಪ್ರಸಿದ್ಧ ಸಿದ್ಧತೆಯ ಹಿನ್ನೆಲೆಯಲ್ಲಿ ಒಂದು ಸ್ಥಳದ ಮಹತ್ವವನ್ನು ಕಟ್ಟಿಕೊಡುವ ಐತಿಹ್ಯಗಳು ಆ ಸ್ಥಳದ ಜಲವಾಚಿಯೋ ಅಂದರೆ ಬೆಟ್ಟ, ಗುಡ್ಡ, ನದಿ, ಪರ್ವತ ಇತ್ಯಾದಿಯಾಗಿ, ನಿಸರ್ಗವಾಚಿಯೋ ಇಲ್ಲವೇ ದೈವವಾಚಿಯೋ ಎಂಬುದನ್ನು ನಿರ್ಧರಿಸುತ್ತವೆ. ಅವುಗಳು ನಮ್ಮ ಗಮನ ಸೆಳೆಯುತ್ತವೆ. ಇವುಗಳಲ್ಲದೇ ಶಾಸನಗಳ ಹಿನ್ನೆಲೆಯಲ್ಲಿ ಕೂಡಾ ಐತಿಹ್ಯವನ್ನು ಗುರುತಿಸಬಹುದು. ಶಾಸನಗಳಲ್ಲಿ ಬರುವ ಲಿಖಿತ ರೂಪ ಪಡೆದಿರುವಂತಹ ಪುರಾಣ, ಐತಿಹ್ಯಗಳ ಅಂಶಗಳನ್ನು ಬಚ್ಚಿಡುವುದರ ಮೂಲಕ ತಮ್ಮ ಗತಕಾಲದ ಹಿಂದಿನ ಇತಿಹಾಸದ ವಿವರವನ್ನು ತಿಳಿಸುತ್ತವೆ. ಜನಪದರಲ್ಲಿ ಮೌಖಿಕ ರೂಪದಲ್ಲಿ ಅವುಗಳು ಹರಿದಾಡತೊಡಗುತ್ತವೆ. ಅವುಗಳು ಪುರಾಣದಂತಹ ಕಥೆಗಳನ್ನು ಆಧರಿಸಿ ರಚನೆಗೊಂಡು ಬೆಳೆದು ಬಂದಿರುತ್ತವೆ. ಇವುಗಳು ಜನಪದರ ಕಥನಗಳಾಗಿರುವುದರಿಂದ ಅವರದೇ ಆದ ಆಶಯ ಅನುಭವ ಇಲ್ಲಿ ಘನೀಕೃತಗೊಂಡಿರುತ್ತದೆ. ಕಾರಣ ಅದು ಅವರು ಕಂಡುಕೊಂಡ ಸತ್ಯ ವಿಷಯಗಳಾಗಿರುತ್ತವೆ. ಅವರು ನಡೆದಿರುವ ವಿಚಾರವನ್ನೇ ಇಟ್ಟುಕೊಂಡು ಕತೆಯ ರೂಪದಲ್ಲಿ ಎಣೆಯುತ್ತಾ ಹೋಗುತ್ತಾರೆ.

ಪ್ರಾದೇಶಿಕ ಚರಿತ್ರೆಯನ್ನ ಮತ್ತು ಗ್ರಾಮ ನಾಮಗಳನ್ನ ಗ್ರಾಮದಲ್ಲಿ ನೆಲೆಸಿದ ವ್ಯಕ್ತಿಗಳ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಐತಿಹ್ಯಗಳ ಪಾತ್ರ ಮಹತ್ವವಾದದ್ದು, ಸಮುದಾಯದ ಸಂಸ್ಕೃತಿ ಅಲ್ಲಿಯ ಆಚರಣೆ, ನಂಬಿಕೆ, ಸಂಪ್ರದಾಯಗಳಿಂದ ಈ ಐತಿಹ್ಯಗಳು ಪ್ರತಿನಿಧಿಸುತ್ತವೆ. ಇವುಗಳು ಜಿಲ್ಲೆಯಾದ್ಯಂತ ಕಂಡುಬರುತ್ತವೆ. ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳಲ್ಲಿ ಹೆಚ್ಚಾಗಿ ವ್ಯಕ್ತಿನಾಮ, ಸ್ಥಳನಾಮ, ಪ್ರಾಣಿನಾಮಗಳ ಬಗ್ಗೆ ಕೋಟೆ ಇಂತಹ ವಿಷಯಗಳಲ್ಲಿ ಹೆಚ್ಚಾಗಿ ಐತಿಹ್ಯಗಳು, ಪುರಾಣಗಳು, ದಂತಕಥೆಗಳು ಕಂಡುಬಂದಿವೆ. ಇವುಗಳ ಹಿನ್ನೆಲೆಯಲ್ಲಿ ಈ ಸಂಪ್ರಬಂಧ ಇದೆ.

ಪ್ರಸ್ತುತ ಸಂಪ್ರಬಂಧವು 'ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳು' ಎನ್ನುವ ಸಂಪ್ರಬಂಧವು ಒಟ್ಟು ಆರು ಅಧ್ಯಾಯಗಳಾಗಿ ವಿಭಾಗ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಅಧ್ಯಯನದ ವಿಧಾನ ಕುರಿತು ನಿಖರವಾಗಿ ಚರ್ಚಿಸುವುದರ ಮೂಲಕ ಇಂದಿನವರೆಗೆ ಶಾಸನಗಳನ್ನ ಮತ್ತು ಜನಪದ ಐತಿಹ್ಯಗಳನ್ನು ಕುರಿತು ಯಾವ ಯಾವ ವಿಧಾನದಲ್ಲಿ ಅಧ್ಯಯನಕ್ಕೊಳಪಡಿಸಿದ್ದಾರೆ ಎನ್ನುವುದನ್ನು ಕುರಿತು ಚರ್ಚಿಸಲಾಗಿದೆ.

ಐತಿಹ್ಯ ಎಂದರೇನು ಎಂಬುದನ್ನು ತಿಳಿಸಲಾಗಿದ್ದು ಅದರ ಅರ್ಥ, ಐತಿಹ್ಯದ ಬಗ್ಗೆ ಅನೇಕ ವಿದ್ವಾಂಸರ ಅಭಿಪ್ರಾಯಗಳು ಒಂದೊಂದು ರೀತಿಯಲ್ಲಿ ಅವರು ಹೇಳಿಕೆ ನೀಡಿರುವುದು ಇಲ್ಲಿ ಉಲ್ಲೇಖಿಸಲಾಗಿದೆ. ಐತಿಹ್ಯವು ಜನಪದ ಮೌಖಿಕ ಇತಿಹಾಸವಾಗಿ ಒಂದು ಬಗೆಯ ಅರ್ಥವನ್ನು ಒಳಗೊಳ್ಳುತ್ತದೆ. ಆದರೆ ಇವುಗಳಿಗೆ ಕಾಲದ ನಿರ್ದಿಷ್ಠತೆಯಾಗಲಿ ಅಥವಾ ದಾಖಲೆಗಳಾಗಲಿ ಇರುವುದಿಲ್ಲ. ಅವು ಪ್ರಾಚೀನ ಕಾಲದಿಂದ ಬೆಳೆಯುತ್ತಾ ಬಂದಿವೆ.

ಶಾಸನೋಕ್ತ ಐತಿಹ್ಯಗಳು ಶಾಸನದಲ್ಲಿ ಐತಿಹ್ಯಗಳು ಯಾವ ರೀತಿ ಉಲ್ಲೇಖಗೊಂಡಿದ್ದು, ಆ ಶಾಸನದಲ್ಲಿ ಯಾವ ರೀತಿಯ ಅಂಶಗಳನ್ನು ಕುರಿತು ಹೇಳುತ್ತದೆ ಎಂಬುದನ್ನು ತಿಳಿಯಬಹುದು. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗದ ಒಂದು ಶಾಸನದಲ್ಲಿ ಉಚ್ಚಂಗೆಮ್ಮ ಹೆಸರು ಹೇಗೆ ಬಂತು ಎಂಬುದನ್ನು ತಿಳಿಸಲಾಗಿದ್ದು, ಅದಕ್ಕೂ ಮುಂಚೆ ಇಲ್ಲಿ ಯಾರು ನೆಲೆಸಿದರೂ ಈಕೆಯೂ ನೆಲೆಸಿದರ ಪರಿಣಾಮ ಈಕೆಗೆ ಉಚ್ಚಂಗಿದುರ್ಗದ ಉಚ್ಚಂಗೆಮ್ಮ ಎಂದು ಹೆಸರು ಶಾಸನದ ಹಿನ್ನೆಲೆಯಲ್ಲಿ ಲಿಖಿತ ದಾಖಲೆಯನ್ನು ನೀಡುತ್ತದೆ. ಮತ್ತು ಈಕೆಯ ಪುರಾಣದಲ್ಲಿ ಹೇಗೆ ಇದ್ದಳು. ಜನಪದರು ಇವಳ ಬಗ್ಗೆ ಯಾವ ರೀತಿ ಅಭಿಪ್ರಾಯ ತಿಳಿಸಿದ್ದಾರೆ ಎಂಬುದನ್ನು ಉಲ್ಲೇಖಿಸಲಾಗಿದೆ. ಹಾಗೆಯೇ ಉಚ್ಚಂಗಿದುರ್ಗವನ್ನು ಪಲ್ಲವರು, ಕದಂಬರು, ಗಂಗರು, ರಾಷ್ಟ್ರಕೂಟರು, ನೊಳಂಬಪಲ್ಲವರು, ಕಲ್ಯಾಣಿ ಚಾಲುಕ್ಯರು, ಪಾಂಡ್ಯರು, ಹೊಯ್ಸಳರು, ವಿಜಯನಗರದ ಅರಸರು. ಕೊನೆಯದಾಗಿ ಪಾಳೇಗಾರರು ಈ ರಾಜಸಂತತಿಗಳು ಉಚ್ಚಂಗಿ ದುರ್ಗವನ್ನು ಹೇಗೆ ಆಳ್ವಿಕೆ ನಡೆಸಿವೆ. ಕೆಲವೊಂದು ರಾಜಸಂತತಿಗಳು ಶಾಸನದಲ್ಲಿ ಉಲ್ಲೇಖಗೊಂಡಿದೆ ಎಂಬುದು ಈ ಅಧ್ಯಯನದಲ್ಲಿ ತಿಳಿಸಲಾಗಿದ್ದು, ಕೆಲವು ಮಾಹಿತಿಗಳು ಹಾಗೂ ಕೈಪಿಯತ್ತುಗಳಲ್ಲಿ ಈ ಕೋಟೆಯ ಬಗ್ಗೆ ಮಾಹಿತಿ ದೊರೆಯುತ್ತದೆ.

ಶಾಸನದಲ್ಲಿ ಹರಿಹರದ ಹರಿಹರೇಶ್ವರನ್ನ ಬಗ್ಗೆ ದಾವಣಗೆರೆ ಶಾಸನ ಸಂಖ್ಯೆ-೨೫, ಇದು ಹರಿಹರ, ಕೂಡಲೂರು, ಗುಹಾರಣ್ಯ ಎಂಬ ಹೆಸರುಗಳು ಕಂಡು ಬಂದಿದ್ದು, ಕೂಡಲೂರು

ಬಗ್ಗೆ ಶಾಸನದಲ್ಲಿ ಏನು ವಿವರಣೆ ನೀಡಿಲ್ಲ. ಆದರೆ ಗುಹಾರಣ್ಯ ಎಂಬ ಹೆಸರಲ್ಲಿ ಗುಹಾ ಎಂಬ ವ್ಯಕ್ತಿ ತಪಸ್ಸನ್ನು ಮಾಡುವುದು, ಆಗ ವಿಷ್ಣುಶಿವರು ಹರಿಹರೈಕ ರೂಪವನ್ನು ತಾಳುವುದು ಈ ರೀತಿಯ ಕತೆಯನ್ನು ಶಾಸನದಲ್ಲಿ ತಿಳಿಸಲಾಗಿದೆ.

ಕೈಫಿಯತ್ತುಗಳು ಕೂಡಾ ಶಾಸನಗಳಲ್ಲಿ ಒಂದಾಗಿದ್ದು ಅವುಗಳನ್ನ ಈ ಅಧ್ಯಾಯದಲ್ಲಿ ತೊಡಗಿಸಿಕೊಳ್ಳಲಾಗಿದ್ದು, ಇವುಗಳ ಮೂಲಕ ಸ್ಥಳನಾಮಗಳ ಬಗ್ಗೆ ತಿಳಿದುಕೊಳ್ಳಬಹುದು. ಭಾರತೀಯರಲ್ಲಿ ಐತಿಹಾಸಿಕ ಆಧಾರಗಳ ಬಗ್ಗೆ ಜನರಿಗಿರುವ ಅಜ್ಞಾನ ಅವಜ್ಞೆಯನ್ನು ಅವಲೋಕಿಸಿದಾಗ ಮೆಕೆಂಝಿ ಸೇವೆ ಮಹತ್ವವು ಅರಿವಾಗದೇ ಇರದು. ಇಂತಹ ಅಮೂಲ್ಯ ಮಾಹಿತಿಗಳನ್ನು ಸಂಗ್ರಹಿಸದೇ ಹೋಗಿದ್ದರೆ ಅಲ್ಲಿಯ ಸಾಮಾಗ್ರಿಗಳು ಕಣ್ಮರೆಯಾಗುತ್ತಿದ್ದವು. ಈ ಕೈಪಿಯತ್ತುಗಳು ನೀಡಿರುವ ಮಾಹಿತಿಗಳೆಲ್ಲಾ ಸತ್ಯಾಂಶಗಳಿಂದ ಕೂಡಿವೆ ಎಂದು ಹೇಳಲಾಗುವುದಿಲ್ಲ. ಪ್ರಮುಖವಾಗಿ ಸ್ತ್ರೀಯರ ಸಾಧನೆ ಪಾತ್ರವಹಿಸಿದನ್ನ ಕೈಪಿಯತ್ತು ಮೂಲಕ ಹೊಸದಾಗಿ ತಿಳಿಯಬಹುದು. ಈ ಕೈಪಿಯತ್ತುಗಳು ಇತಿಹಾಸದ ಆಧಾರಗಳಲ್ಲಿ ಒಂದಾಗಿವೆ. ಮಾಹಿತಿ ಸಂಗ್ರಹಿಸುವಲ್ಲಿ ಕೈಫಿಯತ್ತು ಕೂಡಾ ಒಂದಾಗಿದೆ.

ಆರು ತಾಲೂಕುಗಳಲ್ಲಿ ಇರುವಂತಹ ಜನಪದ ಐತಿಹ್ಯಗಳನ್ನು ಕುರಿತು ಹೇಳಲಾಗಿದ್ದು, ಈ ಅಧ್ಯಯನ ಮತ್ತು ಕ್ಷೇತ್ರ ಕಾರ್ಯದ ಮಟ್ಟಿಗೆ ಸ್ಥಳನಾಮಗಳ ಬಗ್ಗೆ, ವ್ಯಕ್ತಿ, ಪ್ರಾಣಿ, ಕೋಟೆ ಬಗ್ಗೆ ಹೆಚ್ಚಾಗಿ ಜನಪದ ಐತಿಹ್ಯಗಳು ಕಂಡುಬಂದಿವೆ. ಈ ಜಿಲ್ಲೆಯಲ್ಲಿ ದೈವ, ಬೆಟ್ಟಗುಡ್ಡ, ನದಿ, ಪರ್ವತ, ಗಾದೆ, ಒಗಟು, ವದಂತಿಗಳು ಕಂಡುಬಂದಿಲ್ಲ. ಪುರಾಣ, ದಂತಕಥೆಗಳು ಐತಿಹ್ಯಗಳು ಕಂಡುಬಂದಿವೆ. ಭಯ ಭಕ್ತಿಯ ಹಿನ್ನೆಲೆಯಲ್ಲಿ ಜನಪದರು ಅವುಗಳನ್ನು ಉಳಿಸಿಕೊಂಡು ಬರುವ ಪ್ರವೃತ್ತಿ ಹೊಂದಿವೆ. ಇವುಗಳು ಜನರ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಪೀಳಿಗೆಯಿಂದ ಪೀಳಿಗೆಗೆ ಹರಿದಾಡುತ್ತಾ ಪ್ರಾಚೀನ ಕಾಲದ ಇತಿಹಾಸಗಳನ್ನು ಆಧಾರವಾಗಿಟ್ಟು ಕೊಂಡು ಪುರಾಣದಲ್ಲಿ ನಡೆದ ಘಟನೆಗಳನ್ನು ಬಣ್ಣ ಕಟ್ಟುವುದರ ಮೂಲಕ ಬೆಳೆದು ಬಂದವು ಎಂಬುದನ್ನು ತಿಳಿಯಬಹುದು. ಒಂದರ್ಥದಲ್ಲಿ ಐತಿಹ್ಯಗಳು ಆ ಪ್ರದೇಶದ ವೈಶಿಷ್ಟತೆಯನ್ನು ಪ್ರತಿನಿಧಿಸುವ ಚಾರಿತ್ರಿಕ ಅಂಶಗಳನ್ನು ಒಳಗೊಂಡಿರುತ್ತವೆ. ಉದಾಹರಣೆಗೆ ಉಚ್ಚಂಗಿದುರ್ಗದಲ್ಲಿ ಎಲ್ಲಮ್ಮಳು ಉಚ್ಚೆಯಿಂದ ಉರುಳಿಸಿದಳು ಎಂಬ ನಂಬಿಕೆಯಿಂದ ಕಾಡುಸಿದ್ಧರು ಉಚ್ಚಂಗಿದುರ್ಗಕ್ಕೆ ಬರುವಂತಿಲ್ಲ.

ಒಟ್ಟಾರೆಯಾಗಿ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಐತಿಹ್ಯಗಳ ಅಧ್ಯಯನದಿಂದ ಕಂಡುಬಂದ ಮುಖ್ಯ ಫಲಿತಗಳನ್ನ ಸ್ಥೂಲವಾಗಿ ಹೀಗೆ ಕಟ್ಟಿಕೊಳ್ಳಬಹುದು.

* ಈ ಜಿಲ್ಲೆಯಲ್ಲಿ ಸ್ಥಳನಾಮಗಳ ಬಗ್ಗೆ, ವ್ಯಕ್ತಿನಾಮಗಳ ಮತ್ತು ಪ್ರಾಣಿಗಳ ನಾಮಗಳಲ್ಲಿ ಐತಿಹ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ಇವುಗಳಲ್ಲಿ ಉಡ, ಹಸು, ಇಂತಹ ಪ್ರಾಣಿಗಳನ್ನು ಬಳಸಿಕೊಂಡು ಜನಪದ ಐತಿಹ್ಯಗಳನ್ನು ಕಟ್ಟಿಕೊಳ್ಳಲಾಗಿದೆ.
* ಈ ಜಿಲ್ಲೆಯಲ್ಲಿ ಸಮುದಾಯಕ್ಕೆ ಸಂಬಂಧಿಸಿದಂತೆ ಅವರ ಸಂಸ್ಕೃತಿ, ನಂಬಿಕೆ, ಆಚರಣೆ, ಸಂಪ್ರದಾಯಗಳಲ್ಲಿ ಐತಿಹ್ಯಗಳು ಕಂಡುಬರುತ್ತವೆ.
* ಜನಪದರು ಅವರದೇ ಆದ ಕಥನಗಳನ್ನು ಆಶಯ ಅನುಭವಗಳ ಮೂಲಕ ಕಂಡುಂಡ ವಿಷಯಗಳ ಬಗ್ಗೆ ಕಟ್ಟಿಕೊಡುತ್ತಾರೆ.
* ಈ ಐತಿಹ್ಯಗಳು ಪ್ರಾಕೃತಿಕ ವೈಚಿತ್ರ್ಯಗಳಿಗೆ ಅನುಸಾರವಾಗಿ ಹುಟ್ಟಿಕೊಂಡಿದ್ದರೂ ಹೆಚ್ಚಾಗಿ ಕಲ್ಪನೆಗೆ ಎಡೆ ಪಡೆದಿರುವುದನ್ನು ಕಾಣುತ್ತೇವೆ.
* ಪ್ರಾದೇಶಿಕ ಚರಿತ್ರೆಗಳಿಗೆ ಗ್ರಾಮನಾಮಗಳ ಬಗ್ಗೆ ಅವುಗಳಿಗೆ ಹೆಸರು ಕೊಡುವ ಮೂಲಕ ಐತಿಹ್ಯಗಳ ಮುಖ್ಯ ಪಾತ್ರವಹಿಸಿವೆ.
* ಚನ್ನಗಿರಿ ತಾಲ್ಲೂಕಿನ ಮೆದಿಕೆರೆ ಎಂಬ ಗ್ರಾಮದಲ್ಲಿ ಮಾಸ್ತಿಕಲ್ಲು ದೊರೆತಿದ್ದು, ಅದರಲ್ಲಿ ಐತಿಹ್ಯ ಕಂಡುಬರುವುದನ್ನು ಕಾಣುತ್ತೇವೆ.
* ಶಾಸನಗಳ ಮೂಲಕ ಐತಿಹ್ಯವನ್ನು ಅವುಗಳ ಪುರಾಣ, ದಂತಕಥೆಗಳನ್ನ ತಿಳಿಸುತ್ತವೆ. ವ್ಯಕ್ತಿ ಮತ್ತು ಆ ಸ್ಥಳದ ಉಗಮಕ್ಕೆ ಶಾಸನಗಳು ಕಾರಣವಾಗಿವೆ. ಇವುಗಳು ಲಿಖಿತ ದಾಖಲೆಗಳನ್ನ ಒದಗಿಸುತ್ತವೆ.
* ಜನಪದ ಐತಿಹ್ಯಗಳಿಗೆ ಸಂಬಂಧಿಸಿದಂತೆ ಲಿಖಿತ ದಾಖಲೆಗಳು ಸಿಗುವುದಿಲ್ಲ. ಮೌಖಿಕ ಆಕರಗಳು ಹೆಚ್ಚು.

ಮುಂದಿನ ಅಧ್ಯಯನಕ್ಕೆ ಇರುವ ಸಾಧ್ಯತೆಗಳು

ಈ ದಾವಣಗೆರೆ ಜಿಲ್ಲೆಯಲ್ಲಿ ಅನೇಕ ಶಾಸನಗಳು ಮತ್ತು ಜನಪದ ಐತಿಹ್ಯಗಳು ಕಾಣಸಿಗುತ್ತವೆ. ಇದಕ್ಕೆ ಸಂಬಂಧಿಸಿದಂತೆ ಐತಿಹ್ಯಗಳು ಸಂಗ್ರಹಿಸುವ ಕಾರ್ಯ ಕಷ್ಟ ಸಾಧ್ಯದ ಕೆಲಸ. ಇಂತಹ ಸ್ಥಳನಾಮಗಳ, ವ್ಯಕ್ತಿನಾಮಗಳ ಮತ್ತು ಪ್ರಾಣಿನಾಮಗಳ ಬಗ್ಗೆ, ಪುರಾಣ, ದಂತಕಥೆ, ಐತಿಹ್ಯವನ್ನು ಕತೆಯ ರೂಪದಲ್ಲಿ ಕಟ್ಟುವುದು ಇವುಗಳ ಸಂಗ್ರಹಣೆ, ಕಾರ್ಯ ಅನಿವಾರ್ಯ. ಇವುಗಳ ಪ್ರಕಾರಗಳಲ್ಲಿ ಪ್ರತಿಯೊಂದು ಊರಿಗೂ ತನ್ನದೇ ಆದ ಒಂದು ಐತಿಹ್ಯಗಳಿರುತ್ತವೆ. ಅವುಗಳು ವ್ಯಕ್ತಿ, ಸ್ಥಳ, ಸಸ್ಯ, ಪ್ರಾಣಿ, ಕಲ್ಲು, ಬಂಡೆ, ಕೋಟೆ ಯಾವುದಕ್ಕೆ ಬೇಕಾದರೂ ಸಂಬಂಧಿಸಿದ

ಐತಿಹ್ಯಗಳಿರಬಹುದು. ಇವುಗಳನ್ನು ಸಂಗ್ರಹಿಸುವ ಕೆಲಸ ಗೊಂದಲ ತರುತ್ತವೆ. ಈ ಜಿಲ್ಲೆಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಐತಿಹ್ಯಗಳು ನನ್ನ ಸಂಶೋಧನ ಮಟ್ಟಿಗೆ ಕಡಿಮೆ ಅದಕ್ಕೆ ಶಾಸನಗಳಲ್ಲಿ ಒಂದಾದ ಕೈಫಿಯತ್ತುಗಳನ್ನ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದ್ದು, ಹೀಗಾಗಿ ಜಿಲ್ಲೆಯ ಸಂಪೂರ್ಣ ಐತಿಹ್ಯಗಳ ಅಧ್ಯಯನ ಪರಿಪೂರ್ಣಗೊಂಡಿದೆಯೆಂಬ ಮಾತು ನನ್ನದಲ್ಲ, ಇನ್ನು ಈ ನಿಟ್ಟಿನಲ್ಲಿ ಮುಂದುವರೆಯುವವರಿಗೆ ವಿಪುಲವಾದ ಅವಕಾಶವಿದೆಯೆಂದು ಹೇಳಬಹುದು.

ಅನುಬಂಧಗಳು

೧. ನಕ್ಷೆಗಳು

೨. ಪರಾಮರ್ಶನ ಗ್ರಂಥಗಳು

೩. ವಕ್ತೃಗಳ ವಿವರ

೪. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

ಸಂಪುಟಗಳು

* Epigraphia Indica
* Epigraphia Carnatica
* Gazeetteer of Ballary Distric
* South Indian Inscription-vol IX
* ಕನ್ನಡ ನಿಘಂಟು ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಪುಸ್ತಕಗಳು

* ಕಲಬುರ್ಗಿ ಎಂ.ಎಂ.(ಸಂ), ೧೯೯೪, **ಕರ್ನಾಟಕ ಕೈಪಿಯತ್ತುಗಳ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಕೃಷ್ಣ ಎಂ.ಹೆಚ್., ೧೯೫೦, **ಕನ್ನಡ ನಾಡಿನ ಚರಿತ್ರೆ ಭಾಗ-೨,** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
* ಕೊಟ್ರೇಶ್ ಎಂ., ೧೯೯೬, **ಉಚ್ಚಂಗಿದುರ್ಗ (ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಧ್ಯಯನ),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ಕೊಟ್ರೇಶ್ ಎಂ., ೨೦೧೦, **ಹರಪನಹಳ್ಳಿ ತಾಲೂಕಿನ ರಕ್ಷಣಾಸ್ಮಾರಕಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಗಿರಿಜಾ ಟಿ., ೨೦೦೧, **ದಾವಣಗೆರೆ ಇದು ನಮ್ಮ ಜಿಲ್ಲೆ,** ವಿಹಾರಿಕಾ ಪ್ರಕಾಶನ, ದಾವಣಗೆರೆ.
* ಚಂದ್ರಶೇಖರ ಕಂಬಾರ(ಸಂ), ೧೯೮೫, **ಕನ್ನಡ ಜಾನಪದ ವಿಶ್ವಕೋಶ,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
* ಚಿದಾನಂದಮೂರ್ತಿ ಎಂ., ೧೯೬೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನಬುಕ್ ಹೌಸ್ ಬೆಂಗಳೂರು.

* ಚಿದಾನಂದಮೂರ್ತಿ ಎಂ., ೧೯೯೭, **ಕರ್ನಾಟಕ ಸಂಸ್ಕೃತಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

* ಚಿದಾನಂದಮೂರ್ತಿ ಎಂ., ೨೦೦೩, **ಜನ-ಜನಪದ-ಜಾನಪದ,** ಸಪ್ನಬುಕ್ ಹೌಸ್ ಬೆಂಗಳೂರು.

* ಚಿದಾನಂದಮೂರ್ತಿ ಎಂ., ೧೯೯೩, **ಹೊಸತು-ಹೊಸತು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಗಣೇಶ ಕೆ.ಆರ್.(ಪ್ರಸಂ), ೨೦೧೦, **ಗುಣಮಧುರ(ದೇವರಕೊಂಡಾರೆಡ್ಡಿ ಅಭಿನಂದನ ಗ್ರಂಥ),** ದೇವರಕೊಂಡಾರೆಡ್ಡಿ ಅಭಿನಂದನ ಸಮಿತಿ, ಬೆಂಗಳೂರು.

* ನಾಗಯ್ಯ ಜೆ.ಎಂ., ೧೯೯೨, **ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ,** ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ಮಠ, ಬೆಳಗಾವಿ.

* ನೀಲಪ್ಪ ಹೆಚ್., ೨೦೦೨, **ಶ್ರೀರಂಗಧಾಮ ಉಡುಗಿರಿ ಕ್ಷೇತ್ರ ದೇವರಹಳ್ಳಿ,** ವಿಜಯ ಯುವಕ ಸಂಘ ಸಂತೇಬೆನ್ನೂರು.

* ನೇಗಿನಹಾಳ ಎಂ.ಬಿ.(ಸಂ), ೧೯೯೯, **ನೇಗಿನಹಾಳ ಪ್ರಬಂಧಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಪಂಚಮುಖಿ ಆರ್.ಎಸ್. ೧೯೬೭, **ಕರ್ನಾಟಕ ಇತಿಹಾಸ,** ಕರ್ನಾಟಕ ಸಂಶೋಧನಾ ಮಂಡಳಿ ಧಾರವಾಡ.

* ಪರಮಶಿವಯ್ಯ ಜಿ.ಶಂ. ಮತ್ತು ವಿಲಿಯಂ ಮಾಡ್ತ(ಸಂ), ೧೯೮೯, **ಕರ್ನಾಟಕ ಜಾನಪದ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.

* ಪುಟ್ಟಸ್ವಾಮಿ ಬಿ.ಎಸ್., ೨೦೧೨, **ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು,** ಮನೋಜ್ ಪಬ್ಲಿಕೇಷನ್, ಪದ್ಮನಾಭನಗರ, ಬೆಂಗಳೂರು.

* ಪುರುಷೋತ್ತಮ ಬಿಳಿಮಲೆ, ೧೯೯೦, **ಕರಾವಳಿ ಜಾನಪದ,** ಮಂಗಳಗಂಗೋತ್ರಿ ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

* ಪುರುಷೋತ್ತಮ ಬಿಳಿಮಲೆ, ಚೆಲುವರಾಜ(ಸಂ), ೧೯೯೬, **ಹಂಪಿ ಜಾನಪದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಫಿಲಿಯೋಜಾ ವಸುಂಧರಾ, ೧೯೯೨, **ಅಳಿದುಳಿದ ಹಂಪೆ,** ಪ್ರೇಮಸಾಯಿ ಪ್ರಕಾಶನ ಬೆಂಗಳೂರು.
* **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧,** ಬಳ್ಳಾರಿ ಜಿಲ್ಲೆ, ೧೯೯೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಮಂಜುನಾಥ ಬೇವಿನಕಟ್ಟೆ, ೧೯೯೪, **ಜನಪದ ಸಂಸ್ಕೃತಿ,** ತೇಜಸ್ವಿನಿ ಪ್ರಕಾಶನ, ಹ್ಯಾರಡ.
* ಲಕ್ಷ್ಮಣ್ ತೆಲಗಾವಿ(ಸಂ), ೧೯೮೭, **ಹರತಿ ಸಿರಿ,** ಹರ್ತಿಕೋಟೆ, ವಾಲ್ಮೀಕಿ ಸಂಪದ ಚಿತ್ರದುರ್ಗ.
* ಲಕ್ಷ್ಮೀದೇವಿ ಎಲ್, ೨೦೧೧, **ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು,** ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ ಚಿತ್ರದುರ್ಗ.
* ವಸಂತಕುಮಾರ್ ತಾಳ್ತಜೆ, ೧೯೮೮, **ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ,** ವಿನಯಪ್ರಕಾಶನ ಬೆಂಗಳೂರು.
* ವಾಸುದೇವ ಬಡಿಗೇರ, ೨೦೧೨, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ವಾಸುದೇವ ಸಿ.ಎಸ್., ೨೦೦೧, **ಹಂಪಿ ಪರಿಸರದ ಕೆರೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಸದಾಶಿವಪ್ಪ ಕುಂ.ಬಾ, ೧೯೯೦, **ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ದರ್ಶನ,** ಕುಂಚೂರು ಮೂಲತೇಶ ಪ್ರಕಾಶನ.
* ಸದಾಶಿವಪ್ಪ ಕುಂ.ಬಾ., ೧೯೯೬, **ಹರಪನಹಳ್ಳಿ ಪಾಳೆಗಾರರು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಸಂಪದ್ಗಿರಿರಾವ್ ಕೆ., ೧೯೭೦, **ಭಾಷಾಂತರ ಯೋಜನೆ ಸಮಿತಿ, ಕರ್ನಾಟಕ ಪರಂಪರೆ(ಸಂ-೧),** ಮೈಸೂರು ರಾಜ್ಯ ಸರ್ಕಾರ.
* ಸುಮತೀಂದ್ರ ನಾಡಿಗ್, ೨೦೧೦, **ದಾವಣಗೆರೆ ಜಿಲ್ಲೆಯ ಕೆಲವು ಹೆಜ್ಜೆಗಳು,** ವಿಜಯ ಯುವಕರ ಸಂಘ, ಸಂತೇಬೆನ್ನೂರು.
* ಸುಮತೀಂದ್ರ ನಾಡಿಗ್, ೨೦೦೮, **ಸಂತೇಬೆನ್ನೂರು ನಾಯಕರು,** ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.

* ಸೋಮಶೇಖರ ಎಸ್.ವೈ., ೨೦೧೦, **ಸ್ಥಳೀಯ ಪುರಾತತ್ವ ಮಾಲೆ: ಜಗಲೂರು**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಪ್ರಕಟಿತ ಪಿಎಚ್.ಡಿ. ಪ್ರಬಂಧಗಳು

* ಕರಿಬಸಪ್ಪ ಎ, ೨೦೦೩, **ಬಳ್ಳಾರಿ ಜಿಲ್ಲೆಯ ಐತಿಹ್ಯಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ನಾಯಕರ ಹುಲುಗಪ್ಪ, ೨೦೧೦, **ಕನ್ನಡ ಶಾಸನಗಳಲ್ಲಿ ಪುರಾಣ ಪರಿಕಲ್ಪನೆ,** ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಕ್ತೃಗಳ ವಿವರ

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಮಹಾಬಲರಾವ್	೭೫	ಅರ್ಚಕರು	ಚಿಕ್ಕದೇವರಹಳ್ಳಿ
೨.	ಜಗದೀಶ್	೫೫	ದೇವಸ್ಥಾನದ ಸೇವಕ	ದೇವರಹಳ್ಳಿ
೩.	ನೀಲಪ್ಪ ಜಿ.ಕೆ.	೬೫	ವ್ಯಾಪಾರಿ	ದೇವರಹಳ್ಳಿ
೪.	ರುದ್ರಪ್ಪ,	೫೭	ಅರ್ಚಕರು	ಉಚ್ಚಂಗಿದುರ್ಗ
೫.	ಲಕ್ಕಪ್ಪ	೪೮	ತೆಂಗಿನಕಾಯಿ ವ್ಯಾಪಾರಿ	ಉಚ್ಚಂಗಿದುರ್ಗ
೬.	ನವೀನಕುಮಾರ್ ಎಂ.	೪೩	ಶಿಕ್ಷಕರು	ಹರಿಹರ
೭.	ರಾಧ ವಿ.ಬಿ.	೩೫	ವಿದ್ಯಾರ್ಥಿ	ಹರಿಹರ
೮.	ದೇವೇಂದ್ರಪ್ಪ	೬೨	ಪಂಚಾಯ್ತಿ ಅಧ್ಯಕ್ಷರು	ಸಂತೇಬೆನ್ನೂರು
೯.	ದಾಯಪ್ಪ	೭೩	ವ್ಯವಸಾಯ	ಸಂತೇಬೆನ್ನೂರು
೧೦.	ಅಂಬಿಕಾ	೫೧	ಗೃಹಿಣಿ	ಹೊಸಹಳ್ಳಿ(ಸೂಳೆಕೆರೆ)
೧೧.	ಮಂಜುನಾಥ	೨೯	ಅರ್ಚಕ(ವಿದ್ಯಾರ್ಥಿ)	ಹೊಸಹಳ್ಳಿ(ಸೂಳೆಕೆರೆ)
೧೨.	ವಿಜಯಕುಮಾರ	೪೫	ಆಟೋಚಾಲಕ	ಬೆಳಲಗೆರೆ
೧೩.	ಬಸವರಾವ್ ಆರ್.ಎನ್.	೪೧	ವ್ಯವಸಾಯ	ಹೊನ್ನಾಳಿ
೧೪.	ರೂಪ ಕೆ.,	೩೮	ಸಂಶೋಧಕರು	ಹೊನ್ನಾಳಿ
೧೫.	ರಾಜಪ್ಪ	೫೫	ವ್ಯವಹಾರಸ್ಥರು	ಜಗಳೂರು
೧೬.	ಶರಣೇಶ	೪೦	ಸಂಶೋಧಕ	ಜಗಳೂರು
೧೭.	ಮಾಲತೇಶ್	೩೮	ವ್ಯವಸಾಯ	ಬೆಳಲಗೆರೆ
೧೮.	ಲೋಕೇಶ್	೪೫	ಉಪನ್ಯಾಸಕರು	ದಾಗಿನಕಟ್ಟೆ

ಛಾಯಾಚಿತ್ರಗಳು

ಸೂಳೆಕೆರೆ ಅಥವಾ ಶಾಂತಿಸಾಗರ






ಸೂಳೆಕೆರೆಯ ತೂಬು

ಭದ್ರಾ ನೀರಿಗಾಗಿ ನಿರ್ಮಿಸಿದ ನಾಲೆ





ಸೂಳೆಕೆರೆ ನೀರಿನಿಂದ ಮೀನು ಸಾಕಣೆ ಕೊಳಗಳು



ಸಂತೇಬೆನ್ನೂರು ಪುಷ್ಕರಣಿ





ಡಿಸ್ಟ್ರಿಕ್ ಬೋರ್ಡ್ ಮುಸಾಫಿರ್ ಖಾನೆ ಚಿತ್ರಣಗಳು









ದೇವರಹಳ್ಳಿ ರಂಗನಾಥ ದೇವಾಲಯ

ದೇವಾಲಯದ ದ್ವಾರಬಾಗಿಲು




ರಂಗನಾಥ ದೇವಾಲಯ



ದೇವಾಲಯದ ಗೋಪುರ



ರಂಗನಾಥ ದೇವರ ಮೂರ್ತಿ



ದೇವಾಲಯದ ಒಳಭಾಗ



ಲಕ್ಷ್ಮಿದೇವಿ



ಹರಿಹರ ದೇವಾಲಯ ಶಾಸನ

ಹರಿಹರ ದೇವಾಲಯ





ಹರಿಹರ ದೇವಾಲಯದ ಚಿತ್ರಣಗಳು








ಉಚ್ಚಂಗಿದುರ್ಗದ ಶಾಸನ



ಉಚ್ಚಂಗಿದುರ್ಗದ ಉಚ್ಚಂಗಮ್ಮ ದೇವಾಲಯ



ಉಚ್ಚಂಗಿದುರ್ಗದ ಕೋಟೆ



ಹೊಂಡ

